## ಮೂರನೆಯ ಚತುರ್ಮಾಸದ 'ಶರಣ ಸಾಹಿತ್ಯ' ಮುಕ್ತ ಐಚ್ಛಿಕ ಪತ್ರಿಕೆ
## (ಯಾವುದೇ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ)

# ಪತ್ರಿಕೆ 2 – ಶರಣ ಸಾಹಿತ್ಯ : ಮಧ್ಯಕಾಲೀನ ಅಭಿವ್ಯಕ್ತಿ

**[3:1 = 4 ಕ್ರೆಡಿಟ್] [70:30 = 100 ಅಂಕಗಳಿಗಾಗಿ]**

**ಘಟಕ 1 : ಮಧ್ಯಕಾಲೀನ ಶರಣ ಸಾಹಿತ್ಯ :** ಹಿನ್ನೆಲೆ – ಪ್ರೇರಣೆ – ಸ್ವರೂಪ

**ಘಟಕ 2 : ಶರಣ ಕೇಂದ್ರಿತ ಕಾವ್ಯಗಳು :**

1) ಹರಿಹರ ವಿರಚಿತ ಕುಂಬಾರ ಗುಂಡಯ್ಯನ ರಗಳೆ
2) ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರ (ಎರಡನೆಯ ಸಂಧಿ)

**ಘಟಕ 3 :**1) ಚಾಮರಸ ವಿರಚಿತ ಪ್ರಭುಲಿಂಗ ಲೀಲೆ (ಮಾಯೆ ಮತ್ತು ಅಲ್ಲಮರ ಸಂವಾದ ಭಾಗ)
2) ಜನಪದ ಶರಣ ಕಾವ್ಯಗಳು : ಹರಳಯ್ಯನ ಚರಿತ್ರೆ

**ಘಟಕ 4 : ಅ) ಸರ್ವಜ್ಞನ ತ್ರಿಪದಿಗಳು :**

| | |
|---|---|
| 1) ಯಾತರ ಹೂವಾದರು । ನಾತರೆ ಸಾಲದೆ | 2) ಬೊಮ್ಮವನಜಿದೊಡೆ । ಸುಮ್ಮನೆ ಇರಬೇಕು |
| 3) ಸತ್ಯರ ನುಡಿ ತೀರ್ಥ । ಮತ್ತೆ ಜಂಗಮ ತೀರ್ಥ | 4) ಬಲ್ಲವರ ಒಡನಾಡೆ । ಬೆಲ್ಲವನು ಮೆದ್ದಂತೆ |
| 5) ಅನ್ನದೇವರಿಗಿಂತ । ಇನ್ನು ದೇವರು ಇಲ್ಲ | 6) ಸುರಗಿಯ ಮೊನೆ ನಂಜು । ಉರಗನ ಹಲು ನಂಜು |
| 7) ಓದಿದ ಓದೆಲ್ಲ । ಮೇದ ಕಬ್ಬಿನ ಹಿಪ್ಪೆ | 8) ಒಡಲೆಂಬ ಹುತ್ತಕ್ಕೆ । ನುಡಿವ ನಾಲಗೆ ಸರ್ಪ |
| 9) ಜಾತಿ ಹೀನನ ಮನೆಯ । ಜ್ಯೋತಿ ತಾ ಹೀನವೇ | 10) ಮಾತಿಂದ ನಗೆನುಡಿಯು । ಮಾತಿಂದ ಕೊಲೆ ಹಗೆಯು |

**ಆ) ತತ್ತ್ವಪದಕಾರರ ತತ್ತ್ವಪದಗಳು**

| | |
|---|---|
| **ಕಡಕೊಳ ಮಡಿವಾಳಪ್ಪ** | : ಮುಡಚಟ್ಟಿನೊಳು ಬಂದು ಮುಟ್ಟಿ ತಟ್ಟಿ ಅಂತೀರಿ |
| **ಮುಪ್ಪಿನ ಷಡಕ್ಷರಿ** | : ತಿರಕನೊಬ್ಬನೂರಮುಂದೆ |
| **ಕೊಳ್ಳೂರ ಹುಸೇನ ಸಾಹೇಬ** | : ಬಡತನದ ಬಡಿವ್ಯಾರ ನಮ್ಮೂರ |
| **ಶಿಶುನಾಳ ಷರೀಫ್** | : ಸೋರುತಿಹುದು ಮನೆಯ ಮಾಳಿಗೆ |
| **ಮೋಟ್ನಳ್ಳಿ ಹಸನ ಸಾಹೇಬ** | : ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ ಶಿವನೆಲ್ಲಿಲ್ಲಾ? |
| **ಸರ್ಪಭೂಷಣ ಶಿವಯೋಗಿ** | : ಬಿಡು ಬಾಹ್ಯದೊಳು ಡಂಭವ ಮಾನಸದೊಳಗೆಡವಿಡದಿರು |

**ಪರಾಮರ್ಶನ ಸಾಹಿತ್ಯ**


1. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
2. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಹೆಚ್. ತಿಪ್ಪೇರುದ್ರಸ್ವಾಮಿ
3. ಹರಿಹರನ ಕುಂಬಾರ ಗುಂಡಯ್ಯನ ರಗಳೆ – ಹರಿಹರ
4. ಪ್ರಭುಲಿಂಗ ಲೀಲೆ – ಚಾಮರಸ
5. ಸಂಗ್ರಹ ಸಂಕಲನ ಮತ್ತು ಸಂಪಾದನೆಗಳು – ಎಂ.ಎಂ. ಕಲಬುರ್ಗಿ (ಮಾರ್ಗ : 3)
6. ಶರಣರ ಅನುಭಾವ ಸಾಹಿತ್ಯ – ಹೆಚ್. ತಿಪ್ಪೇರುದ್ರಸ್ವಾಮಿ
7. ಸರ್ವಜ್ಞನ ವಚನಗಳು – ಎಲ್.ಬಸವರಾಜು
8. ಕನ್ನಡ ತತ್ತ್ವ ಪದಕಾರರು – ಕರ್ನಾಟಕ ಸಾಹಿತ್ಯ ಅಕಾಡೆಮಿ
9. ಕನ್ನಡ ತತ್ತ್ವ ಪದಕಾರರು – (ಸಂ.) ಪಿ.ಕೆ. ರಾಜಶೇಖರ
10. ಹಲವು ತೋಟದ ಹೂಗಳು – (ಸಂ.) ಕಾಳೇಗೌಡ ನಾಗವಾರ



**(ಪ್ರೊ. ಪ್ರೀತಿ ಶ್ರೀಮಂಧರ್‌ಕುಮಾರ್)**
**ಅಧ್ಯಕ್ಷರು**
**ಶರಣ ಸಾಹಿತ್ಯ ಅಧ್ಯಯನ ಮಂಡಳಿ**

# ಶರಣ ಸಾಹಿತ್ಯ (ಮುಕ್ತ ಐಚ್ಛಿಕ)

## 3ನೇ ಚಾತುರ್ಮಾಸ

## ಪತ್ರಿಕೆ–2 ಶರಣ ಸಾಹಿತ್ಯ : ಮಧ್ಯಕಾಲೀನ ಅಭಿವ್ಯಕ್ತಿ

### ಘಟಕ : 1 ಮಧ್ಯಕಾಲೀನ ಶರಣ ಸಾಹಿತ್ಯ : ಹಿನ್ನೆಲೆ–ಪ್ರೇರಣೆ–ಸ್ವರೂಪ

೧೨ನೆಯ ಶತಮಾನದ ಬಸವಾದಿ ಶರಣರ ಚಳುವಳಿಯ ಪ್ರಭಾವ ಮುಂದಿನ ಕನ್ನಡ ಸಾಹಿತ್ಯದ ದಿಕ್ಕುದೆಸೆಗಳನ್ನು ಸಂಪೂರ್ಣವಾಗಿ ಬದಲಿಸಿತು. ಅದು ನಿರಂತರವಾಗಿ ಇಂದಿನವರೆಗೂ ಮುಂದುವರಿದುಕೊಂಡು ಪ್ರಭಾವಿಸುತ್ತಲೇ ಬಂದಿದೆ. ಅದು ಸಾಹಿತ್ಯದಲ್ಲಿ ವಿನೂತನವಾದ ಹೊಸಯುಗವನ್ನು ಆರಂಭಿಸಿತು.

ಜನಪದಸಾಹಿತ್ಯವನ್ನು ಬಿಟ್ಟರೆ ಆರಂಭದಲ್ಲಿ ಕನ್ನಡ ಸಾಹಿತ್ಯವು ಪಂಡಿತರ ಸೊತ್ತಾಗಿ ಅರಸೊತ್ತಿಗೆಯಲ್ಲಿ ರಾಜಾಶ್ರಯವನ್ನು ಪಡೆದು ವಿಜೃಂಭಿಸುತ್ತಿತ್ತು. ಅದನ್ನು ಜನಸಾಮಾನ್ಯರ ಹೃದಯ ಸಿಂಹಾಸನದಲ್ಲಿ ನೆಲೆಗೊಳಿಸಿ ವಿಜೃಂಭಿಸುವಂತೆ ಮಾಡಿದ ಕೀರ್ತಿ ಶರಣಚಳುವಳಿಯ ವಚನಸಾಹಿತ್ಯದ್ದು. ಅದು ಪಂಡಿತರಲ್ಲಿ ಮಾತ್ರ ಮಾನ್ಯವಾಗಿದ್ದ ಶಿಷ್ಟ ಕನ್ನಡ ಸಾಹಿತ್ಯವು ಜನಸಾಮಾನ್ಯರಲ್ಲಿಯೂ ಮಾನ್ಯವಾಗುವಂತೆ ಮಾಡಿತು; ಅಲ್ಲದೆ ಕಾವ್ಯದ ವಸ್ತು, ರೀತಿ, ಭಾಷೆ, ಗುರಿ, ಪ್ರಯೋಜನ ಎಲ್ಲದರಲ್ಲಿಯೂ ಸಂಪೂರ್ಣ ಬದಲಾವಣೆಯನ್ನು ತಂದಿತು.

ಆವರೆಗೂ ಕಾವ್ಯದ ವಸ್ತುವಾಗಿದ್ದ ರಾಜಮಹಾರಾಜರ, ಪುರಾಣ ಪುರುಷರ ಕತೆಗಳನ್ನು ಈ ಯುಗದಲ್ಲಿ ಕೈಬಿಟ್ಟು, ಆತ್ಮಜ್ಞಾನಿಗಳಾದ ನಮ್ಮೆಲ್ಲರ ನಡುವೆ ಬದುಕಿಬಾಳಿದ ಜನಸಾಮಾನ್ಯರ ಬದುಕಿನ ಭಾವನೆಗಳನ್ನು ಕಾವ್ಯ ವಸ್ತುವನ್ನಾಗಿಸಿದರು. ಅದಕ್ಕನುಗುಣವಾಗಿ ಕಾವ್ಯದ ರೀತಿಯೂ ಕೇವಲ ರಾಜಾಶ್ರಯದ ಪಂಡಿತರಿಗೆ ಮಾತ್ರಾ ಅರ್ಥವಾಗುತ್ತಿದ್ದ ಸಂಸ್ಕೃತಭೂಯಿಷ್ಠ ಹಳೆಗನ್ನಡದ ಮಾರ್ಗಶೈಲಿಯಾದ ಚಂಪೂಶೈಲಿಯನ್ನು ಕೈಬಿಟ್ಟು, ಜನಸಾಮಾನ್ಯರೆಲ್ಲರಿಗೂ ಅತ್ಯಂತ ಸುಲಭವಾಗಿ ಅರ್ಥವಾಗುವಂತಹ ಸರಳವಾದ ಆಡುಭಾಷೆಯಲ್ಲಿ ಅಲ್ಲಲ್ಲಿ ಮಿಂಚುತ್ತಿದ್ದ ವಚನ ಪ್ರಕಾರವನ್ನು ಪ್ರವಾಹದೋಪಾದಿಯಲ್ಲಿ ಬಳಸಿದರು, ಬೆಳೆಸಿದರು, ಅಂತೆಯೇ ಕಾವ್ಯದ ಗುರಿಯೂ ಕೂಡಾ ರಾಜಾಶ್ರಯದ ಪಂಡಿತರನ್ನು ಮೆಚ್ಚಿಸಿ ರಾಜಾಶ್ರಯದ ಸಕಲ ಸೌಲಭ್ಯವನ್ನೂ ಪಡೆದುಕೊಳ್ಳಬೇಕೆಂಬ ಐಹಿಕ ಭೋಗಾಭಿಲಾಷೆಗೆ ಹೊರತಾಗಿ ವ್ಯಕ್ತಿಯು ಜ್ಞಾನಿಯಾಗಿ ಉದ್ಧಾರವಾಗುವುದರ ಸಕಲರನ್ನೂ ತಟ್ಟಿ ಮುಟ್ಟಿ ಅವರ ಬದುಕೂ ಉದ್ಧಾರವಾಗುವಂತೆ ಮಾಡಬೇಕೆನ್ನುವ ಅದರ ಸಾಮಾಜಿಕ ಆಧ್ಯಾತ್ಮಿಕ ಕಳಕಳಿ ಹೆಚ್ಚಾಯಿತು: ಕೇವಲ ತಾನು ಮಾತ್ರಾ ಅಥವಾ ತನ್ನಂತಹ ಕೆಲವರು ಮಾತ್ರಾ ಉದ್ಧಾರವಾಗಬೇಕೆಂಬ ಸಂಕುಚಿತ ದೃಷ್ಟಿಗೆ ಬದಲಾಗಿ ಸಮಾಜದ ಎಲ್ಲರೂ ಉದ್ಧಾರವಾಗಬೇಕೆಂಬ ವಿಶಾಲದೃಷ್ಟಿಯನ್ನು ಬಸವಣ್ಣನವರ ಕಾಲದ ವಚನಚಳುವಳಿ ಅದರಿಂದ ಹುಟ್ಟಿದ ವಚನಸಾಹಿತ್ಯ ಪಡೆದುಕೊಂಡಿತು. ಇಂತಹ ಕ್ರಾಂತಿಕಾರಕವಾದ ೧೨ನೆಯ ಶತಮಾನದ ವಚನ ಚಳುವಳಿ ತನ್ನ ಮುಂದಿನ ಕಾಲಘಟ್ಟದ ಬಸವೋತ್ತರ ಕನ್ನಡ ಸಾಹಿತ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವಿಸಿತು.

೧೨ನೆಯ ಶತಮಾನದ ವಚನಚಳುವಳಿಯ ಹಿನ್ನೆಲೆ, ಪ್ರೇರಣೆ, ಪ್ರಭಾವಗಳಿಂದ ಮುಂದಿನ ಕನ್ನಡ ಸಾಹಿತ್ಯವೂ ತನ್ನ ದಿಕ್ಕುದೆಸೆಗಳನ್ನು ಬದಲಿಸಿಕೊಂಡಿತು. ವಚನಸಾಹಿತ್ಯವು ತನಗಿಂತ ಹಿಂದಿನ ಸಾಹಿತ್ಯಕ್ಕೆ ಯಾವೆಲ್ಲ ರೀತಿಯಲ್ಲಿ ಪ್ರತಿಭಟನೆಗಳನ್ನು ಮಾಡಿ ರೂಪುಗೊಂಡಿತ್ತೋ ಆ ಎಲ್ಲಾ ಅಂಶಗಳನ್ನೂ ಅದರ ಮುಂದಿನ ಸಾಹಿತ್ಯವೂ ತನ್ನಲ್ಲಿ ರೂಪುಗೊಳಿಸಿಕೊಂಡಿತು. ಆದರೆ ಬಹಳ ಮುಖ್ಯವಾದ ಎದ್ದುಕಾಣುವ ಅತಿದೊಡ್ಡ ವ್ಯತ್ಯಾಸವೆಂದರೆ ವಚನ ಪ್ರಕಾರವನ್ನು ಮುಂದುವರಿಸದೇ ಹೋದುದು! ಅದಕ್ಕೆ ಐತಿಹಾಸಿಕ ಸಾಮಾಜಿಕ ಕಾರಣಗಳಿರಬಹುದು. ವಚನ ಸಾಹಿತ್ಯದ ಸಿದ್ಧಿ, ಸಾಧನೆ, ಪರಿಣಾಮಗಳು ಅತ್ಯಂತ ಮಹತ್ವದ್ದಾದರೂ ಅದಕ್ಕೆ ಕಾವ್ಯದ ಪಟ್ಟಿ ಆ ಕಾಲದಲ್ಲಿ ಸಿಕ್ಕಲಿಲ್ಲ. ಗಾತ್ರದಲ್ಲಿ ಕಿರಿದಾದ ಅವುಗಳಲ್ಲಿ ಕಾವ್ಯಗಳ ನಿಡಿದಾದ ವಸ್ತುದ್ರವ್ಯ ಇಲ್ಲ. ವಚನಗಳ ಸೀಮಿತ ಶಕ್ತಿಯನ್ನರಿತ ಮಹಾಕವಿ ಹರಿಹರ ಆ ಸಮೃದ್ಧ ಸಾಹಿತ್ಯದ ಕಸುವನ್ನು ಹೀರಿ ಸಂಪುಷ್ಟವಾಗಿ ಬೆಳೆದನು. ಹೀಗೆ ವಚನಸಾಹಿತ್ಯದ ಉಳಿದೆಲ್ಲಾ ಆಶಯಗಳನ್ನು ಅಷ್ಟೇ ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋದುದನ್ನು ಬಸವೋತ್ತರ ಕಾಲದ ಕನ್ನಡ ಸಾಹಿತ್ಯದಲ್ಲಿ ಕಾಣುತ್ತೇವೆ. ಕಾವ್ಯದ ವಸ್ತು, ರೀತಿ, ಭಾಷೆ, ಗುರಿ, ಪ್ರಯೋಜನಗಳ ಹಿನ್ನೆಲೆಯಲ್ಲಿ ಬಸವೋತ್ತರ ಕನ್ನಡ ಸಾಹಿತ್ಯವು ಬಸವಯುಗದ ಸಾಹಿತ್ಯದ ಆಶೋತ್ತರಗಳಿಗನುಗುಣವಾಗಿಯೇ ಮುಂದುವರಿದುದನ್ನು ಕಾಣುತ್ತೇವೆ. ಹಿಂದಿನ ಚಂಪೂಶೈಲಿಯನ್ನು ಪೂರ್ಣವಾಗಿ ಬಿಟ್ಟರು; ಆದರೆ ಹಿಂದಿನ ವಚನ ಪ್ರಕಾರವನ್ನು ಕೈಬಿಟ್ಟರೂ ಅದರ ವಸ್ತು, ರೀತಿ, ಭಾಷೆ, ಗುರಿ, ಪ್ರಯೋಜನಗಳನ್ನು ಮಾತ್ರಾ ಕೈಬಿಡದೆ ಮುಂದುವರಿಸಿದರು. ಮಾರ್ಗದ ಚಂಪೂ ಶೈಲಿಗೆ ಬದಲಾಗಿ ಶರಣಕ್ರಾಂತಿಯ ಹಿನ್ನೆಲೆಯಲ್ಲಿ ವಚನ ಪ್ರಕಾರವನ್ನೂ ಅನುಸರಿಸದೇ ಹೋದರೂ ಜನಸಾಮಾನ್ಯರೆಲ್ಲರಿಗೂ ಅರ್ಥವಾಗುವ ಸರಳವಾದ ಸುಲಭವಾದ ಆಡುಭಾಷೆಯನ್ನೇ ಕಾವ್ಯ ಮಾಧ್ಯಮವನ್ನಾಗಿ ಮಾಡಿಕೊಂಡರು. ಅದರ ಫಲವಾಗಿ ಜನಸಾಮಾನ್ಯರಲ್ಲಿ, ಜನಪದಸಾಹಿತ್ಯದಲ್ಲಿ ಬಳಕೆಯಲ್ಲಿದ್ದ' ಕರ್ನಾಟಕ ವಿಷಯ ಜಾತಿಗಳನ್ನು ಷಟ್ಪದಿ, ತ್ರಿಪದಿ, ಏಳೆ, ಸಾಂಗತ್ಯ, ಅಕ್ಕರವೇ ಮೊದಲಾದ ಪದಗಳು, ಸ್ವರವಚನಗಳು ಮತ್ತು ದೇಸೀ ಛಂದೋಬಂಧಗಳನ್ನು ಅನುಸರಿಸಿದರು. ಇದರಿಂದ ಅರಸ ಆಸ್ಥಾನದ ಪಂಡಿತಮಾನ್ಯ ಸಾಹಿತ್ಯವಾಗಿದ್ದದ್ದು, ಜನಸಾಮಾನ್ಯರ ಹೃದಯಸಿಂಹಾಸನದ ಜನಮಾನ್ಯ ಭಗವದ್ ಮಾನ್ಯ ಆತ್ಮೋದ್ಧಾರದ ಸಮಾಜೋದ್ಧಾರದ ಸಾಹಿತ್ಯವಾಯಿತು.

ಹೀಗೆ ಬಸವೋತ್ತರ ಕನ್ನಡಸಾಹಿತ್ಯದ ಮೇಲೆ ಅದರ ಹಿಂದಿನ ವಚನ ಸಾಹಿತ್ಯದ ಪ್ರಭಾವವು ದಟ್ಟವಾಗಿದೆ. ಅದು ಒಂದಲ್ಲ ಒಂದು ರೀತಿಯಲ್ಲಿ ಈವತ್ತಿನ ತನಕವೂ ಮುಂದುವರಿದುಕೊಂಡೇ ಬರುತ್ತಿದೆ. ವಚನಸಾಹಿತ್ಯದ ಆಶಯಗಳು ದೇಸೀ ಛಂದಸ್ಸುಗಳಲ್ಲಿ ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಹರಿಹರ, ರಾಘವಾಂಕ, ಚಾಮರಸ, ಸರ್ವಜ್ಞ, ಮುಪ್ಪಿನ ಷಡಕ್ಷರಿ, ಕಡಕೋಳಮಡಿವಾಳಪ್ಪ ಮುಂತಾದವರಿಗೆ ಸಲ್ಲುತ್ತದೆ. ಇವರೆಲ್ಲರೂ ಕೇವಲ ಕವಿಗಳಲ್ಲ; ಇವರೆಲ್ಲರೂ ವಚನಕಾರರಂತೆಯೇ ಸಾಧಕರು, ತತ್ವಜ್ಞಾನಿಗಳು, ಅನುಭಾವಿಗಳು ಆಗಿದ್ದಾರೆ.

**ಘಟಕ 2 : ಶರಣ ಕೇಂದ್ರಿತ ಕಾವ್ಯಗಳು :**

**1) ಹರಿಹರ ವಿರಚಿತ ಕುಂಬಾರ ಗುಂಡಯ್ಯನ ರಗಳೆ**

ಅಂಡಲೆವ ಮಾಯೆಯಂ ಬೆಂ

ಕೊಂಡನನಂತರ್ಮುಖ್ಯೈಕ ಪೂಜೆಯನೊಲವಿಂ।
ಕಂಡನನಿಳಿಯೊಳ್ಕುಂಬರ
ಗುಂಡನನುರೆ ಮೆರೆದ ನಮ್ಮ ಹಂಪೆಯ ರಾಯಂ॥

ಎಂತೆನಲುತ್ತರಭಾಗದೊಳಿರ್ಪುದು
ಸಂತತ ಬಲ್ಲುಕೆಪುರವೆನಿಸಿರ್ಪುದು
ಅಲ್ಲಿರ್ಪಂ ಶಶಿಮೌಳಿಯ ಶರಣಂ
ಸಲ್ಲಲಿತಂ ಮಾಯನಿರುಹಣಂ
ಘಟಕಾಯಕವಾಯತವಾಗಿರ್ಪುದು
ನಿಟಿಲಾಕ್ಷನ ನಟನೆಗೆ ನಲಿವಪ್ಪುದು
ನಾಮಂ ಕುಂಬರ ಗುಂಡನೆನಿಪುದು
ಸೋಮಧರನ ಕಿವಿಗಿನಿದಾಗಿರ್ಪುದು
ನೇಮಸ್ಯಂ ನೇಮಸ್ಥಂ ಶಿವ ಶಿವ
ಭೂಮಿಯೊಳುತ್ತಮ ಭಕ್ತಂ ಶಿವಶಿವ
ಮಾಡುವ ಕಾಯಕವದನೇನೆಂಬೆ
ನೋಡುವಡೆನಗಕರಿದಿನ್ನೆಂತೆಂಬೆಂ

ಆಧಾರವೆಯಾಧಾರಮದಾಗಿರೆ
ವೇಧೆಯೆ ಚಕ್ರದ ಮೊಳೆ ತಾನಾಗಿರೆ
ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿಪ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ಮೃತ್ತಿಕೆಯಾಗಿರೆ
ನೆನೆಹಂ ಚಟೆದಾರಂಗಳವಾಗಿರೆ
ನಿಷ್ಠೆಯೆ ಪಿಡಿವುರುದಂಡಮದಾಗಿರೆ
ಮುಟ್ಟಿ ತಿರುಗುವುದು ಜೀವನಮಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂ ದಾಹಿಸಿ
ಆನಂದಜಲಪ್ಲಾವನಮಾಗಿರೆ
ನಾನಾ ಭಕ್ತಿ ಕಟಾಹಮದಾಗಿರೆ
ಶಿವಕಾರುಣ್ಯಾಂಬುಗಳಿಂ ತೀವುತೆ
ಶಿವಭಕ್ತರ್ಗಾನಂದದೊಳೀವುತೆ
ಇಂತೊಳಗಣ ಘಟಕಾಯಕವೊಪ್ಪಲು
ಸಂತತ ಹೊರಗಣ ಮಾಟಮದೊಪ್ಪಲು
ಕುಂಬರನೆನಿಸಿರ್ಪಂ ಗುಂಡಯ್ಯಂ
ತ್ರ್ಯಂಬಕನಾಜ್ಞೆಯನೊಳಕೊಂಡಯ್ಯಂ

ಆಗಿರುತೊಂದೆವಸಂ ನಡೆತಂದಂ

ನಾಗಭರಣನಾಲಯಕ್ಕೈತಂದಂ
ಶಿವನಿರ್ದಂ ಸಿಂಗರದೋಜೆಗಳಿಂ

ಶಿವಪೂಜೆಯನಚ್ಚರಿ ಮಿಗೆನೋಡುತೆ
ಭವಪೂಜೆಯನಕ್ಷಿಗಳಿಂ ಸವಿವುತೆ
ಪೂಜೆಗಳಕ್ಷಿಗಳೊಳ್ಬರೆದಂತಿರೆ
ಪೂಜೆಗಳಂತಸ್ಥಳದೊಳಗೆರಗಿರೆ
ನೋಡುತೆ ನೋಡುತೆ ನೊಡುತ್ತಿರ್ದಂ
ನೋಡಿದ ನೋಟದೊಳೆವೆ ಮರೆದಿರ್ದಂ
ಕಿರಿದುಂ ಪೊತ್ತಂತಿರುತಂ ಮೆಲ್ಲನೆ
ಕರೆಗೊರಲನ ಹತ್ತಿರೆ ಸಾರ್ದೊಯ್ಯನೆ
ಜಳಪೂರಿತ ಲೋಚನದಿಂ ನೋಡುತೆ
ಪುಳಕಿಸುತಂ ಪರಿಸನಮಂ ಮಾಡುತೆ
ಪಾದೋದಕಮಂ ಪ್ರಿಯದಿಂ ಕೊಳುತಂ
ಆದರದಿಂ ಕರುಣಮನೊಳಕೊಳುತಂ
ಪೊಡಮಡುತೊಯ್ಯನೆ ಪೊಡಮಡುವಾಗಳು
ಮೃಡನಂ ಬೀಳ್ಕೊಂಡೆಯ್ತಪ್ಪಾಗಲು
ಮನದೊಳ್ಕಣ್ಣೊಳ್ ಪೂಜಾಭಾವಂ
ನೆನಹಿನಲೊಪ್ಪುವ ಶಂಕರ ಭಾವಂ
ಬಿಡದಿರೆ ತನ್ನಯ ಮನೆಗೆಯ್ತಂದಂ
ಕಡುನಿಷ್ಠೆಯ ಭರದಿಂದ್ಯೆತಂದಂ
ಊಟಂ ನಿದ್ರೆಗೆ ಮನವಿಲ್ಲಿಲ್ಲಂ
ನೋಟಂ ನುಡಿಗೆಡೆಯಿಲ್ಲೆಡೆಯಿಲ್ಲಂ
ಶಿವಪೂಜೆಯ ಕರಡಿಗೆಯಂತಿರ್ದಂ
ಶಿವಪೂಜೆಯ ಗವಸಣಿಗೆಯೊಲಿರ್ದಂ

ಇರುತೊಂದೇ ಸೊಗಯಿಸುತಿರೆ ನೋಡುತೆ
ಚರಿತದೆ ಘಟಕಾಯಕಮಂ ಮಾಡುತೆ
ಪಿಡಿಗುಂಡಂ ತಳದೊಳಗಳವಡಿಸುತೆ
ಎಡಗೈಯಂ ಪೊಸಕೊಂಡನೊಳಗಿರಿಸುತೆ
ಕಲುವಲಗೆಯನಂತಳವಡೆ ಪಿಡಿವುತೆ
ಚೆಲುವೆನಿಸುವ ಪೊಸಘಟಮಂ ಮಾಡುತೆ
ಬಾರಿಸುವಿಚ್ಚೆಗೆ ತನುವಲ್ಲಾಡಲು
ಸೇರಿಸುತೊಳಗಣ ಲಿಂಗಮದಾಡಲು
ಹೆಚ್ಚಿದನುಬ್ಬಿದನುತ್ತಮ ಭಕ್ತಂ
ಮಚ್ಚಿದನಾಡಿಸುವದನಾ ಭಕ್ತಂ
ಅಂತಃಸ್ಥಳದೊಳ್ಕಂಡಂ ಗುಂಡಂ
ಸಂತೋಷವನೊಳಕೊಂಡಂ ಗುಂಡಂ
ಇರುಳೆಲ್ಲಂ ನಿಲ್ಲದೆ ಬಾರಿಸುತಿರೆ

ಕರಣದೊಳಗೆ ಹರನೊಲಿದಾಡುತ್ತಿರೆ
ಮತ್ತಂ ಮತ್ತಂ ಹಿಂಗದೆ ಪೊಂಗುತೆ
ಸುತ್ತಂ ಸುಳಿವುತ್ತುರ್ಬುತೆ ಕೊರ್ಬುತೆ
ಬಾರಿಪ ಕೈ ಮುಚ್ಚಿದ ಕಣ್ಣೊಪ್ಪಿರೆ
ತೀರದ ಪುಳಕಂ ಮೈಯ್ಯೊಳ್ತಳ್ತಿರೆ
ನೆನೆದಂದಂ ಮಡಕೆಗಳಾಗುತ್ತಿರೆ
ಮನದಂದದೆ ಶಿವನೊಳಗಾಡುತ್ತಿರೆ
ಒಳಗಣ ಶಿವನಾಟಕ್ಕೆಡಮಾಡುತೆ
ಬೆಳಗಪ್ಪನ್ನಂ ಬಾರಿಸಿ ನೋಡುತೆ
ಇದು ನೇಮಂ ಇದು ನೇಮವೆನುತ್ತಂ
ಮುದದಿಂದಾಡಿಸುತಿರ್ಪನೆನುತ್ತಂ
ಶಿವನಾಟದ ಸವಿಗಂಡಂ ಗುಂಡಂ
ಭವನಂ ನೆರೆ ಬೆಂಕೊಂಡಂ ಗುಂಡಂ
ಉದಯದ ನೇಮಕೆ ಮತ್ತೈತಂದಂ
ಸದಮಳ ಹೃತ್ಕಮಳಂ ನಡೆತಂದಂ
ಬಂದು ಶಿವಾಲಯದೊಳಗಂ ಪೊಗುತಿರೆ
ಇಂದುಧರಂ ಬೇರಂದದೊಳಿರುತಿರೆ
ಪರಮಂ ಮುನ್ನಿನ ಪೂಜೆಯದಲ್ಲದೆ
ಇರೆ ಹೊಸಪೂಜೆ ಮನಂಗೊಂಬಂದವೆ
ಆ ಪೂಜೆಯನೆಡೆಗೊಂಡಂ ಮನದೊಳು
ತಾಪತ್ರಯರಹಿತಂ ಸನ್ಮನದೊಳು
ನೇಮಂ ಮಾಡಿಯೆ ತಿರುಗಿದನಾಗಳು
ಸೋಮಧರನನೊಳಗಿರಿಸುತ್ತಾಗಳು

ಬಂದೆಂದಿನ ತೆರದಿಂ ಮಾಡುತ್ತಿರೆ
ಸಂದೊಪ್ಪುವ ಘಟಕಾಯದಿಂದಿರೆ
ನೇಮದ ಪೂಜೆಗಳೊಳಗಳವಡುತಿರೆ
ಕಾಮಹರಂ ನಲಿ ನಲಿದಾಡುತ್ತಿರೆ
ತಟಪಟ ತಂದಣ ದಿಂಧಿಮಿಕೆನಿಸುವ
ತಟಕಂ ದಟ ಧಿಕ್ಕಟ ತಟಕೆನಿಸುವ
ಹಲಗೆಯ ಶಬ್ದಂ ಕರಡೆಯ ಶಬ್ದಂ
ಹಲಗೆಯ ಶಬ್ದಂ ಮುರಜದ ಶಬ್ದಂ
ಮಡಕೆಯ ದನಿಯಾವುಜದ ಸುನಾದಂ
ಮಡಕೆಯ ದನಿ ಪೊಸ ಕಹಳೆಯ ನಾದಂ
ತಾಳಂ ಕೌಸಾಳದ ಹೊಸನಾದಂ
ಶೂಲಿಗೆ ಮೇಳವಣೆಯ ಮೃದುನಾದಂ
ತಾನಾಗಿರೆ ಮಧುರತೆಯಂ ಬೀರುತೆ
ನಾನಾವಿಧ ನವಗತಿಯಂ ತೋರುತೆ
ಹೊರಗಲ್ಲಾಡಲು ಶಿವನೊಳಗಾಡಲು

ತೆರಹಿಲ್ಲದ ಪುಳಕಂಗಳ್ಮೂಡಲು ೧೧೦
ಬಂದರನರಿಯದೆ ಹೋದರನರಿಯದೆ
ನಿಂದರನರಿಯದೆ ನೆರೆದರನರಿಯದೆ
ಊಟವನರಿಯದೆ ನಿದ್ರೆಯನರಿಯದೆ
ತೂಗಾಡುತೆ ಮಡಕೆಗಳಂ ಬಾರಿಸಿ
ಜೋಗಂಬೋಗುತ್ತಂ ನೆರೆ ಬಾರಿಸಿ
ಅಡ್ಡಂ ತಿಗಟಂಬರಿವುತೆ ಬಾರಿಸಿ
ಅಡ್ಡಂ ಬಿತ್ತರಿಸುತ್ತಂ ಬಾರಿಸಿ
ಕುಣಿವುತೆ ಕೂಗುತೆ ನಲವಿಂ ಬಾರಿಸಿ
ಮಣಿವುತೆ ತಣಿವುತೆ ಮುದದಿಂ ಬಾರಿಸಿ
ಒಳಗಣ ಶಿವನಂ ನೆರೆ ಸಾಗಿಸುತಂ
ಬೆಳಗುವ ಬೆಳಗಂ ನೆರೆ ಜೋಗಿಸುತಂ
ನೃತ್ಯದ ನೆಲೆಯೊಳ್ಮನವೆರಗುತ್ತಂ
ಸತ್ಯದ ಸುಖದೊಳ್ಮುಳುಗಾಡುತ್ತಂ
ಬಾರಿಸಿ ಬಾರಿಸಿ ನಿಲುತಂ ನಿಲುತಂ
ಸೇರಿದ ಸುಖದೊಳ್ಸಲುತಂ ಸಲುತಂ
ಪಲವುಂ ದಿವಸಂ ಸಲೆ ಬಾರಿಸುತಿರೆ
ಒಲವಿಂ ಸರ್ವೇಶನನಾಡಿಸುತಿರೆ
ನಂಬಿದ ಭಕ್ತನನರಿಯದುದೆಲ್ಲಂ
ಕುಂಬರನೆಂದಿಪ್ಪುದು ಜಗವೆಲ್ಲಂ
ಇರುತೊಂದೆವಸಂ ಘಟಕಾಯಕದೊಳು
ಪರಮನನಾಡಿಸುತಿರ್ಪವಸರದೊಳು
ತನ್ನಂ ಮರೆದೊಲವಿಂ ಬಾರಿಸುತಿರೆ
ಭಿನ್ನಂದೊರೆದಾ ಸುಖಿ ಬಾರಿಸುತಿರೆ
ಬಾರಿಪ ದನಿಗೀಶಂ ಹಾರೈಸುತೆ
ಕಾರುಣ್ಯಾಂಬುಧಿ ತನ್ನಂ ಮರೆವುತೆ
ಕೈಳಾಸದೊಲೆಸೆವೊಡ್ಡೋಲಗದೊಳು
ಶೈಳಜೆ ಕೆಲದೊಳಗಿಪ್ಪವಸರದೊಳು
ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಮಂ ಮರೆವುತೆ
ಶಿವಪದದಂದುಗೆ ಘಲಘಲಕೆಂದೆನೆ
ನವ ಕಟಕಧ್ವನಿ ಝುಂ ಝುಣಕೆಂದೆನೆ
ಮರ್ತ್ಯದ ಧನಿ ಕೈಲಾಸದ ನೃತ್ಯಂ
ದೇವನ ಭಕ್ತನೊಳೆಡೆದೆರಹಿಲ್ಲದೆ
ತಾವರೆ ನಾಳದ ನೂಲಿರ್ಪಂದದೆ
ಮಸಗುತ್ತಿರೆಯಿರೆ ಗಿರಿಸುತೆ ಕಾಣುತೆ
ಹೊಸಪರಿ ಕರುಣಿಪುದೆನುತಂ ಕೇಳುತೆ

ಇರೆ ಭೋಂಕನೆ ಶಿವನೆಚ್ಚತ್ತೆಂದಂ
ಹರುಷಂ ಮಿಗೆ ಗಿರಿಜೆಗೆ ತಾನೆಂದಂ
ಗುಂಡನ ಹೃದಯದೊಳಾಡುತ್ತಿರ್ದೆಂ
ತಂಡದ ಸುಖದೊಳ್ಮೂಡುತ್ತಿರ್ದೆಂ
ಇರುತಂ ಸ್ಥಾನದ ಭೇದಮನರಿಯದೆ
ಸುರನರಲೋಕದ ವಿವರಣೆಯರಿಯದೆ
ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ
ಸಲ್ಲೀಲೆಯೊಳೆನ್ನಂ ಮರೆದಿರ್ದೆಂ
ಎಂದು ಬೆಸಸೆ ಗಿರಿಸುತೆ ಬೆರಗಾದಳು
ಇಂದುಧರಂಗೊಲವಿಂ ತಾನೆಂದಳು
ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮಂ ಮೆಚ್ಚಿಪ ಶರಣನದಾವಂ
ದೇವಾ ಎನಗಿದು ಕೌತುಕವೆಂದನೆ
ದೇವಾ ಮರ್ತ್ಯದೊಳಿಂತಿದು ಪೊಸತೆನೆ
ನಡೆ ತೋರಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಟ್ಯದ ಫಲವಂ

ಎಂದಿರ್ವರುವೊಂದಾಗಿ ಬರುತ್ತಂ
ಬಂದೀ ಮರ್ತ್ಯದೊಳವತರಿಸುತ್ತಂ
ಗಗನದೊಳಂಬಿಕೆಯಂ ಸ್ಥೈತಿರಿಸುತೆ
ಜಗದೀಶಂ ಸುಖಮಂ ಹಾರೈಸುತೆ
ಗುಂಡನ ನಿಳಯದ ಮುಂದಂ ನಿಂದಿರೆ
ಗುಂಡಯ್ಯಂ ಸುಖದಿಂ ಬಾರಿಸುತಿದೆ
ಒಳಗಣ ಸುಖದಿಂ ಹೊರಗಲ್ಲಾಡದೆ
ಪುಳಕಿಸುತಂ ಬಾರಿಸುತಂ ಮಾಣದೆ
ಕಂಡಭವಂ ಕಡುನಿಷ್ಠೆಗೆ ಮೆಚ್ಚುತೆ
ಗುಂಡಯ್ಯನನೆಚ್ಚರಿಸಲ್ಬಗೆವುತೆ
ಒಳಗಾಡುವ ಲಿಂಗವನಾಕರುಷಿಸಿ
ಒಳಗಣ ಲಿಂಗವ ಶಿವನೊಳ್ ಮೇಳಿಸಿ
ಲಿಂಗದೊಡನೆ ಕಣ್ದೆರೆದಂ ಗುಂಡಂ
ಹಿಂಗದೆ ಹೊರಗಣ ಶಿವನಂ ಕಂಡಂ
ಕೊಬ್ಬಿದನುಬ್ಬಿದನುಲಿದಾಳೆರ್ದಂ
ಸರ್ಬಸುಖಂಗಳ್ಗಲೆ ಬರುತಿರ್ದಂ
ಕುಣಿದಾಡುತೆ ಮಡಕೆಗಳಂ ಬಾರಿಸಿ
ಕುಣಿದಾಡುತೆ ಕುಡಿಕೆಗಳಂ ಬಾರಿಸಿ
ಶಿವನಂ ಸುತ್ತಿಬರುತ್ತಂ ಬಾರಿಸಿ
ಭವನಂ ಬಲವಂದೊಳವಿಂ ಬಾರಿಸಿ
ಕುಣಿವುತೆ ಕೊರಲೆತ್ತುತೆ ನೆರೆ ತೂಗುತೆ
ಮಣಿವುತೆ ತೂಗಾಡುತೆ ಸುಖಿಯಾಗುತೆ

ಕೊಂಕುತೆ ಬಂಕುತೆ ಹಾರೈಸುತ್ತಂ
ಬಿಂಕಂಬೆತ್ತುಬುಬೆಂದಾಡುತ್ತಂ
ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ
ಸುಖದಾಟಂ ತನ್ನಂ ಬೆಂಬತ್ತಲು
ಸುಖಮುಖದಿಂದಂ ಮನಮಂ ಸುತ್ತಲು
ಒಳಗಾಡಿದೆನಿನಿತುಂ ದಿನವೆನುತುಂ
ಇಳೆಯರಿಯಲ್ಪೊರಗಾಡುವೆನೆನುತುಂ
ದಶಭುಜಮಂ ದಿಗುತಟದೊಳು ಪಸರಿಸಿ
ಎಸೆವ ಕರಂಗಳನೆತ್ತಂ ನೆಮ್ಮಿಸಿ
ಒಂದು ಪದಂ ಪಾತಾಳವನೊತ್ತಲು
ಒಂದು ಪದಂ ಬ್ರಹ್ಮಾಂಡವನೆತ್ತಲು
ಜೆಡಗಳ್ ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿಕಳೆಯಲ್ಲಾಡುತ್ತಿರೆ
ಕಡು ಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಢಂಢಂಢಣಲೆನೆ
ತಿಸುಳದ ಹರಿಯವತಾರಂ ತಿರ್ರನೆ
ತಿರುಗುತ್ತಿರೆಯಹಿಗಳು ಹೆಡೆಯೆತ್ತಲು
ಕರಿ ತೊವಲುಂ ನಭವಂ ಬೋಹರಿಸಲು
ಸರಿಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ
ಪೊಂಗೆಜ್ಜೆಗಳ ರವಂ ಘಲ ಘಲಕೆನೆ
ತೊಂಗಲ ಘಂಟೆ ಢಣಂ ಢಂ ಢಣಲೆನೆ
ಆಡಿದನಾಡಿದನಾಹಾ ಶಂಕರ
ನಾಡಿದನಾ ಗುಂಡನ ಮುಂದೀಶ್ವರ
ನಾಗಳ್ ಸುರಲೋಕದ ವಾದ್ಯಂ ಬರೆ
ಬೇಗದಿ ತುಂಬುರರುಗ್ಘಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ
ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಇರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವ ಸ್ಥಾವರ ಜಂಗಮವಾಡಲು
ಮಡಕೆಯ ಶಬ್ದಕ್ಕಾಡುತ್ತಿರ್ದಂ
ಮೃಡನಖಿಳಂ ಬೆರಸಾಡುತ್ತಿರ್ದಂ
ನಾನಾ ಮುಖದಾನಂದಂ ಪುಟ್ಟಲು
ನಾನಾ ರವವಂಬರಮಂ ಮುಟ್ಟಲು
ಗಿರಿಸುತೆ ಕಂಡತಿ ಚೋದ್ಯವೆನುತ್ತಂ

ನರಲೋಕಂ ಕೆಡಲಾಗದೆನುತ್ತಂ
ಮೀರಿದಡರಿದೀಶನ ಪರಿಯೆನುತಂ
ಮೀರಿದ ಮುನ್ನಂ ಮಾಣಿಪೆನೆನುತಂ
ದೇವ ಸದಾಶಿವ ಶಾಂತಪ್ರಭುವೆ
ದೇವ ಸುಧಾಕರಧರ ಮನುವಿಭುವೆ

ದೇವ ಕೃಪಾಕರ ಶಂಕರ ಶಂಕರ
ದೇವನತಜ್ಜನ ವರದಾಭಯಕರ
ಕರುಣಿಸನಂತ ವಿಭೂಷವಿಭೂಷಿತ
ಕರುಣಾಕರ ಸಜ್ಜನವರಪೋಷಿತ
ಕರುಣಿಸು ಶೂಲಧರ ಪ್ರತಿಶೂನ್ಯನೆ
ಕರುಣಿಸು ಶಿವಭಕ್ತಾಳಿಗನನ್ಯನೆ
ಭರ್ಗನೆ ಭೀಮನೆ ಭಾಳೇಕ್ಷಣನೆ
ದುರ್ಗತ್ರಯಕಾನನ ಹುತವಹನೆ
ಕರುಣಿಸೆನುತ್ತಂ ಗಿರಿಸುತೆ ಹೊಗಲಲು

ಕರುಣಾರವವಂಬಿಕೆಯೊಳ್ ನೆಗಳಲು
ಕೇಳುತೆ ಮೆಲ್ಲನೆ ನಾಟ್ಯವನುಡುಗುತೆ
ಶೈಲಜೆಯಿಚ್ಛೆಗೆ ಸಮತೆಗೆ ಸೇರುತೆ
ಆಡುವ ಗಣಕುಲಮಂ ಸೈತಿರಿಸುತೆ
ನೋಡುವ ಪಾರ್ವತಿಗಭಯವನೀವುತೆ
ಕುಣಿದಾಡುವ ಗುಂಡಯ್ಯನನೀಕ್ಷಿಸಿ
ತ್ರಿಣಯ ಸದಾನಂದದೊಳಾಲಿಂಗಿಸಿ
ಬಂದು ವಿಮೂರ್ಧ್ನಿಘ್ರಾಣಂ ಮಾಡುತೆ
ಇಂದುಧರಂ ಸಂತೋಷದೊಳಾಡುತೆ
ಭುಜಗಾಭರಣಂ ಕರುಣಂ ಮಾಡುತೆ
ಅಜಶಿರಕರ ಸಂತೋಷಂ ಮಾಡುತೆ
ಜಲಪೂರಿತ ಲೋಚನದಿಂ ನೋಡುತೆ
ನಳನಳಿಪಂಗದಿ ಬಿಗಿ ಬಿಗಿದಪ್ಪುತೆ
ಹೊಸ ಪುಷ್ಪಕದೊಳು ಹರುಷದೊಳೇರಿಸೆ
ಪಶುಪತಿ ದೇವಗಣಾಳಿಗೆ ತೋರಿಸೆ

ತರದಿಂ ಸೂಸುವ ಹೊಸ ಹೂಮಳೆಯೊಳ್
ನೆರೆದು ವಿರಾಜಿಪ ಮುರಜದ ದನಿಯೊಳ್
ನೆಗೆದಂ ಗಗನತಳಕ್ಕೆ ಮಹೇಶಂ
ಬಗೆಮಿಗೆ ನಡೆತಂದಂ ಗಿರಿಜೇಶಂ
ನಲವಿಂ ಕಲಧೌತಾದ್ರಿಯೊಳೊಪ್ಪುವ
ನಿಳಯದೊಳನುಪಮ ಕಾಂತಿಯೊಳೊಪ್ಪುವ
ಭದ್ರಾಸನಮಂ ಮೇಳೈಸುತ್ತಂ

ಜಗವೆಲ್ಲವನೊಳಿದಾಡಿಸುವೆನ್ನಂ
ಸೊಗಯಿಪ ತನ್ನ ಸುನಾದಕ್ಕೆನ್ನಂ
ಮಡಕೆಯ ದನಿಗಾಡಿಸಿದವರುಂಟೆ
ಪೊಡವಿಯೊಳಿಂತಪ್ಪುನ್ನತರುಂಟೆ
ಎಂದನವರತಂ ಕೊಂಡಾಡುತ್ತಂ
ಇಂದುಧರಂ ನೆರೆ ಮುಂಡಾಡುತ್ತಂ
ಗಣಪದಮಂ ಗುಂಡಯ್ಯಂಗೀವುತೆ
ಗಣಸಂಕುಳದೊಳು ಸುಖದಿಂದೋವುತೆ ೨೭೦
ಹರನೊಪ್ಪಿದ ಪುರಹರನೊಪ್ಪಿರ್ದಂ
ಗಿರಿಜಾಪತಿಯೊಪ್ಪಿದನೊಪ್ಪಿರ್ದಂ
ಭಕ್ತರ ಭಾಗ್ಯದ ನಿಧಿಯೊಪ್ಪಿರ್ದಂ
ಭಕ್ತರ ಕಣ್ಣಿಂ ಗತಿಯೊಪ್ಪಿರ್ದಂ
ಶರಣರ ಸಂಗದ ಸುಖಿಯೊಪ್ಪಿರ್ದಂ
ಹರಿಯಜರರಿಯದ ಶಿವನೊಪ್ಪಿರ್ದಂ
ಹಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ ೨೭೮

ಖಂಡಶಶಿಮೌಳಿ ಕುಂಬರ
ಗುಂಡನ ಸುತನೆಂದು ಭಕ್ತಿಯಂ ಕುಡುಗೆನಗು ।
ದ್ದಂಡತರ ದಂಡಧರ ಹರ
ಮಂಡಿತನಯನಂ ಪುರಾರಿ ಹಂಪೆಯ ರಾಯಂ ॥

**ಕವಿ – ಕಾವ್ಯ ವಿಚಾರ :**

ವಚನ ಚಳುವಳಿಯ ನಂತರ ಹೊರಹೊಮ್ಮಿದ ಮೊಟ್ಟಮೊದಲ ಕವಿ ಹರಿಹರ. ಈತನನ್ನು ಕ್ರಾಂತಿಕಾರಿಕವಿ, ಶಿವಕವಿ, ಭಕ್ತಕವಿ, ಶಕ್ತಕವಿ, ರಗಳೆಕವಿ ಇತ್ಯಾದಿ ಮಾತುಗಳಿಂದ ಗುರುತಿಸಿದ್ದಾರೆ. ನಡುಗನ್ನಡ ಸಾಹಿತ್ಯದ ಹರಿಕಾರರು ವಚನಕಾರರಾದರೆ ಅವರ ಕ್ರಾಂತಿಯ ನಂತರ ಅದನ್ನು ಸಾಹಿತ್ಯಕ ನೆಲೆಯಲ್ಲಿ ಮುಂದುವರಿಸಿದ ಆರಂಭದ ಯುಗದ ಕವಿ ಮಹಾಕವಿ ಹರಿಹರನಾಗಿದ್ದಾನೆ. ಈತನ ಕಾಲಘಟ್ಟದ ಈ ಯುಗವನ್ನು ಮಧ್ಯಕಾಲೀನಯುಗ, ನಡುಗನ್ನಡಯುಗ, ಬಸವಯುಗ, ಹರಿಹರಯುಗ, ವೀರಶೈವಯುಗ, ಸ್ವಾತಂತ್ರ್ಯಯುಗ, ದೇಸೀಯುಗ ಇತ್ಯಾದಿ ನಾನಾ ಹೆಸರುಗಳಿಂದ ಗುರುತಿಸುತ್ತಾರೆ. ಹರಿಹರವನ್ನು ಹರಿದೇವ, ಹರೀಶ್ವರ, ಹರಿಹರ, ಎಂದು ನಾನಾ ರೀತಿಯಲ್ಲಿ ಉಲ್ಲೇಖಿಸಲಾಗಿದೆ. ಈತ ರಾಘವಾಂಕ ಕೆರೆಯಪದ್ಮರಸರ ಸಮಕಾಲೀನನಾಗಿದ್ದಾನೆ. ಈತನು ಶತಕ, ಅಷ್ಟಕ, ರಗಳೆಗಳಲ್ಲಿ ಲಘುಕಾವ್ಯಗಳನ್ನು ಬರೆಯುವ ದೇಸೀ ಪರಂಪರೆಗೆ ಶ್ರೀಕಾರ ಹಾಕಿದವನು.

ಹರಿಹರನ ಕಾಲದ ಬಗ್ಗೆ ವಿದ್ವಾಂಸರಲ್ಲಿ ವಿಫುಲವಾದ ಚರ್ಚೆ ನಡೆದಿದೆ. ಆ ಬಗೆಗೆ ಏಕಾಭಿಪ್ರಾಯ ಹೊಂದಿಲ್ಲ. ಆತನು ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದನು. ಹರಿಹರನು ತನ್ನ ಕಾವ್ಯಗಳಲ್ಲಿ ಸ್ವವಿಷಯಗಳೇನನ್ನೂ ಹೇಳಿಕೊಂಡಿಲ್ಲ. ಈತನನ್ನು ಕುರಿತು ರಾಘವಾಂಕ ಬರೆದಿರುವ 'ಹರಿಹರಮಹತ್ವ' ಎಂಬ ಕೃತಿಯೂ ಉಪಲಬ್ಧವಿಲ್ಲ. ಮುಂದೆ ೧೨ನೆ ಶತಮಾನದ

ಸಿದ್ಧನಂಜೇಶ ಬರೆದಿರುವ 'ರಾಘವಾಂಕ ಚಾರಿತ್ರ' ಹಾಗೂ ಇತರ ಆಧಾರಗಳಿಂದ ಹರಿಹರನ ತಂದೆ ಮಹಾದೇವ, ತಾಯಿ ಶರ್ವಾಣಿ, ಅಕ್ಕ ರುದ್ರಾಣಿ, ಭಾವ ಮಹಾದೇವಭಟ್ಟ, ಅವರ ಮಗನೇ ರಾಘವಾಂಕ, ಹರಿಹರನ ಸೋದರಳಿಯ ಎಂದು ತಿಳಿಯಲಾಗಿದೆ. ಕವಿಯು ತನ್ನ ಗುರುಪರಂಪರೆಯನ್ನು ಅತ್ಯಂತ ಅಭಿಮಾನದಿಂದ ಹಂಪೆಯ ಶಂಕರದೇವರು, ಅವರ ಶಿಷ್ಯಮಾದಿರಾಜರು, ಅವರ ಶಿಷ್ಯ ಮಾಯಿದೇವರು ಅವರ ಶಿಷ್ಯನೇ ತಾನು ಎಂದು ಹೇಳಿಕೊಳ್ಳುತ್ತಾನೆ. ಈತ ವೀರಶೈವ ಶರಣಕವಿ; ಹಂಪೆಯ ವಿರೂಪಾಕ್ಷನ ಪರಮಭಕ್ತ; ಹಾಗಾಗಿ ಆತನ ಅಂಕಿತದಲ್ಲಿಯೇ ತನ್ನೆಲ್ಲಾ ಕೃತಿಗಳನ್ನೂ ರಚಿಸುತ್ತಾನೆ. ರಗಳೆಗಳಲ್ಲಿ ಮೊಟ್ಟಮೊದಲಿಗೆ ಕೃತಿ ರಚಿಸಿದ ಕ್ರಾಂತಿಕಾರಿ ಕವಿ ಈತ. ಈತನ ಕಾವ್ಯ ಪ್ರಕಾರಗಳ ವೈವಿಧ್ಯ, ಅವುಗಳ ವಸ್ತು ಸ್ವಾತಂತ್ರ್ಯ, ಛಂದೋಸ್ವಾತಂತ್ರ್ಯಗಳಿಂದ ಈತ ಕ್ರಾಂತಿಕಾರಿಕವಿ ಎನಿಸಿ ನೂತನ ಕಾವ್ಯಯುಗದ ಪ್ರವರ್ತಕನಾಗಿದ್ದಾನೆ. ಆತನ ಕೃತಿಗಳಲ್ಲಿ ಹೆಚ್ಚಾಗಿ ಪಂಪಾಕ್ಷೇತ್ರದ ಬಗೆಗಿನ ಆತನ ಪ್ರೀತಿ ವರ್ಣನೆ ಇರುವುದರಿಂದ ಆತನ ಜನ್ಮಸ್ಥಳ ಹಂಪಿಯ ಪಂಪಾಕ್ಷೇತ್ರವಾಗಿದ್ದು ಅಲ್ಲಿ ಆತ ತನ್ನ ಜೀವಿತದ ಬಹುಭಾಗ ಕಳೆದಿರಬಹುದು.

ಆರಂಭದಲ್ಲಿ ಹರಿಹರನು ಹೊಯ್ಸಳ ದೊರೆ ೨ನೆಯ ನರಸಿಂಹಬಲ್ಲಾಳನಲ್ಲಿ ಕ್ರಿ.ಶ. ೧೧೭೩-೧೨೨೦ ದ್ವಾರಸಮುದ್ರದಲ್ಲಿ ಕರಣಿಕನಾಗಿದ್ದನು. ಚಾಡಿಕೋರರು ಆತ ಲೆಕ್ಕದ ಪುಸ್ತಕದಲ್ಲಿ 'ಪಂಪಾವಿರೂಪಾಕ್ಷ' ಎಂದು ಬರೆಯುತ್ತಾನೆಂದು ದೂರುಹೇಳಲು ರಾಜ ಪರೀಕ್ಷಿಸಲು ಆತ ಲೆಕ್ಕವನ್ನು ಸರಿಯಾಗಿಯೇ ಹೇಳುತ್ತಾನೆ. ಒಂದು ದಿನ ಲೆಕ್ಕ ಬರೆಯುತ್ತಿದ್ದವನು ಇದ್ದಕ್ಕಿಂತೆ ತನ್ನ ಎರಡೂ ಕೈಗಳನ್ನು ಮೇಲೆತ್ತಿ ಹೊಸೆಯತೊಡಗಿದನು. ಆತನ ವಿಚಿತ್ರ ವರ್ತನೆಗೆ ಎಲ್ಲರೂ ನಗುತ್ತಾರೆ. ರಾಜನು ಕಾರಣ ಕೇಳಲು ಆರತಿಯ ಬೆಂಕಿ ತಗುಲಿ ಹಂಪೆಯ ದೇವಾಲಯದಲ್ಲಿ ಉರಿ ಹತ್ತಿಕೊಂಡಿತ್ತು. ಅದನ್ನು ಅಂತರ್‌ದೃಷ್ಟಿಯಿಂದ ತಿಳಿದು ಆರಿಸಿದೆನೆನ್ನುತ್ತಾನೆ. ರಾಜನು ದೂತರನ್ನು ಕಳುಹಿಸಿ ವಿಚಾರಿಸಲಾಗಿ ಅದು ಸತ್ಯವಾಗಿತ್ತು. ಆಗ ರಾಜನು ಹರಿಹರನನ್ನು ಹೊಗಳುತ್ತಾನೆ. ಅಂದೇ ಆತ ಶಿವನ ಸೇವೆಯನ್ನಲ್ಲದೆ ಮನುಜರ ಸೇವೆಯನ್ನು ಮಾಡಲಾಗದೆಂದು ಭಾಷೆ ಸ್ವೀಕರಿಸಿ ಹಂಪೆಗೆ ಬರುತ್ತಾನೆ. ಅಲ್ಲೇ ನೆಲೆಸುತ್ತಾನೆ. ದೇವರ ಅನುಜ್ಞೆಯಂತೆ ಶಿವಶರಣರ ರಗಳೆಗಳನ್ನು ರಚಿಸುತ್ತಾನೆ. ಆತನ 'ನಂಬಿಯಣ್ಣನ ರಗಳೆ'ಯನ್ನು ಕೇಳಿ ಮೋಹಿತಳಾಗಿ ಓರ್ವಹೆಣ್ಣು ಹರಿಹರನ ಬಳಿ ಬಂದು ಆತನ ವೈರಾಗ್ಯದಿಂದ ಮನಃಪರಿವರ್ತಿತಳಾಗಿ ಅಲ್ಲೇ ದೇವರ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಪದ್ಮರಸನು ಹರಿಹರನ ಬಳಿ ಬಂದು ಆತನ ಅವಸಾನ ಸಮೀಪಿಸಿದುದನ್ನು ಹೇಳಿ ಹೋಗುತ್ತಾನೆ. ಅಂತೇ ಹರಿಹರನು ಕೆಲವೇ ದಿನಗಳಲ್ಲಿ ಲಿಂಗೈಕ್ಯನಾಗುತ್ತಾನೆ.

ಹರಿಹರನ ಕೃತಿಗಳ ಅನುಕ್ರಮಣಿಕೆ ವಾದಗ್ರಸ್ತವಾಗಿದೆ. ರಂ.ಶ್ರೀ. ಮುಗಳಿಯವರು ಕ್ರಮವಾಗಿ ಪಂಪಾಶತಕ, ರಕ್ಷಾಶತನ, ಮುಡಿಗೆಯ ಅಷ್ಟಕ, ಗಿರಿಜಾ ಕಲ್ಯಾಣ, ರಗಳೆಗಳು ರಚಿತವಾಗಿವೆ ಎನ್ನುತ್ತಾರೆ. ಹರಿಹರನ ಬದುಕಿಗೆ ಸಂಬಂಧಿಸಿದಂತೆ ಅನೇಕ ಪವಾಡಕತೆಗಳಿವೆ. ಪಂಪಾಶತಕ, ರಕ್ಷಾಶತಕ ಆತನ ಆತ್ಮಕತೆಗಳಂತಿವೆ. ಮುಡಿಗೆಯ ಅಷ್ಟಕವು ಬುದ್ಧಿಯ ಕಸರತ್ತಿನ ಪ್ರಯೋಗವಾಗಿದೆ. ಚಂಪೂಕಾವ್ಯವಾದ ಗಿರಿಜಾಕಲ್ಯಾಣವು ಕವಿಯ ಮಹಾಕಾವ್ಯ ರಚನಾ ಸಾಮರ್ಥ್ಯಕ್ಕೆ ಕೈಗನ್ನಡಿಯಾಗಿದೆ. ಹರಿಹರನ ರಗಳೆಗಳ ಸಂಖ್ಯಾನಿರ್ಣಯ ಸಮಸ್ಯೆಯಾಗಿದೆ. ಸಧ್ಯಕ್ಕೆ ಹಿರೇಮಲ್ಲೂರು ಈಶ್ವರನ್ ಸೂಚಿಸಿರುವಂತೆ ಹರಿಹರನ ರಗಳೆಗಳ ಸಂಖ್ಯೆ ೧೦೬ ಎಂದು ತಿಳಿಯಬಹುದಾಗಿದೆ.

ಹರಿಹರನ ಕುಂಬಾರಗುಂಡಯ್ಯ ರಗಳೆಯು ನೂತನ ಶಿವಶರಣರ ರಗಳೆಯಾಗಿದೆ ಇದರಲ್ಲಿ ಘಟನೆಯನ್ನು ಮನಂಬುಗುವಂತೆ ಹೇಳುವ ಉತ್ಸಾಹದ ಅವನ ಕಥನ ಶೈಲಿಯಿಂದ ಓದುಗರನ್ನು ಭಕ್ತರಲೋಕಕ್ಕೇ ಕರೆದೊಯ್ಯುವ ತಾದಾತ್ಮ್ಯತೆ ವಿಶೇಷವಾಗಿದೆ. ಗುಪ್ತಭಕ್ತನಾದ ಕುಂಬಾರಗುಂಡಯ್ಯನದು ಅಂತರಂಗೋಪಾಸನೆ. ತನ್ನ ನಿತ್ಯಕಾಯಕವನ್ನೇ ಆತ ಆತ್ಮಸಾಧನೆಯ ಮಾರ್ಗವಾಗಿಸಿಕೊಂಡವನು. ಆತನ ಕತೆ ಹೀಗೆ ಬರುತ್ತದೆ.

ಬಲ್ಲುಕೆಪುರದಲ್ಲಿ ಕುಂಬಾರಗುಂಡಯ್ಯನೆಂಬ ಶಿವಭಕ್ತನಿದ್ದನು. ಮಡಿಕೆಮಾಡುವ ಕಾಯದಲ್ಲಿ ನಿಷ್ಠವಾಗಿ ಶಿವಾರ್ಚನೆ ಮಾಡುವುದು ಅವನ ದಿನಚರಿ. ಹೊರಗೆ ಘಟಕಾಯಕ, ಒಳಗೆ ಶಿವಸೇವಾ ಕಾಯಕ. ಹೀಗೆ ಎರಡನ್ನು ಏಕಕಾಲದಲ್ಲಿ ನಡೆಸಿಕೊಂಡು ಹೋಗುತ್ತಿರುತ್ತಾನೆ. ಒಮ್ಮೆ ಶಿವಭಾವದಲ್ಲಿಯೇ ತಲ್ಲೀನನಾಗಿ ಗಡಿಗೆ ಮಾಡುವಾಗಿನ ಅಲುಗಾಟಕ್ಕೆ ತನು ಅಲ್ಲಾಡಲು ಒಳಗಣ ಲಿಂಗವೂ ಅಲ್ಲಾಡುತ್ತದೆ. ಅಂದರೆ ಶಿವನು ಗುಂಡಯ್ಯನ ಹೃದಯದಲ್ಲಿ ನರ್ತಿಸುತ್ತಾನೆ ಎನ್ನುತ್ತಾನೆ. ಇಂತಹ ಶಿವನಾಟವನ್ನು ಕಂಡು ಉಬ್ಬಿ ಬೆಳಗಿನತನಕ ಗಡಿಗೆ ಬಾರಿಸುತ್ತಾ ಶಿವನಾಟದ ಸವಿಕಂಡ ಗುಂಡಯ್ಯ ನಿತ್ಯವೂ ಅದನ್ನು ನೇಮವಾಗಿಸಿಕೊಳ್ಳುತ್ತಾನೆ.

ಒಮ್ಮೆ ಶಿವನು ಗುಂಡಯ್ಯನ ಘಟದ ದನಿಗೆ ಮೈಮರೆತು ಪಕ್ಕದ ಗಿರಿಜೆಯನ್ನೂ ಮರೆತು ನಾಟ್ಯವಾಡತೊಡಗುತ್ತಾನೆ. ಗಿರಿಜೆ ಪ್ರಶ್ನಿಸಲು ತನ್ನ ಭಕ್ತ ಗುಂಡಯ್ಯನ ಘಟದ ದನಿಗೆ ಮರುಳಾಗಿ ಅವನ ಹೃದಯದಲ್ಲಿ ಆಡುತ್ತಿದ್ದೆ; ಮೈಮರೆತು ಇಲ್ಲೂ ಆಡಿದೆ ಎಂದಾಗ ಗಿರಿಜೆ ಇದು ಮರ್ತ್ಯಲೋಕದಲ್ಲಿ ಹೊಸದು ಎನ್ನುತ್ತಾಳೆ. ಆಗ ಶಿವನು ನಡೆ ಅವನನ್ನು ಪರಿಚಯಿಸುತ್ತೇನೆಂದು ಬರಲು ಗುಂಡಯ್ಯನು ಘಟವನ್ನು ಬಾರಿಸುತ್ತಿರಲು ಅವನನ್ನು ಎಚ್ಚರಿಸಲು ಒಳಗಾಡುವ ಲಿಂಗವನ್ನು ಆಕರ್ಷಿಸಿ ತನ್ನಲ್ಲಿ ಅಂತರ್ಗತಗೊಳಿಸಲು ಆತ ಕಣ್ದೆರೆಯುತ್ತಾನೆ. ಶಿವನನ್ನು ಕಂಡು ಸಂತಸದಿಂದ ನಾಟ್ಯವಾಡಲು ಶಿವಮೆಚ್ಚಿ ಈವರೆಗೆ ಭಕ್ತನ ಹೃದಯದೊಳಗೆ ಆಡುತ್ತಿದ್ದನು; ಈಗ ಲೋಕವೆಲ್ಲವೂ ತಿಳಿಯುವಂತೆ ಆಡುವೆನೆಂದು ನಾಟ್ಯವಾಡತೊಡಗುತ್ತಾನೆ. ಕೊನೆಗೆ ಶಿವೆ ಶಿವನನ್ನು ಸಮಾಧಾನಿಸಲು ಶಿವನು ಗುಂಡಯ್ಯನನ್ನು ತನ್ನೊಡನೆ ಕೈಲಾಸಕ್ಕೆ ಕರೆದೊಯ್ದು ಗಣಪದವಿಯನ್ನು ಕೊಡುತ್ತಾನೆ.

ಈ ರಗಳೆಯಲ್ಲಿ ಹರಿಹರನು ವರ್ಣಿಸಿರುವ ನಾಟ್ಯದ ಸೊಗಸನ್ನು ಓದಿ ಅನುಭವಿಸಿದಾಗಲೇ ಅದರ ರಸಾನುಭವ ನಮಗಾಗುವುದು. ತನ್ನ ಭಾವದ ಮಹೋನ್ನತಿ, ನಿರೂಪಣೆಯ ಸಿದ್ಧಿ, ಬೀರುವ ಮಾಂತ್ರಿಕ ಪರಿಣಾಮ, ಗಣವಿನ್ಯಾಸಗಳು ಕೃತಿಯ ಭಾವಕ್ಕೆ ಅಪೂರ್ವಕಾಂತಿಯನ್ನು ಶಕ್ತಿಯನ್ನೂ ಇತ್ತಿವೆ. ಪದಗುಂಫನ ಸಂಗೀತ ಪ್ರಜ್ಞೆಯಿಂದ ಇದು ಕನ್ನಡದ ಉತ್ಕೃಷ್ಟ ಕೃತಿಗಳಲ್ಲಿ ಒಂದಾಗಿದೆ. ಹರಿಹರನ ಕವಿತ್ವಶಕ್ತಿ ಇಲ್ಲಿ ಸಫಲವಾಗಿದೆ. ಸೂಕ್ಷ್ಮಾತ್ ಸೂಕ್ಷ್ಮತರವಾದ ಅನುಭವವನ್ನು ಮೂರ್ತೀಕರಿಸುವ ಕವಿಯ ಕಾವ್ಯಸಿದ್ಧಿ ಅನನ್ಯವಾಗಿದೆ. ಸಂಗೀತ, ತಾಳಗತಿ, ನೃತ್ಯದ ಪದಗತಿ, ಆನುಭಾವಿಕ ಪದಗುಂಪಿನ ಜೋಡಣೆ ಈ ಕಾವ್ಯಭಾಗದ ವಿಶೇಷವೆಂದು ಗುರುತಿಸಲಾಗಿದೆ.

## 2 ರಾಘವಾಂಕ ವಿರಚಿತ ಸಿದ್ಧರಾಮಚಾರಿತ್ರ (ಎರಡನೆಯ ಸಂಧಿ)

## ಶ್ರೀ ಶೈಲದಲ್ಲಿ ಸಿದ್ಧರಾಮನಿಗೆ ಮಲ್ಲಿಕಾರ್ಜುನನ ದರ್ಶನ

ಬೆಳೆಗೆಯ್ಯ ಹೊದಱೆನೊಳು ಮುನ್ನಾಡಿದೆಡೆಗಳೊಳು
ತಳಿತಮರನಡಿಗಳೊಳಗೆಳಲತೆಯ ತಂಪಿನೊಳು
ತಿಳಿಗೊಳನ ತೀರದೊಳು ದೇವಭವನದೊಳು ಕೆಱೆಯೊಳು ಪುಷ್ಪವಾಟಿಗಳೊಳು ।
ಗುಳಿಗಳೊಳು ಗುಡ್ಡೆಗಳ ಮಱಿಯೊಳೆಡೆಯಾಡುವವ
ರೊಳು ಮೇವ ತುಱುವಿಂಡಿನೊಳು ದಾರಿಯೊಳು ಸುತ್ತಿ
ಸುಳಿದಱಸಿದಂ ಸಿದ್ಧರಾಮನಾ ಪರ್ವತಾಗ್ರಣಿ ಮಲ್ಲಿಕಾರ್ಜುನನನು ॥೧॥

ಕಂಗೆ ಮಂಗಳವಪ್ಪ ಪರಿಪರಿಯ ಶಿವಲಾಂಛ
ನಂಗಳಿಂದುಬ್ಬಟೆಯ ಭಾಷೆಯಿಂ ವಿವಿಧ ನೇ
ಮಂಗಳಿಂ ಬಹಳ ಭಕ್ತಿಜ್ಞಾನ ವೈರಾಗ್ಯದಿಂದ ಬಲಿದ ತನುಗಳಾದ ।
ಜಂಗಮರಿನೆಸೆಯುತ್ತ ಬಹ ಪರುಷೆಯೊಳಗೆ ಮಾ
ತಂಗ ಮೊದಲಿಱುಹೆ ಕಡೆಯೆನೆ ನೋಯಿಸದ ದಯಾ
ಸಂಗಿಗಳು ಬರುತ ಕಂಡರು ಬಟ್ಟೆಯೊಳ್ ಬಿದ್ದು ಬಾಯ್ಬಿಡುವ ಬಾಲಕನನು ॥೨॥

ಹಿಡಿದೆತ್ತಿ ಕುಳ್ಳಿರಿಸಿ ನೆಳಲೊಳಗೆ ಬೀಸಿ ಮೈ
ದೊಡೆದು ಬಾಯಳಿದಾರನಱಸಿದಪಡೆಯೆಂದಡೆ
ನ್ನೊಡೆಯನನದೆಲ್ಲಿಹನು ಪರ್ವತದಲೇಂ ಪೆಸರು ಮಲ್ಲಿಕಾರ್ಜುನನೆಂಬುದು ।
ಕಡೆಗವರ ಕಾಣಬೇಕೇ ಬೇಕು ಬೇಹಡೆ
ಮ್ಮೊಡನೆ ಬಾ ತೋರ್ಪೆವೆನೆ ಹೈ ಬಂದಪೆಂ ತೋಱೆ
ಕೊಡಿರಯ್ಯ ಎಂದು ಪೊಡಮಟ್ಟು ನಂಬುಗೆಗೊಂಡು ಹೋದನಾ ಪರುಷೆ ಯೊಡನೆ ॥೩॥

ಎಲ್ಲಿರ್ದಪಂ ತೋಱಿರಯ್ಯ ದಮ್ಮಯ್ಯ ತಳು
ವಿಲ್ಲವೇ ಇಲ್ಲೀಗ ಕಂಡೆನಾದೊಡೆ ಚರಣ
ದಲ್ಲಿ ದೊಪ್ಪನೆ ಬಿದ್ದುಬಿಗಿದು ತಕ್ಕೈಸಿಬಿಸಿರಂ ಬಗಿದುಹೊಕ್ಕು ಬೆರಸಿ ।
ತಲ್ಲೀಯವಪ್ಪೆನೆಂದಲವರುವ ಕರಣಂಗ
ಳೆಲ್ಲವಂ ತಣ್ಣಬಾಗಿಲೊಳಿಟ್ಟು ಕೊಂಡೆಯ್ದಿ
ಮಲ್ಲಯ್ಯ ಮಲ್ಲಯ್ಯಯೆನೆ ಮಂದಿಯಂ ಬಗಿದು ಲಿಂಗವಂ ತೋಱಿಸಿದರು ॥೪॥

ಹಿಂದೆ ಕಂಡಾ ಮೂರ್ತಿಯೆಂದು ಬಗೆದತ್ಯಾರ್ತ
ದಿಂದ ನಡೆನೋಡಿ ಲಿಂಗಾಕಾರಮಂ ಕಂಡು
ನೊಂದಡವಿಯೊಳಗೆ ಹೊಲಗೆಟ್ಟವ್ವೆಗತ್ತನ್ನಳಂ ಕಂಡ ಶಿಶುವ ಪೋಲ್ತು ।
ತಂದೆ ಬಾ ತೋಱಿದಪೆವೆಂದಡಱಿಯದೆ ನಂಬಿ
ಬಂದು ಕೆಟ್ಟೆಂ ಕೆಟ್ಟೆನೆಂದು ಮಂದಿಗೆ ಮಱುಗು
ತಂದು ಮಲ್ಲಯ್ಯ ಮಲ್ಲಯ್ಯಯೆನುತಲಿ ಸಿದ್ಧರಾಮಯ್ಯ ಚಿಂತಿಸಿದನು ॥೫॥

ಬಱಿದೇಕೆ ಬಾಯ್ಬಿಡುವೆ ತಮ್ಮ ಬೇಡೀ ಲೋಕ
ವಱಿಯುತಿರೆ ಮಲ್ಲಿಕಾರ್ಜುನ ನೀತನೆಂದೊಡಾ
ನಱಿಯೆನೇ ಸಾರೀತನಲ್ಲೆನಲು ನೀನಱಿವ ಕುಱುಹಾವುದೆನೆ ಮುಡಿಯೊಳು ।
ಹೆಱೈಯುಂಟು ತೊಱೆಯುಂಟು ಜಡೆಯುಂಟು ಕೊರಳೆಡೆಯ
ಕಱೆಯುಂಟು ಪಂಚಮುಖವುಂಟು ದಶಭುಜವುಂಟು
ಕಿಱೆಯ ಫಣಿದೊಡವುಂಟು ನೊಸಲ ಕಣ್ಣುಂಟಾತನಂ ತೋಱಿಕೊಡಿಯೆಂದನು ॥೬॥

ಆತನಂ ತೋಱಲಾವಱಿಯೆವಳ ಬೇಡೆಂದ
ಡೇತೆಱದೊಳಂ ಮಾಣದಿರ್ದೊಡಾಸತ್ತು ಬಿ
ಟ್ಟೈತಂದ ರಿತ್ತಲಿವನೆರಿತುಮಱಸುತ್ತಾಗಳೆಳಲುರಿಯ ವಿರಹದಿಂದ ।
ಭೀತಿ ಬೀತಾಱೈಳವಸ್ಥೆ ತಲೆದೋಱೈ ತಾ
ಬಾತುರದೊಲೆದ್ದು ಹೊಱವಂಟು ಬಳಿಕಾನಾವ
ಗೋತೆ ನಾರ್ಗೆಲ್ಲಿರ್ದನೇ ನಾದೆನೆಂದಱಿಯದಱಸಿದನದೇ ವೊಗಳ್ವೆನು ॥೭॥

ಘನಸತ್ಯಮಯನಪ್ಪ ನೀಂ ಪರ್ವತದಲಿಪ್ಪೆ
ನೆನೆ ನಿನ್ನ ಕಾಣಲೆಂದಾನಿಲ್ಲಿಗೈತಂದೊ
ಡನಿಮಿತ್ತ ಮುನಿದನಂತಡಗುವರೆ ಹಿಂದೆ ಕೆಯ್ಯೊಳಗೆ ತೋಱಿದ ನಿಜವನು ।

ಎನಗೀಗ ತೋಱುವುದು ಲೇಸ ಸಾಱಿದೆನು ದು
ರ್ಜನ ವಳಿಯಲಿನ್ನೊಮ್ಮೆ ಕರೆವೆನಲ್ಲಿಂ ಮೇಲೆ
ತನುವನೀ ಕಮ್ಮರಿಗೆ ಕುಡುವೆನೆಂದಾಡುತಿರೆ ಪರವಶಂ ಕೈಮಿಕ್ಕುದು ॥೮॥

ಕಡುಮೋಹವಱಿಯಲಾನಡಗಿದಡೆ ಭಾಷೆಯಂ
ಪಿಡಿದನೇಗುವೆನಿವಂ ಕರೆದ ಬಾಯಿಂದೆ ಪೊಱ
ಮಡುವೆನೋ ಕರೆದಡೋಯೆಂಬೆನೋ ಕರೆದ ದೆಸೆಯಿದೆದ್ದು ಹರಿ ತಪ್ಪೆನೊ ।
ಪೊಡವಿಯಂ ಬಗಿದೇಳ್ವೆನೋ ಮಿಱಿ ಗಗನದಿಂ
ದೊಡಬೀಳ್ವೆನೋ ಬೀಳ್ವ ಕಮ್ಮರಿಯ ದರಿ ಗುಣ್ಪು
ಗೆಡೆ ಪೊಳ್ದು ಬೆಳೆವೆನೋ ಎಂದು ಶಿವನನುಗೆಯ್ಯುತಿರ್ದನತಿ ತವಕದಿಂದ ॥೯॥

ಕೊರಳೆತ್ತಿ ಕೈಮುಗಿದು ನೆಗಪಿ ಕಣ್ಣಂ ಮುಚ್ಚಿ
ಕರುಣಾಬ್ಧಿ ಮಲ್ಲಿನಾಥಾ ಎಂದಡೋ ಕಂದ
ಕರೆದು ಬಳಲಿದೆಯೆನುತ್ತೆತ್ತಿ ತರ್ಕೈಸಿ ತಲೆದಡವಿ ಮುಂಡಾಡಿ ನೋಡಿ ।
ತರಣೇಂದು ಸುರನದಿ ಜಟಾಮಕುಟ(ವ) ಸಮಾಕ್ಷ
ವುರಗಕುಂಡಲವೈದು ವದನವೀರೈದು ತೋಳ್
ಗರಳಗಳ ವಿಭಚರ್ಮವೆಡದ ಗಿರಿಸುತೆವೆರಸಿ ತೋಱಿದಂ ನಿಜರೂಪನು ॥೧೦॥

ಆಕರ : ರಾಘವಾಂಕ ಕವಿಯ ಸಿದ್ಧರಾಮಚಾರಿತ್ರ (ಎರಡನೆಯ ಸಂಧಿ)
ಸಂ. ಪ್ರೊ. ಟಿ.ಎಸ್. ವೆಂಕಣ್ಣಯ್ಯ
ಪ್ರೊ. ಡಿ.ಎಲ್. ನರಸಿಂಹಾಚಾರ್

ತ.ವೆಂ.ಸ್ಮಾರಕಗ್ರಂಥಮಾಲೆ, ಮೈಸೂರು
ಎರಡನೆ ಮುದ್ರಣ – ೧೯೭೫

**ಕವಿ–ಕಾವ್ಯ ವಿಚಾರ :**

ಹರಿಹರನ ನಂತರ ಬಂದ ರಾಘವಾಂಕನೂ ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬನಾಗಿದ್ದಾನೆ. ಈತನ ಜೀವನಚರಿತ್ರೆಯು ಕುಮಾರಪದ್ಮರಸನ (೧೩ನೆ ಶ) 'ಸಾನಂದಚರಿತ್ರೆ', ಪದ್ಮಣಾಂಕನ' (೧೫ನೆಶ) 'ಪದ್ಮರಾಜಪುರಾಣ' ವಿರೂಪಾಕ್ಷಪಂಡಿತನ (೧೬ನೆಶ) 'ಚೆನ್ನಬಸವಪುರಾಣ', ಚಿಕ್ಕನಂಜೇಶನ 'ರಾಘವಾಂಕಚರಿತೆ', (೧೭ನೆಶ), ಶಾಂತಲಿಂಗನ 'ಭೈರವೇಶ್ವರ ಕಾವ್ಯಕಥಾ ಸೂತ್ರರತ್ನಾಕರ' ಕೃತಿಗಳಲ್ಲಿ ಬರುತ್ತದೆ. ಈತ ಪ್ರಸಿದ್ಧಕವಿ ಹರಿಹರನ ಸೋದರಳಿಯನೂ ಶಿಷ್ಯನೂ ಆಗಿದ್ದಾನೆ. ಈತ ಗುರುವಿಗೆ ತಕ್ಕ ಶಿಷ್ಯನಾಗಿ, ಮಾವನಿಗೆ ತಕ್ಕ ಅಳಿಯನಾಗಿ, ಷಟ್ಪದಿಬ್ರಹ್ಮನಾಗಿ ನೂತನಕಾವ್ಯಮಾರ್ಗದ ನಿರ್ಮಾಪಕನಾಗಿ ಅರಮನೆಯ ಗದ್ದುಗೆಯಿಂದ ಜನತೆಯ ಪದತಲಕ್ಕೆ ಕಾವ್ಯಗಂಗೆಯನ್ನು ಹರಿಸಿದ ಕ್ರಾಂತಿಕಾರೀ ಕವಿಯೂ ಯುಗಕವಿಯೂ ಆಗಿದ್ದಾನೆ. ಈತನನ್ನು 'ರಾಘವ', 'ರಾಘವಾಂಕ', 'ರಾಘವದೇವ', 'ರಾಘವಪಂಡಿತ' ಎಂಬುದಾಗಿ ಕರೆಯುತ್ತಾರೆ. ಈತ ಆರುಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 'ಹರಿಹರಮಹತ್ವ', 'ಶರಭಚಾರಿತ್ರ' ಎಂಬೆರಡು ಕೃತಿಗಳು ಸಿಕ್ಕಿಲ್ಲ. ಉಳಿದ 'ಹರಿಶ್ಚಂದ್ರ ಚಾರಿತ್ರ', 'ಸೋಮನಾಥ ಚಾರಿತ್ರ', 'ಸಿದ್ಧರಾಮಚಾರಿತ್ರ', 'ವೀರೇಶಚರಿತೆ'– ಎಂಬ ನಾಲ್ಕು ಕೃತಿಗಳು ಸಿಕ್ಕಿವೆ. ಅವುಗಳ ಅನುಕ್ರಮದ ಬಗ್ಗೆ ವಿದ್ವಾಂಸರಲ್ಲಿ ಚರ್ಚೆಯಿದೆ. ರಾಗೌರವರ ಪ್ರಕಾರ ಆತನ ಹಲ್ಲು ಮುರಿದ ಕತೆಯು ಕವಿಯು ಅಂದಿನ ಕಾಲಧರ್ಮ ಮತ್ತು ಪರಿಸರಗಳೊಡನೆ ಹೋರಾಡಿದ ಧಾರ್ಮಿಕ ಶ್ರದ್ಧೆಯೇ ಕಾವ್ಯಶ್ರದ್ಧೆಯೂ ಆದುದನ್ನು ಸೂಚಿಸುತ್ತದೆ. ಅದು ಅವನ ಮುಂದಿನ ಶೈವಕೃತಿ ಪಂಚಕಗಳಿಂದ ವ್ಯಕ್ತವಾಗುತ್ತದೆ. ಜನ ಬದುಕಬೇಕೆಂಬುದನ್ನೇ ಕಾವ್ಯೋದ್ದೇಶವಾಗಿಟ್ಟುಕೊಂಡ ಆತನ ಕೃತಿರಚನೆಗಳು ವಚನಕಾರರ ಸೈದ್ಧಾಂತಿಕತೆಯನ್ನು ಸ್ಥಿರಗೊಳಿಸಿದೆ. ಹರಿಹರ ರಾಘವಾಂಕರು ತಮ್ಮನಂತರದ ಇಡೀ ಕನ್ನಡ ಸಾಹಿತ್ಯವನ್ನು ನಿಯಂತ್ರಿಸಿದ ಯುಗಪುರುಷರಾಗಿದ್ದಾರೆ.

ರಾಘವಾಂಕನ ಕಾಲದ ಬಗ್ಗೆ ವಿದ್ವಾಂಸರು ಚರ್ಚಿಸಿದ್ದಾರೆ. ಅಂತಿಮವಾಗಿ ಆತ ೧೩ನೆ ಶತಮಾನದ ಪ್ರಾರಂಭದ ವೇಳೆಗೆ ಕೃತಿರಚನೆಗೆ ತೊಡಗಿ ಮಧ್ಯಭಾಗ ಅಥವಾ ಉತ್ತರಾರ್ಧವವರೆಗೂ ಇದ್ದಿರಬೇಕೆನ್ನುತ್ತಾರೆ. ಈತನ ಮತದ ಬಗ್ಗೆಯೂ ಭಿನ್ನಾಭಿಪ್ರಾಯಗಳಿದ್ದು ಈತ ವೀರಶೈವನೆಂದು ತಿಳಿಯಲಾಗಿದೆ. ಮಹಾದೇವಭಟ್ಟ ಮತ್ತು ರುದ್ರಾಣಿಯರು ಈತನ ತಂದೆ ತಾಯಿಗಳು. ಸೋದರಮಾವನಾದ ಹರಿಹರನೇ ಈತನ ಗುರುವಾಗಿದ್ದಾನೆ. ರಾಜಮನ್ನಣೆಯನ್ನು ಪಡೆದ ಈತನಿಗೆ 'ಉಭಯಕವಿ ಶರಭಭೇರುಂಡ', 'ಉಭಯಕವಿಕಮಲರವಿ', 'ಅದಟಕವಿನಿಕರ ಚೌದಂತ' ಎಂಬ ಬಿರುದುಗಳಿದ್ದವು. ರಾಘವಾಂಕನ ಜೀವನ ಋಷಿಸದೃಶವಾದದ್ದು. ಆತನು ದೊಡ್ಡಕವಿಯಲ್ಲದೆ ದೊಡ್ಡವ್ಯಕ್ತಿಯೂ ಆಗಿದ್ದನು. ಹರಿಹರ, ರಾಘವಾಂಕರಿಬ್ಬರೂ ಶರಣಜೀವನವನ್ನು ಚಿತ್ರಿಸಿದುದು ಮಾತ್ರವಲ್ಲದೇ ಶರಣರಾಗಿಯೇ ಬಾಳಿದವರು. ಆಜನ್ಮಬ್ರಹ್ಮಚಾರಿಯಾದ ರಾಘವಾಂಕ, ಋಷಿ ಜೀವನ ನಡೆಸಿ ಆತ್ಮಸಾಧನೆಯಿಂದ ಸಿದ್ಧಿ ಪಡೆದವನು.

ರಾಘವಾಂಕನಿಂದ 'ಸಿದ್ಧರಾಮಚಾರಿತ್ರ' ಕೃತಿಯು ಭಾಮಿನಿಷ್ಪದಿಯಲ್ಲಿ ರಚಿತವಾದ ೯ ಸಂಧಿಗಳ ದೊಡ್ಡಕಾವ್ಯ. ಇದು ಕನ್ನಡ ಕಾವ್ಯಪರಂಪರೆಯಲ್ಲಿ ಒಂದು ವಿಶಿಷ್ಟ ಕೃತಿ. ಬಸವಣ್ಣನವರ ಕಾಲದಲ್ಲಿದ್ದ ವಚನಕಾರನೂ ಆಗಿದ್ದ ಕರ್ಮಯೋಗಿ ಸೊನ್ನಲಿಗೆಯ ಸಿದ್ಧರಾಮ ಶಿವಯೋಗಿಯ ಜೀವನ ಚರಿತ್ರೆಯೇ ಇದರ ವಸ್ತು. 'ಕಪಿಲಸಿದ್ಧಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಸುಮಾರು ೧೪೦೦ ಈತನ ವಚನಗಳು ಸಿಕ್ಕಿವೆ. ಕೈಲಾಸದಲ್ಲಿ ಶಿವನು ಗಿರಿಜೆಯು ಓಲಗದಲ್ಲಿರುವಾಗ ಅವನ ದರ್ಶನಕ್ಕಾಗಿ ಬರುತ್ತಿದ್ದ ಅದ್ರಿಶಿರ

ಊರ್ಧ್ವಶಿರರೆಂಬ ಇಬ್ಬರು ಗಂಧರ್ವರು ದಾರಿಯಲ್ಲಿ ಎದುರಿಗೆ ಸಿಕ್ಕಿದ ಭೃಂಗಿಯನ್ನು ಕಂಡು ನಕ್ಕರು. ಆಗ ಆತ ನರಾಟ್ಮದಲ್ಲಿ ಭವಿಸತಿಪತಿಗಳಾಗಿ ಹುಟ್ಟಿರೆಂದು ಶಾಪವಿತ್ತನು. ಅವರು ಅತ್ತು ಬೇಡಿದಾಗ ಶಿವಜ್ಞಾನಿಯೊಬ್ಬ ನಿಮಗೆ ಮಗನಾಗಿ ಹುಟ್ಟುತ್ತಾನೆ. ಅವನಿಂದ ನಿಮಗೆ ವಿಶಾಪ. ಮುಂದಿನದನ್ನು ಶಿವನಲ್ಲಿ ಕೇಳಿರಿ ಎಂದನು. ಅವರು ಶಿವನ ಬಳಿ ಹೇಳಲು ಆತ ತಾನೇ ಸೊನ್ನಲಿಗೆಯಲ್ಲಿ ಹುಟ್ಟಿ ನಿಮಗೆ ಮಗನಾಗಿ ಕಷ್ಟ ಕಳೆಯುತ್ತೇನೆ ಎಂದು ಸಂತೈಸಿದನು. ಅವರೀರ್ವರೂ ಸೊನ್ನಲಿಗೆಗೆ ಬಂದು ಮೊರಡಿಯ ಮುದ್ದ ಹಾಗೂ ಸುಗ್ಗವ್ವೆಯರಾಗಿ ಜನಿಸಿದರು. ಬೆಳೆದಾಗ ಅವರೀರ್ವರ ವಿವಾಹವಾಯಿತು. ಮಕ್ಕಳಾಗದೆ ವೃದ್ಧಾಪ್ಯ ಬಂದಿತು. ಆ ವೇಳೆಗೆ ಒಂದು ದಿನ ರೇವಣಸಿದ್ಧನು ಬಂದು ಈ ನೆಲ ಪವಿತ್ರ ಕ್ಷೇತ್ರವಾಗುವುದು ಎಂದು ಹೇಳಿ ಸುಗ್ಗವ್ವೆಯ ಮನೆಗೆ ಬಂದು ಆಕೆಯ ಹೊಟ್ಟೆಯನ್ನು ಮುಟ್ಟಿ ನಮಸ್ಕರಿಸಿದನು. ಆಕೆ ಕಾರಣ ಕೇಳಲು ಶಿವಯೋಗಯುತ ಪುತ್ರ ಜನಿಸುತ್ತಾನೆಂದೂ ಅವನು ಎಲ್ಲರಂತೆ ಹುಟ್ಟದೆ ಒಂದೆರಡು ತಿಂಗಳಿನಲ್ಲಿಯೇ ಜನಿಸುವನೆಂದೂ ಆತನಿಗೆ ಸಿದ್ಧರಾಮನೆಂದು ಹೆಸರಿಡಬೇಕೆಂದೂ ಹೇಳಿ ಹೋಗುತ್ತಾನೆ. ಅದನ್ನು ಊರರಸಿ ಚಾಮಲದೇವಿಗೂ ಹೇಳಿ ಹೋಗುತ್ತಾನೆ.

ಇತ್ತ ಸುಗ್ಗವ್ವೆಯ ಬಸಿರು ಬೆಳೆದು, ಕುಮಾರ ಉದಯಿಸಿದಾಗ ಗಿರಿಜೆಯೇ ಬಂದು 'ಸಿದ್ಧರಾಮ'ನೆಂದು ನಾಮಕರಣಮಾಡಿ ಮಾಯವಾದಳು. ಸುಗ್ಗವ್ವೆ ಎಚ್ಚರಗೊಂಡು ಮಗುವನ್ನು ಕಂಡು ಆನಂದಿಸಿ ಗಿರಿಜೆ ಹೇಳಿದ 'ಸಿದ್ಧರಾಮ'ನೆಂಬ ಹೆಸರನ್ನು ಮರೆತು 'ಧೂಳಿಮಾಕಾಳ'ನೆಂದು ತನ್ನ ಕುಲದೈವವ ಹೆಸರನ್ನಿಟ್ಟಳು. ಹಾಗಾಗಿ ಮಗು ನಿಶ್ಚೇಷ್ಠಿತವಾಗಿದ್ದಿತು. ಇದರಿಂದ ತಂದೆತಾಯಿಗಳಿಗೆ ಪೇಚಾಟವಾಗಿತ್ತು. ನಂತರ 'ಸಿದ್ಧರಾಮ'ನೆಂದು ಮರು ನಾಮಕರಣ ಮಾಡಲು ಮಗು ಕ್ರಿಯಾಶೀಲವಾಯಿತು. ಒಂದೆರಡು ವರ್ಷಕ್ಕೇ ಹತ್ತೆಂಟುವರ್ಷದವನಂತಾಗಲು ಮಗನಾಗಿ ಮನೆಯಲ್ಲಿರುವುದಕ್ಕಿಂತ ದನವನ್ನಾದರೂ ಕಾಯಲೆಂದು ಜೊತೆ ಹುಡುಗರೊಡನೆ ಕಳುಹಿಸಿದರು. ಆದರೆ ಅಲ್ಲಿಯೂ ಮಾವಿನ ಮರದ ಕೆಳಗಿದ್ದ ಒಂದು ಲಿಂಗವನ್ನು ಪೂಜಿಸಿ ಬುತ್ತಿಯ ಅನ್ನವನ್ನು ಜೊತೆಯವರಿಗೆ ಹಂಚಿ ಬರುತ್ತಿದ್ದನು. ಒಂದು ದಿನ ನವಣೆಯ ಹೊಲದಲ್ಲಿ ದನ ಮೇಯಿಸುತ್ತಿದ್ದಾಗ ಶಿವನು ಜಂಗಮವೇಷದಿಂದ ಬಂದು ಭಸಿತವನ್ನು ಕೊಟ್ಟು ತನ್ನ ನಿಜ ಸ್ವರೂಪ ತೋರಿಸಿ ತನ್ನ ಹೆಸರನ್ನು ತಾನಿರುವ ಸ್ಥಳವನ್ನು ಹೇಳಿ 'ತಿನ್ನವುದಕ್ಕೆ ಹಂಜಕ್ಕಿ ಬೇಕು, ಮನೆಗೆ ಹೋಗಿ ತೆಗೆದು ಕೊಂಡು ಬಾ' ಎಂದನು. ಇಲ್ಲಿ ಹುಲಿಕರಡಿಗಳಿವೆ ನಿನ್ನನ್ನು ಬಿಟ್ಟು ಹೇಗೆ ಹೋಗಲೆಂದು ಹೇಳುತ್ತಾ ಅವನು ಒಲ್ಲದ ಮನಸ್ಸಿನಿಂದ ಮನೆಗೆ ಬಂದು ಹಂಜಕ್ಕಿಯನ್ನು ಮಜ್ಜಿಗೆಯನ್ನು ತೆಗೆದುಕೊಂಡು ಮರಳಿ ಬಂದು ನೋಡುವಾಗ ತಾನುಕಂಡ ಮಲ್ಲಿನಾಥನು ಅಲ್ಲಿರದೆ ಮಾಯವಾಗಿದ್ದನು. ಅವನನ್ನು ಎಲ್ಲೆಲ್ಲಿಯೂ ಹುಡುಕಿ ಕಾಣದೆ ಅವನು ಮಲ್ಲಯ್ಯ, ಮಲ್ಲಯ್ಯ ಎಂದು ಕೂಗಿಕರೆಯುತ್ತ ಒರಲುತ್ತ ಅಳುತ್ತ ಇರಲು ಶ್ರೀ ಪರ್ವತಕ್ಕೆ ಹೋಗುವ ಯಾತ್ರಿಕರು ಆ ದಾರಿಯಲ್ಲಿ ಬಂದರು. ಅಳುವ ಹುಡುಗನನ್ನು ಮಾತನಾಡಿಸಿ ಶ್ರೀ ಶೈಲಕ್ಕೆ ಬಾ, ಅಲ್ಲಿ ಮಲ್ಲಯ್ಯನನ್ನು ತೋರಿಸುತ್ತೇವೆ ಎಂದು ಜೊತೆಯಲ್ಲಿ ಕರೆದುಕೊಂಡು ಹೋದರು.

ಸಂಜೆಯಾಗಿ ಕತ್ತಲಾದರೂ ಮಗ ಮನೆಗೆ ಬಾರದುದಕ್ಕೆ ಸುಗ್ಗವ್ವೆಗೆ ಚಿಂತೆ ಹೆಚ್ಚಾಗಿ ಜೊತೆ ಹುಡುಗರನ್ನೆಲ್ಲಾ ವಿಚಾರಿಸಿ ಮಗನ ಸುದ್ದಿ ತಿಳಿಯದೆ ಹುಡುಕಲು ಹೊರಟು 'ಸಿದ್ಧರಾಮ' ಎಂದು ಹಲಬುತ್ತಿರಲು ಶಿವನಿಗೆ ಕರುಣೆ ಹುಟ್ಟಿ ಮಾನವ ರೂಪಿನಿಂದ ಬಂದು ಸಿದ್ಧರಾಮ ಪರ್ವತದ ಪರುಷೆಜೊತೆ ಹೋಗುತ್ತಿದ್ದಾನೆ ಎಂದು ಹೇಳಿದನು. ಆಗ ಅವನನ್ನು ಹುಡುಕಿ ಕರೆತರಲು ಅವನ ಅಣ್ಣ ಬೊಮ್ಮಯ್ಯನನ್ನು ಶ್ರೀ ಶೈಲಕ್ಕೆ ಕಳುಹಿಸಿದರು.

ಇಲ್ಲಿಂದ ಬರುವ ಮುಂದಿನ ಭಾಗವೇ ಪ್ರಕೃತ ಪಠ್ಯವಾಗಿದೆ. ಇತ್ತ ಸಿದ್ಧರಾಮನು ಶ್ರೀ ಶೈಲಕ್ಕೆ ಬಂದು ಶಿವನಿಲಯಕ್ಕೆ ಹೋಗಿ ಕರೆತಂದವರು ತೋರಿಸಿದ ಲಿಂಗವನ್ನು ನೋಡಿ ಅದು ತಾನು ಮೊದಲು ಕಂಡ ರೂಪಿನ ಮಲ್ಲಯ್ಯನಲ್ಲವೆಂದೂ ಅವನನ್ನೇ ತೋರಿಸಿರೆಂದು ಕಾಡಿಬೇಡಿ ಅಳುತ್ತಿರಲು ಅದು ತಮಗೆ ಸಾಧ್ಯವಿಲ್ಲವೆಂದು ಹೇಳಿ ಅವನೊಬ್ಬನನ್ನೇ ಅಲ್ಲಿ ಬಿಟ್ಟು ಅವರು ತಮ್ಮ ತಮ್ಮ ಮನೆಗೆ ತೆರಳಿದರು.

ಸಿದ್ಧರಾಮನು ಕಣ್ಣಿಗೆ ಕಾಣದ ಮಲ್ಲಯ್ಯನನ್ನು ಕಾಣಲೇಬೇಕೆಂದು ತಾಯಿ ತಪ್ಪಿದ ಕರು ಅರಚುವಂತೆ ಅರಚಿ ಕಮರಿಯ ನೆತ್ತಿಯಲ್ಲಿ ನಿಂತು ಅಲ್ಲಿಂದ ಬಿದ್ದು ಸಾಯಬೇಕೆಂದು ಹವಣಿಸುತ್ತಿರುವಾಗ ಶಿವನು ಪಾರ್ವತಿಯೊಡನೆ ಪ್ರತ್ಯಕ್ಷನಾಗಿ ಅದನ್ನು ತಡೆದು ಕರುಣಿಸಿ ಸಂತೈಸಿದನು. ಶ್ರೀ ಶೈಲವನ್ನೆಲ್ಲಾ ತೋರಿಸುವಂತೆ ಭೈರವನಿಗೆ ಆಜ್ಞಾಪಿಸಿದನು. ಆತ ಆ ಸ್ಥಳವನ್ನು ನೋಡಿ ಬಂದ ಮೇಲೆ ಅವನಿಗೆ ಮಂತ್ರೋಪದೇಶವನ್ನು ಮಾಡಿ 'ಇಲ್ಲಿರಬೇಡ, ಸೊನ್ನಲಿಗೆಗೆ ಹೋಗು, ತಂದೆ ತಾಯಿಗಳು ನಿನ್ನ ಅಗಲಿಕೆಯಿಂದ ಮರುಗುತ್ತಿದ್ದಾರೆ' ಎಂದು ಶಿವನು ಹೇಳಲು 'ನಾನು ಇಲ್ಲಿಯೇ ಇರುತ್ತೇನೆ ಹೋಗಲಾರೆನೆಂದು ಚಂಡಿ ಹಿಡಿಯಲು ಕಷ್ಟದಿಂದ ಅವನನ್ನು ಒಪ್ಪಿಸಿ' ನಾನೂ ನಿನ್ನ ಜೊತೆಯಲ್ಲಿ ಬರುತ್ತೇನೆ, ಮಂದಾರದ ಮರದಡಿಯಲ್ಲಿ ಲಿಂಗವಾಗಿರುತ್ತೇನೆ' ಎಂದು ಶಿವ ನಂಬಿಸಿ ಸಿದ್ಧರಾಮನನ್ನು ಬೀಳ್ಕೊಟ್ಟನು. ಅಲ್ಲಿಗೆ ಬಂದ ಅಣ್ಣ ಬೊಮ್ಮಣ್ಣನೊಡನೆ ಸಿದ್ಧರಾಮನು ಸೊನ್ನಲಿಗೆಗೆ ಮರಳಿ ಬರಲು ತಂದೆ ತಾಯಿಗಳ ಸಂತೋಷ ಅಪಾರವಾಯಿತು. ಮುಂದೆ ಸೊನ್ನಲಿಗೆ ಅವನ ಕಾರ್ಯಕ್ಷೇತ್ರವಾಗಿ ವಿಸ್ತಾರವಾದ ಕತೆಯನ್ನು ಕವಿ ವಿವರಿಸುತ್ತಾನೆ.

**ಘಟಕ : 3**

**1) ಚಾಮರಸ ವಿರಚಿತ ಪ್ರಭುಲಿಂಗಲೀಲೆ (ಗತಿ–7, ಮಾಯೆ ಮತ್ತು ಅಲ್ಲಮರ ಸಂವಾದ ಭಾಗ)**

ತರಳೆ ತನ್ನಯ ಹೊನ್ನು ಸಲ್ಲದೆ
ತಿರುಗಿ ಬಂದೊಡೆಯಕ್ಕಸಾಲೆಯ
ದುರುಳತನದಲಿ ಬಯ್ಯಬಹುದೇ ನೀನು ಮತಿಗೆಟ್ಟು
ಹರನನರ್ಚಿಸುವಂಗ ಭೇದಾಂ
ತರವಱಿಯದೆ ಸಟೆಯ ಭಕ್ತಿಯ
ಭರದಲೇತಕೆ ಫಲವ ಬಯಸುವೆ ಮಾಯೆ ಕೇಳೆಂದ ॥೧॥

ನಾನು ನಿನ್ನಲಿ ಸುಖವ ಸುಱಿದು ಸು
ಮಾನದಲಿ ನಿನ್ನಿಂದ ಶಿವತ
ತ್ವಾನುಭಾವವ ನಿಜವದಱಿದೆನ್ನಯ ಪ್ರತಿಜ್ಞೆಯನು
ಊನವಿಲ್ಲದೆ ಸಲಿಸಿ ಶಿವನಾ
ಸ್ಥಾನದಲಿ ನಾ ಮೆಱೆವೆನಂಬಭಿ
ಮಾನದಲಿ ನಂಬಿರ್ದನೆಂದಳು ಮಾಯೆಯಲ್ಲಮನ ॥೨॥

ಕಾಮವೆತ್ತಲು ಪರಮತತ್ವದ
ಸೀಮೆಯೆತ್ತಲು ತಿಮಿರವೆತ್ತಲು
ತಾಮರಸಸಖನೆತ್ತಲರಿಸಿನವೆತ್ತ ಬಿಸಿಲೆತ್ತ
ಭ್ರಾಮಕದ ನುಡಿ ಸಾಕು ನೀನೆ
ತ್ತಾ ಮಹಾಘನವೆತ್ತ ಮರುಳೇ
ಕ್ಷೇಮದಲಿ ನೀ ಬಂದ ಬಟ್ಟೆಯ ಲಬಲೆ ಹೋಗೆಂದ ॥೩॥

ಕನಸು ಮನಸಿನೊಳಾಗಳೆನ್ನಯ
ತನುವಿನಲಿ ನೀಸುಳಿದು ಮಚ್ಚಿಸಿ
ಯಿನಿತು ಧಾವತಿಗೊಳಿಸಿ ನಿಷ್ಕರುಣದಲಿ ನೀನೆನ್ನ
ಕನಲಿ ನುಡಿದೊಡೆ ನಾನು ಬಿಡುವೆನೆ
ತನಗೆ ತತ್ತಡೆ ಭಾವಿಸಲು ಸಾ
ವನಿತು ಬಂದೊಡೆ ಬರಲಿ ಬಿಡೆ ನಾನೆಂದಳಾ ಮಾಯೆ ॥೪॥

ಕನಸಿನಲಿ ಚೇಳೂಱಿದೊಡೆ ವೇ
ದನಿಸಿತೆಂದಿರದೆದ್ದು ನರಳುವ
ಮನುಜರುಂಟೇ ಮರುಳೆ ನಿನ್ನ ಮನೋವಿಕಾರಗಳು
ನಿನಗೆ ತೋಱಿದೊಡೆಮ್ಮೊಳೇತಕೆ
ಮನಕತವ ಸೀ ಮಾಡುತಿಹೆ ನಾ
ವಿನಿತು ಗಸಣೆಯ ಗೊಡವೆಗಾಜ್ಞೈ ಮಾಯೆ ಕೇಳೆಂದ ॥೫॥
ವಾಸಿ ಹುಟ್ಟಿದ ಬಳಿಕ ನಾನಿ

ನ್ನೇಸುದಿನವಿದ್ದಾದೊಡೆನ್ನಯ
ಭಾಷೆಯನು ನಾನುತ್ತರಿಸಬೇಕಲ್ಲದುಳಿದಂತೆ
ಆಸೆಯಿಲ್ಲದೆ ತಿರಿಗಿದೊಡೆ ಹೆಂ
ಗೂಸುತನಕದು ಹಾನಿಯಾ ಕೈ
ಲಾಸಕಾನೆಂತೆಯ್ದುವೆನು ಕೇಳೆಂದಳಾ ಮಾಯೆ ॥೬॥

ಕಡಲ ನೀರುಗಳೆಲ್ಲವಮೃತದ
ಮಡುಗಳಾದರೆಯಹವು ಸುರಗಿರಿ
ಕುಡಿವಿಡಿದು ಹಬ್ಬಿದೊಡೆ ಹಬ್ಬುವುದವನಿಮಂಡಲದ
ಗಿಡುಗಳೆಲ್ಲವು ಕಲ್ಪತರುವಾ
ದೊಡೆಯಹವು ತತ್ತದನುಗಾಲಕೆ
ಮಡದಿ ಮಾಯೆಗೆ ಪರಮತತ್ವಜ್ಞಾನವಿಲ್ಲೆಂದ ॥೭॥

ನುಡಿದು ನುಣ್ಣನೆ ನೀನು ಮೆಲ್ಲನೆ
ಸಡಿಲಿ ಹೋದರೆ ನಾನಿ ನಿನ್ನನು
ಬಿಡುವನೇ ಕೇಳೆನ್ನ ಪೈಜೆಯ ಸಲಿಸಿದನ್ನಬರ
ಒಡಲು ನಿನಗಿಲ್ಲೆಂಬ ಬಿಂಕದ
ಬೆಡಗು ಬೇಡಿನ್ನೇನ ಮಾಡಿಯು
ತುಡುಕಿದಲ್ಲದೆ ಮಾಣೆನೆಂದಂಗೈಸಿದಳು ಮಾಯೆ ॥೮॥

ಬಯಲ ಬಂಧಿಸಲೆಂದು ಕೃತನಿ
ಶ್ಚಯವ ಮಾಡಲು ಸಿಕ್ಕಬಲ್ಲುದೆ
ನಿಯತವೆನ್ನನು ಹಿಡಿದುಕೊಂಬೊಡೆ ನೋಡು ನೀನೆನುತ
ಪ್ರಿಯದಲಾಗಳೆ ತನ್ನ ನಿಜ ನಿ
ರ್ಣಯದ ನಿರ್ಮಿಸಿ ನಿಮಿಷದಲಿ ನಿ
ರ್ವಯಲ ಜಾಲವೆ ಬೀಸಿ ಹೋದನು ಮಾಯೆಗಲ್ಲಮನು ॥೯॥

ಜಾರಿದನು ಬಳಿಕಾತನೀಕೆಗೆ
ಹೇಱಿದುದು ಕಡು ದುಗುಡ ಸಖಿಯರು
ನೀಱಿಯನು ಸಂತೈಸಿದನು ನಾನಾ ಪ್ರಕಾರದಲಿ
ಗಾಱುದೂಱಿನ ಮಾಯೆಗೀಯೆಗೆ
ತೋಱಿಸುವನೇ ತನ್ನ ನಿಜವನು
ಮೀಱಿ ಮೀಸಲ ನಲ್ಲಮಪ್ರಭುಗುರು ಗುಹೇಶ್ವರನು ॥೧೦॥

**ಕವಿ–ಕಾವ್ಯವಿಚಾರ** : ವೀರಶೈವಸಾಹಿತ್ಯದ ಸುವರ್ಣಕಾಲವಾದ ವಿಜಯನಗರದ ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿನ (ಕ್ರಿ.ಶ. ೧೪೧೯–೧೪೪೬)ನೂರೊಂದು ವಿರಕ್ತರಲ್ಲಿ ಒಬ್ಬನಾದ ಚಾಮರಸನು 'ಪ್ರಭುಲಿಂಗಲೀಲೆ'ಯ ಕರ್ತೃವಾಗಿದ್ದಾನೆ. ಹಾಗಾಗಿ ಈತನ ಕಾಲವನ್ನು ಸು.ಕ್ರಿ.ಶ.೧೪೩೦ ಎಂದು ನಿರ್ಧರಿಸಲಾಗಿದೆ. ಈತನದು ಮಮಕಾರವನ್ನು ದಾಟಿ ನಿಷ್ಕಲಲಿಂಗದಲ್ಲಿ ಒಂದಾಗಿ ಬೆರೆತು ಹೋದ ಅಪೂರ್ವವ್ಯಕ್ತಿತ್ವ. ಹಾಗಾಗಿ ಕಾವ್ಯದಲ್ಲಿ ಎಲ್ಲಿಯೂ ಆತ ತನ್ನ ಹೆಸರನ್ನು ಕೂಡ ಹೇಳಿಕೊಂಡಿಲ್ಲ. ಹಾಗಾಗಿ ಆತನ ಹಾಗೂ ಆತನ ತಂದೆ ತಾಯಿಗಳ ಹೆಸರು, ಸ್ಥಳ, ಆತನಗುರು, ಆತ ಬರೆದ ಕೃತಿಗಳು, ಅವುಗಳ ಕಾಲ, ಆತನ ಪೂರ್ವ ಮತ್ತು ಸಮಕಾಲೀನ ಕವಿಗಳ ಸ್ಮರಣೆ–ಇವು ಯಾವುಗಳನ್ನೂ ಕವಿ ತನ್ನ ಕೃತಿಯಲ್ಲಿ ಪ್ರಸ್ತಾಪಿಸಿಲ್ಲ. ಇದರ ಕರ್ತೃ ಚಾಮರಸ ಎನ್ನುವುದನ್ನು ಹೊರಗಿನ ಆಧಾರಗಳಿಂದ ಕಂಡುಕೊಳ್ಳಬೇಕಾಗಿದೆ. ಆದರೆ ನಮಗೆ ದೊರಕುವ ಹೊರಗಿನ ಆಧಾರಗಳಿಂದ 'ಪ್ರಭುಲಿಂಗಲೀಲೆ'ಯ ಕರ್ತೃ ಚಾಮರಸನೆಂಬ ವಿಚಾರದಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲ. ಈ ಕೃತಿಯು ಬಹಳ ಹಿಂದೆಯೇ ತೆಲುಗು, ಮರಾಠಿ, ಸಂಸ್ಕೃತ ಭಾಷೆಗಳಿಗೆ ಅನುವಾದವಾಗಿದೆ.

ಚಾಮರಸ ಮತ್ತು ಕುಮಾರವ್ಯಾಸರಿಗೆ ಸಂಬಂಧಿಸಿದಂತೆ ಒಂದು ದಂತಕತೆಯಿದೆ. ಇಮ್ಮಡಿ ಪ್ರೌಢದೇವರಾಯ ಭಾರತವನ್ನು ರಚಿಸುವಂತೆ ಅಪ್ಪಣೆ ಮಾಡಿದಂತೆಯೂ, ಕಾವ್ಯರಚನೆ ಮುಗಿದ ಮೇಲೆ ವಿದ್ವಾಂಸರು ಅವುಗಳನ್ನು ಪರೀಕ್ಷಿಸಿ ಚಾಮರಸನ ಕೃತಿ ಹೆಚ್ಚು ರಸವತ್ತಾದುದೆಂದು ಅಭಿಪ್ರಾಯ ಪಟ್ಟಂತೆಯೂ, ಆಗ ಕುಮಾರವ್ಯಾಸ ಖಿನ್ನನಾಗಿ ತನ್ನ ಹೆಂಡತಿಯ ಮೂಲಕ ಅವಳ ಅಣ್ಣನಾದ ಚಾಮರಸನ ಕೃತಿಯನ್ನು ಸುಡಿಸಿದಂತೆಯೂ, ಕುಮಾರವ್ಯಾಸನಿಗೆ ಸಲ್ಲುವುದರಲ್ಲಿದ್ದ ಕನಕಸ್ನಾನವನ್ನೂ ತಪ್ಪಿಸಲಿಕ್ಕಾಗಿ ಚಾಮರಸನಿಂದ ನೂರೊಂದು ವಿರಕ್ತರಲ್ಲಿ ಒಬ್ಬನಾದ ಜಕ್ಕಣಾರ್ಯನೇ ಮೊದಲಾದವರು ದಿನವೊಂದಕ್ಕೆ ೧೦೧ ಪದ್ಯಗಳಂತೆ ಹನ್ನೊಂದು ದಿನಗಳಲ್ಲಿ ಸತ್ತವರಲ್ಲದ ಕತೆಯನ್ನೊಳಗೊಂಡ 'ಪ್ರಭುಲಿಂಗಲೀಲೆ'ಯನ್ನು ಬರೆಸಿ ಕವಿ ಹಾಗೂ ಕೃತಿಗೆ ದೊರಕಬೇಕಾದ ರಾಜಮರ್ಯಾದೆಯನ್ನು ದೊರಕಿಸಿಕೊಟ್ಟಂತೆ 'ಪ್ರೌಢದೇವರಾಯನ ಕಾವ್ಯ' ಹೇಳುತ್ತದೆ. ಒಬ್ಬ ಕವಿಗಿಂತ ಮತ್ತೊಬ್ಬ ಮುಖ್ಯನೆನ್ನುವ ಈ ದಂತಕತೆಗೆ ಪ್ರಾಧಾನ್ಯಕೊಡುವುದರಲ್ಲಿ ಅರ್ಥವಿಲ್ಲ ಆದರೆ ಇವರೀರ್ವರೂ ಸಮಕಾಲೀನರೆನ್ನುವ ಮಾತನ್ನು ಸುಲಭವಾಗಿ ತೆಗೆದುಹಾಕಲಾಗುವುದಿಲ್ಲ. ಈತ ಮೊದಲು ಗದುಗಿನಲ್ಲಿದ್ದು (ಈತ ನಾಗಣಾಪುರದವನೆಂಬ ಮಾತೂ ಬರುತ್ತದೆ) ಅನಂತರ ವಿಜಯನಗರದ ದೇವರಾಯ, ಲಕ್ಕಣ್ಣ, ಜಕ್ಕಣ್ಣಾದಿಗಳ ಕೀರ್ತಿಯನ್ನು ಕೇಳಿ ಅಲ್ಲಿಗೆ ಬಂದು ನೆಲೆಸಿರಬೇಕು.

'ಪ್ರಭುಲಿಂಗಲೀಲೆ' ರಚಿತವಾದ ಸನ್ನಿವೇಶವನ್ನು ಕುರಿತೂ ಒಂದು ಕಥೆ ಕಾವ್ಯಗಳಲ್ಲಿ ಇದೆ. ಮುಕುಂದಪೆದ್ದಿ ಎಂಬುವವನು ಅಲ್ಲಮಪ್ರಭುವಿನ ಜೀವನವನ್ನು ಕುರಿತು ವ್ಯಂಗ್ಯವಾಗಿ ವಿಡಂಬಿಸಿದಂತೆಯೂ ಅದರ ಪರಿಣಾಮವಾಗಿ ಪ್ರಭುವಿನ ಮಹತ್ವವನ್ನು ಮನದಟ್ಟು ಮಾಡಿಕೊಡುವುದಕ್ಕಾಗಿ 'ಪ್ರಭುಲಿಂಗಲೀಲೆ' ಕೃತಿ ರಚಿತವಾದಂತೆಯೂ ಕಥೆಯಿದೆ. ಇದು ಆ ಕಾಲದ ಧಾರ್ಮಿಕ ಜೀವನದ ಮೇಲೆ ಬೆಳಕು ಬೀರುತ್ತದೆ. ಒಟ್ಟಾರೆ ಅಲ್ಲಮನ ಸಾಧನೆ ಮಸುಳಿಸಿದಾಗ ಅದರ ಉಜ್ವಲತೆಯನ್ನು ಜಗತ್ತಿಗೆ ಬೆಳಗುವ ಪ್ರಯತ್ನದ ಫಲವಾಗಿ 'ಪ್ರಭುಲಿಂಗಲೀಲೆ'ಕೃತಿ ಮೂಡಿಬಂದಿದೆ ಎಂಬುದು ಮಹತ್ವಪೂರ್ಣವಾದ ಅಂಶ. ಅದು ಈ ಕೃತಿಯಲ್ಲಿ ಸಮರ್ಥವಾಗಿ ಈಡೇರಿದೆ.

'ಪ್ರಭುಲಿಂಗಲೀಲೆ' ಕೃತಿಯು ೨೫ ಗತಿ ೧೧೧೧ ಪದ್ಯಗಳನ್ನು ಒಳಗೊಂಡಿದೆ. ಇದು ಭಾಮಿನಿಷಟ್ಪದಿಯಲ್ಲಿದೆ. ಅಲ್ಲಮಪ್ರಭುವಿನ ಚರಿತ್ರೆ ಇದರ ಕಾವ್ಯವಸ್ತು. ಊರ್ಧ್ವಗಾಮಿತ್ವದ ಅಭೀಪ್ಸೆಯ ಚೇತನದ ಪ್ರತೀಕಾತ್ಮಕ ಕಾವ್ಯನಿಚ್ಚಣಿಗೆ ಈಕೃತಿ. ಕವಿಯ ದೃಷ್ಟಿ ಉನ್ನತವೂ ವ್ಯಾಪಕವೂ, ಅನುಭಾವಪರವೂ ಆಗಿದೆ. ಹರಿಹರನು ತನ್ನ 'ಪ್ರಭುದೇವರ ರಗಳೆ'ಯಲ್ಲಿ ಅಲ್ಲಮನನ್ನು ಕೈಲಾಸದಲ್ಲಿ ನಿರ್ಮಾಯನೆಂಬ ಗಣ ಮೋಹಪರವಶನಾದ ತಪ್ಪಿಗೆ ಶಾಪಹೊಂದಿ ಭುವಿಯಲ್ಲಿ ಜನಿಸಿದಂತೆ ಚಿತ್ರಿಸಿದ್ದಾನೆ. ಆದರೆ ಚಾಮರಸನು

ಸಾಕ್ಷಾತ್ ಶಿವನೇ ಅಲ್ಲಮನ ರೂಪದಲ್ಲಿ ಸಾಕಾರಗೊಂಡು ಭಕ್ತರ ಉದ್ಧಾರಕ್ಕಾಗಿ ಲೀಲೆಗಳನ್ನು ನಡೆಸಿದಂತೆ ಚಿತ್ರಿಸಿದ್ದಾನೆ. ಇಲ್ಲಿ ಪ್ರಭು ಸಿದ್ಧಪುರುಷನಾಗಿದ್ದಾನೆ. ಕತೆಯು ಶಿವ ಪಾರ್ವತಿಯರ ಸಂಭಾಷಣೆಯಿಂದ ಆರಂಭವಾಗುತ್ತದೆ. ಪಾರ್ವತಿಯು ಶಿವನಿಗೆ ನಿನ್ನ ಒಡ್ಡೋಲಗದವರೆಲ್ಲರೂ ನಿತ್ಯ ಸುಖಿಗಳೋ ಎಂದಾಗ, ನಾಮರೂಪ ಕ್ರಿಯೆಗಳಿಂದ ಕೂಡಿದವರಿಗೆ ನಿತ್ಯಸುಖವಿಲ್ಲ ಎನ್ನುತ್ತಾನೆ. ಆಗ ಅದನ್ನು ಪಡೆಯುವ ಬಗೆ ಹೇಗೆ ಎಂದಾಗ ಅದು ಭೂಲೋಕದ ಮಾನವಶರೀರಿಗಳಿಗೆ ಮಾತ್ರ ಸಾಧ್ಯ ಎನ್ನುತ್ತಾನೆ. ಆಗ ಅದನ್ನು ಭೂಲೋಕದಲ್ಲಿ ತಿಳಿಯುವ ಬಗೆ, ಅದನ್ನು ಉಪದೇಶಿಸುವ ಗುರುವಾರು ಎಂದಾಗ ಸುಜ್ಞಾನ ನಿರಹಂಕಾರಿಗಳ ಪುತ್ರ ಅಲ್ಲಮನಲ್ಲಿ ತಿಳಿಯುವುದು ಎನ್ನುತ್ತಾನೆ. ಓ ಆತನನ್ನು ನಾನು ಬಲ್ಲೆ; ಆತನನ್ನು ತಿಳಿಯುವುದು ಸುಲಭ ಎನ್ನುತ್ತಾಳೆ. ಆಗ ನೀನು ಭಾವಿಸಿರುವಂತೆ ಆತ ಸಾಮಾನ್ಯವಲ್ಲ ಎನ್ನುತ್ತಾನೆ. ಆಗ ಗಿರಿಜೆ ತನಗದು ಕಷ್ಟವಲ್ಲ ಎಂದು ಗರ್ವದಿಂದ ನುಡಿಯಲು ಹೀಗೆ ದುಡುಕಿದರೆ ನಿನಗೆ ಸೋಲು ಖಂಡಿತ ಎನ್ನುತ್ತಾನೆ ಶಿವ. ಆಗ ಆಕೆ ವ್ಯರ್ಥವಾದ ಮಾತುಗಳ ಅವಶ್ಯಕತೆ ಇಲ್ಲ, ಇದೇ ತನ್ನ ಪ್ರತಿಜ್ಞೆಯೆಂದು ಹೇಳಿ ತನ್ನ ತಾಮಸಕಳೆಯಾದ ಮಾಯೆಗೆ ಭುವಿಯಲ್ಲಿ ಹುಟ್ಟಿ ಅಲ್ಲಮನನ್ನು ಒಲಿಸಿ ತಿಳಿದು ಬಾ ಎನ್ನುತ್ತಾಳೆ.

ಮಾಯೆಯು ತಾನು ಅಲ್ಲಮನನ್ನು ತಿಳಿಯುವೆನು, ಆಗದಿದ್ದರೆ ಆತನನ್ನು ಎಳೆದು ತರುವೆನೆಂದು ಪ್ರತಿಜ್ಞೆಮಾಡಿ ಬಿಂಕದಿಂದ ಭೂಲೋಕಕ್ಕೆ ಬಂದು ಮಮಕಾರ ಮತ್ತು ಮೋಹಿನಿಯರ ಮಗಳಾಗಿ ಹುಟ್ಟಿ ಬೆಳೆಯುತ್ತಾಳೆ. ಆಕೆಗೆ ಯೋಗ್ಯನಾದ ವರನ ಬಗ್ಗೆ ಚಿಂತಿಸುವಾಗ ಅವರ ಗುರು ಅಹಂಕಾರಾಚಾರ್ಯನು ಶಿವನೇ ಆಕೆಗೆ ಅನುರೂಪ ವರ ಎನ್ನುತ್ತಾರೆ. ಅದಕ್ಕೆ ಶಿವನನ್ನು ಪಡೆವ ಬಗೆ ಹೇಗೆ ಎನ್ನಲು ಶಿವಭಕ್ತಿಯ ಮೂಲಕ ಎಂದು ಹೇಳಿ ಅದನ್ನು ಮಾಯೆಗೆ ಬೋಧಿಸುತ್ತಾನೆ. ಅಂತೆಯೇ ಮಾಯೆ ಪ್ರತಿನಿತ್ಯ ಮಧುಕೇಶ್ವರನನ್ನು ಗುಡಿಯಲ್ಲಿ ಭಕ್ತಿಯಿಂದ ಪೂಜಿಸತೊಡಗುತ್ತಾಳೆ. ಒಮ್ಮೆ ಅಲ್ಲಮನು ಆ ದೇವಾಲಯದಲ್ಲಿ ಮದ್ದಳೆಯನ್ನು ಬಾರಿಸುವ ಅಭಿನವಕಾಮನಾಗಿ ಕಾಣಿಸಿಕೊಳ್ಳುತ್ತಾನೆ. ಆಗ ಅವರೀರ್ವರ ಭೇಟಿಯಾಗಲು, ಮಾಯೆ ಅವನಲ್ಲಿ ಮೋಹಿತಳಾಗುತ್ತಾಳೆ. ತಂದೆಗೆ ಆತನನ್ನು ನಾಟ್ಯಗೃಹದ ಮುಖ್ಯಸ್ಥನನ್ನಾಗಿರಿಸಿಕೊಳ್ಳುವೆನೆಂದು ಹೇಳಿ ತನ್ನ ಬಳಿಯಲ್ಲಿಯೇ ಉಳಿಯಲು ವ್ಯವಸ್ಥೆ ಮಾಡುತ್ತಾಳೆ. ಆಕೆ ವಿರಹಾಗ್ನಿಯಲ್ಲಿ ಬೇಯುವಾಗ ಸಖಿಯರು ಈರ್ವರನ್ನು ಒಟ್ಟುಗೂಡಿಸುತ್ತಾರೆ. ಮಾಯೆಗೆ ಅಲ್ಲಮ ನಿರ್ದೇಹನಾಗಿ ಗೋಚರಿಸಿ ಆಕೆಯ ವಶವಾಗುವುದಿಲ್ಲ. ಆಗ ಆಕೆಯ ತಾಯಿ ಬಂದು ವಿಚಾರಿಸಿ ಮೊದಲು ಕುಪಿತಳಾಗಿ, ಕೊನೆಗೆ ಸಖಿಯರ ಮಾತಿಗೆ ಮೆಚ್ಚಿ ತನ್ನ ಒಪ್ಪಿಗೆ ಸೂಚಿಸುತ್ತಾಳೆ.

ಇತ್ತ ಮಾಯಾದೇವಿ ಅಲ್ಲಮನನ್ನು ವಶಪಡಿಸಿಕೊಳ್ಳಲಾರದೆ ದುಃಖತಪ್ತಳಾಗಿರಲು ಅತ್ತ ಪಾರ್ವತಿ ಅವಳನ್ನು ಎಚ್ಚರಿಸಲು ವಿಮಲೆಯನ್ನು ಕಳುಹಿಸುತ್ತಾಳೆ. ಈ ಮದ್ದಳೆಗಾರನೇ ಅಲ್ಲಮನೆಂಬುದನ್ನು ಮತ್ತು ಅಲ್ಲಮನಾರೆಂಬುದನ್ನೂ ವಿಮಲೆ ಮಾಯೆಗೆ ನಿರೂಪಿಸಿ ಮನದಟ್ಟು ಮಾಡುತ್ತಾಳೆ. ಆಗ ಅಲ್ಲಮ ಈ ಮದ್ದಳೆ ವಿನೋದ ಸಾಕೆಂದು ಅದನ್ನು ಒಡೆದುಹಾಕಿ ಅಲ್ಲಿಂದ ಹೊರಟು ಹೋಗುತ್ತಾನೆ. ಆದರೂ ಮಾಯೆ ಬಿಡದೆ ಸಖಿಯರೊಡನೆ ಆತನ ಬೆನ್ನಟ್ಟಿ ಕಾಡುಮೇಡು ಅರಸಿ ಕೊನೆಗೂ ಆತನನ್ನು ಕಾಣುತ್ತಾಳೆ. ಆಗ ಅಲ್ಲಮನೊಂದಿಗೆ ಆಕೆ ನಡೆಸುವ ಸಂವಾದವೇ ಪ್ರಸ್ತುತ ಪಠ್ಯಭಾಗವಾಗಿದೆ:

ಎಲೈ ಬಾಲೆಯೇ, ತನ್ನ ಚಿನ್ನ ಸಲುವಳಿಯಾಗದೆ ಹೋದರೆ ಅಕ್ಕಸಾಲೆಯನ್ನು ದುರುಳತನದಿಂದ ನಿಂದಿಸಬಹುದೇ? ನೀನು ಶಿವನನ್ನು ಪೂಜಿಸುವ ಕ್ರಮವನ್ನು ತಿಳಿಯದೆ ಬುದ್ಧಿಗೆಟ್ಟು ಹುಸಿಭಕ್ತಿಯ ಪರವಶತೆಯಲ್ಲಿ ಏಕೆ ಫಲವನ್ನು ಇಚ್ಚಿಸುವೆ ಮಾಯೆ ಕೇಳು ಎಂದು ಅಲ್ಲಮನು ನುಡಿಯುತ್ತಾನೆ.

೧) ಆಗ ಮಾಯೆಯು ತಾನು ನಿನ್ನಲ್ಲಿ ಸುಖವನ್ನು ಸೂರೆ ಮಾಡಿ, ಸಂತೋಷದಿಂದ ನಿನ್ನಿಂದ ಶಿವತತ್ವಾನುಭಾವದ ನಿಜಸ್ವರೂಪವನ್ನು ತಿಳಿದು, ತನ್ನ ಪ್ರತಿಜ್ಞೆಯನ್ನು ಕೊರೆತಯಾಗದಂತೆ ಪೂರ್ಣಮಾಡಿ, ಶಿವನ ಆಸ್ಥಾನದಲ್ಲಿ ಶೋಭಿಸುವೆನೆಂಬ ಅಭಿಮಾನದಿಂದ ನಿನ್ನನ್ನು ನಂಬಿದ್ದೆನು ಎಂದು ಅಲ್ಲಮನಿಗೆ ಹೇಳುತ್ತಾಳೆ.

೨) ಆಗ ಅಲ್ಲಮನು ಕಾಮವೆಲ್ಲಿ ಪರಮತತ್ವದ ಎಲ್ಲೆಯೆಲ್ಲಿ? ಕತ್ತಲೆಯಲ್ಲಿ ಸೂರ್ಯನೆಲ್ಲಿ? ಅರಿಸಿನವೆಲ್ಲಿ ಬಿಸಿಲೆಲ್ಲಿ? ಇನ್ನು ಅಸಂಬದ್ಧವಾದ ಮಾತು ಸಾಕು. ನೀನೆಲ್ಲಿ ಆ ಮಹಾಘನವೆಲ್ಲಿ? ಹುಚ್ಚಿ ಕ್ಷೇಮದಿಂದ ನೀನು ಬಂದ ದಾರಿಯಲ್ಲಿ ಹೋಗೆನ್ನುತ್ತಾನೆ.

೩) ತನ್ನ ಕನಸು ಮನಸ್ಸಿನಲ್ಲಿ, ತನುವಿನಲ್ಲಿ ನೀನು ಸುಳಿದು ಪ್ರೀತಿಸಿ ಇಷ್ಟು ಆಯಾಸಗೊಳಿಸಿ (ಈಗ) ಕರುಣೆಯಿಲ್ಲದೆ ನೀನು ತನ್ನಲ್ಲಿ ಸಿಟ್ಟಾಗಿ ನುಡಿದರೆ ತಾನು ಬಿಡುವೆನೆ? ಭಾವಿಸಲು ತನಗೆ ಸಾವು ಸಂಭವಿಸಿದರೂ ಸಂಭವಿಸಲಿ ಬಿಡೆನು ಎಂದು ಮಾಯೆ ಹಟ ಮಾಡುತ್ತಾಳೆ.

೪) ಕನಸಿನಲ್ಲಿ ಚೇಳು ಕಚ್ಚಿದರೆ ನೋವಾಯಿತೆಂದು ಇರದೆ ಮೇಲೆದ್ದು ನರಳುವ ಮನುಷ್ಯರುಂಟೆ? ಹುಚ್ಚಿ, ನಿನ್ನ ಮನೋವಿಕಾರಗಳು ನಿನಗೆ ಕಾಣಿಸಿದರೆ ತನ್ನಲ್ಲೇಕೆ ನೀನು ಸಿಟ್ಟು ಮಾಡುತ್ತಿರುವೆ? ತಾನು ಸ್ವಲ್ಪವೂ ನಿನ್ನ ಸಂಬಂಧವಾದ ಚಿಂತೆಗೆ ಗುರಿಯಾಗಲಾರೆನು, ಮಾಯೆ, ಕೇಳು ಎಂದು ಅಲ್ಲಮನು ನುಡಿಯುತ್ತಾನೆ.

೫) ಪಂಥ ಹುಟ್ಟಿದ ಮೇಲೆ ತಾನು ಇನ್ನು ಎಷ್ಟು ದಿವಸಗಳಿದ್ದಾದರೂ ತನ್ನ ಪ್ರತಿಜ್ಞೆಯನ್ನು ಕೊನೆಗೊಳಿಸಬೇಕು. ಹಾಗಲ್ಲದೆ ಭಾಷೆ ಉಳಿದು ನಿರಾಶೆಯಿಂದ ಕೈಲಾಸಕ್ಕೆ ಹಿಂತಿರುಗಿದರೆ ಹೆಣ್ಣುತನಕ್ಕೇ ಅದು ಹಾನಿ (ಹೀಗಿರಲು) ತಾನು ಅಲ್ಲಿಗೆ ಹೇಗೆ ಹೋಗಲಿ ಕೇಳೆನ್ನುತ್ತಾಳೆ ಮಾಯೆ

೬) ಸಮುದ್ರದ ನೀರೆಲ್ಲವೂ ಅಮೃತದ ತೊರೆಗಳಾದರೂ ಆಗಬಹುದು. ಮೇರು ಪರ್ವತ ಚಿಗುರಿ ಹಬ್ಬಿದರೂ ಹಬ್ಬಬಹುದು. ಭೂಮಂಡಲದ ಗಿಡಗಳೆಲ್ಲಾ ಕಲ್ಪವೃಕ್ಷಗಳಾದರೂ ಆಗಬಹುದು. (ಹಾಗೆ) ಸಂಭವಿಸಿದರೂ ಯಾವ ಕಾಲಕ್ಕೂ ಹೆಣ್ಣಾದ ಮಾಯೆಗೆ ಪರಮತತ್ವಜ್ಞಾನವಿಲ್ಲ ಎಂದು ಅಲ್ಲಮನು ನುಡಿಯುತ್ತಾನೆ

೭) ನಯವಾಗಿ ಮಾತನಾಡಿ ನೀನು ಮೆಲ್ಲನೆ ಜಾರಿ ಹೋದರೆ ಕೇಳು, ತನ್ನ ಪ್ರತಿಜ್ಞೆ ಸಲ್ಲಿಸುವವರೆಗೆ ತಾನು ನಿನ್ನನ್ನು ಬಿಡುವೆನೆ? ನಿರ್ದೇಹಿ ತಾನು ಎಂಬ ಬಿಂಕದ ಒಯ್ಯಾರ ಬೇಡ. ಇನ್ನೇನು ಮಾಡಿದರೂ ನಿನ್ನನ್ನು ಹಿಡಿದಲ್ಲದೆ ಬಿಡೆನು ಎಂದು ಮಾಯೆಯು ದೃಢನಿರ್ಧಾರ ಮಾಡುತ್ತಾಳೆ.

೮) ಬಯಲನ್ನು ಬಂಧಿಸಬೇಕೆಂದು ದೃಢನಿರ್ಧಾರ ಮಾಡಲು ಅದು ಸಿಗಬಲ್ಲುದೆ? ನಿಶ್ಚಿತವಾಗಿಯೂ ತನ್ನನ್ನು ಹಿಡಿದುಕೊಳ್ಳುವೆಯಾದರೆ ನೀನು (ಪ್ರಯತ್ನಿಸಿ) ನೋಡು–ಎಂದು ಪ್ರೀತಿಯಿಂದ ತನ್ನ ದೃಢನಿರ್ಧಾರ ಮಾಡಿ ಮರುನಿಮಿಷದಲ್ಲಿ ಮಾಯೆಗೆ ನಿರ್ವಯಲ ಬಲೆಯನ್ನು ಬೀಸಿ ಅಲ್ಲಮನು ಅಲ್ಲಿಂದ ನಿರ್ಗಮಿಸುತ್ತಾನೆ.

೯) ಬಳಿಕ ಅಲ್ಲಿಂದ ಅಲ್ಲಮ ಜಾರಿ ಹೋಗುತ್ತಾನೆ. ಈಕೆಗೆ ಅತಿಶಯವಾದ ದುಃಖ ಆವರಿಸುತ್ತದೆ. ಸಖಿಯರು ಸುಂದರಿ ಮಾಯೆಯನ್ನು ನಾನಾ ಬಗೆಯಾಗಿ ಸಮಾಧಾನ ಮಾಡುತ್ತಾರೆ. ತಪ್ಪು ಅಪವಾದ ಮಾಡಿದ ಮಾಯೆಗೆ ಅಲ್ಲಮನು ತನ್ನ ನಿಜವನ್ನು ತೋರಿಸುವನೇ? ಗುರು ಗುಹೇಶ್ವರನಾದ ಅಲ್ಲಮಪ್ರಭುವು ಎಲ್ಲವನ್ನು ಮೀರಿದ ವಸ್ತುವಾಗಿರುವನು.

೧೦) ಮುಂದೆ ಸಖಿಯು ಮಾಯೆಗೆ ಅವಳ ಜನ್ಮಕಾರಣವನ್ನು ತಿಳಿಸಿ ಕೈಲಾಸಕ್ಕೆ ಕರೆದೊಯ್ಯುತ್ತಾಳೆ. ಇದರಿಂದ ಪಾರ್ವತಿ ದುಃಖಿಸಲು ಶಿವ ಅವಳನ್ನು ಸಂತೈಸಿ ಆಕೆಯ ಸಾತ್ವಿಕ ಕಳೆಯನ್ನು ಕಳುಹಿಸಿದರೆ ಅಲ್ಲಮನಿಂದ ಅನುಗ್ರಹವಾಗುತ್ತದೆನ್ನುತ್ತಾನೆ. ಅಂತೇ ಪಾರ್ವತಿ ಕಳುಹಿಸಿದ ಸಾತ್ವಿಕರಳೆ ಅಕ್ಕಮಹಾದೇವಿಯಾಗಿ ಜನಿಸಿ ಅಲ್ಲಮನಿಂದ ಅನುಗ್ರಹೀತಳಾಗುತ್ತಾಳೆ. ಅದೇ ಸಂದರ್ಭದಲ್ಲಿ ವೃಷಭನು ಬಸವನಾಗಿ ಹುಟ್ಟಿ ತನ್ನ ಭಕ್ತಿಸಾಧನೆಯಿಂದ ಅಲ್ಲಮನು ಎಲ್ಲರಿಗೂ ಸಿಕ್ಕುವಂತಾಗಲೆಂದು ಹರಸಿ ಕಳುಹಿಸುತ್ತಾನೆ. ಹೀಗೆ ಅಲ್ಲಮನ ಕತೆ ಮುಂದುವರಿಯುತ್ತದೆ.

**ಘಟಕ : 3**

## 2) ಜಾನಪದ ಶರಣ ಕಾವ್ಯಗಳು : ಹರಳಯ್ಯನ ಚರಿತ್ರೆ

### ಸುವ್ವಾ ಬಾ ಚನ್ನಬಸವಯ್ಯ ಸುವ್ವ । ಸೊಲ್ಲು ।

ಆಳುದ್ದ ಜಲದಲ್ಲಿ ಒಂತೋಳು ಗಾತುರ ಪದ್ಮಿ
ಹೇಳುವೆನು ಬಸವಣ್ಣ ವಚನವ ।

ಹತ್ತಾಳುದ್ದ ಜಲದಲ್ಲಿ ಎತ್ತಲಾರದ ಪದ್ಮಿ
ನಾ–ನೆತ್ತುವೆ ಬಸವಣ್ಣ ವಚನವ ।

ಸತ್ಯುವಂತರ ಕತೆಯ ನೀವು ಭಕ್ತೀಲಿ ಕೇಳಿದರೆ
ನೀವೊತ್ತಿದ್ದ ಪಾಪ ಪರಿಯಾರ ।

ಕತ್ತಲೆ ಹರಿದು ಕರ್ಮ ಹರಿದು ನಿಮ್ ಪಾಪ
ನಾಳೆ ಕತ್ತರಿಸಿ ಹೋದೊ ಪುಡಿಯಾದೊ ।

ಕಲ್ಯಾಣ ಎನ್ನದ್ದು ನಲವತ್ತೆಂಟು ಯೋಜನ
ಆ ಕಲ್ಯಾಣ ಪಟ್ಟಣಕೆ ಬಿಜ್ಜಳರಾಜ ।

ಬಿಜ್ಜಳನ ದೊರೆತನ ಬಸವಣ್ಣನ ಗುರುಪೀಠ
ಆ ಕಲ್ಯಾಣ್ಕೆ ಗುರು ನಮ್ಮ ಬಸವಣ್ಣ ।

ಗುರುಗಳು ಬಸವಣ್ಣ ದೊರೆಯೆ ಬಿಜ್ಜಳರಾಜ
ಅವುನ್ಗದ್ಗೆವೊಳುಗೆ ಕೊಂಡುಗ ಮಂಚಣ್ಣನ ದರ್ಬಾರು ।

ಕೋಟುಗೊಬ್ಬ ಶರಣಾರು ಕುಲುಕೊಬ್ಬ ಭಕ್ತಾರು
ಇರುವರು ಕಲ್ಯಾಣ್ದ ಮಠುದಲ್ಲಿ ।

ಆದಿ ಕಲ್ಯಾಣ್ದಲ್ಲಿ ಯಾವ್ ಯಾವ ಸರಣಾಯ
ನಾವ್ಹೇಳುವೆವು ಸರಣಾರ ಶಿವುಕತೆಯ ।

ಕಕ್ಕಯ್ಯ ಚಿಕ್ಕಯ್ಯ ಒಕ್ಕಲುಗರ ಮುದ್ದಯ್ಯ
ಕಿನ್ನರಿ ಬೊಮ್ಮಯ್ಯ ಸರಣರಲ್ಲಿವರು ।

ಕಿನ್ನರಿ ಬೊಮ್ಮಯ್ಯ ಅಂಬುಗರ ಚೌಡಯ್ಯ
ನಮ್ಮ ಕುಂಬಾರ ಗುಂಡಯ್ಯ ಸರಣರಲ್ಲಿರುವರು ।

ಕುಂಬಾರ ಗುಂಡಯ್ಯ ಕುರುಬಾರ ಬೀರಪ್ಪ
ನಮ್ಮ ಮಡಿವಾಳ ಮಾಚಯ್ಯ ಸರಣರಲ್ಲಿರುವಾರು ।

ಮಡುವಾಳ ಮಾಚಯ್ಯ ಹಡಪದ ಅಂಪಣ್ಣ
ಈಡುಗರ ಕೊಂಡಯ್ಯ ಸರಣಾರಲ್ಲಿರುವರು ।

ಈಡಿಗರ ಕೊಂಡಯ್ಯ ಕನ್ನತ್ರಿ ಮಾರಯ್ಯ
ನಮ್ಮ ಕೊರಮಾರ ತಿಮ್ಮಯ್ಯ ಸರಣರಲ್ಲಿರುವರು ।

ಕೊರಮಾರ ತಿಮ್ಮಯ್ಯ ನುಲಿಯ ಚಂದಯ್ಯ
ನಮ್ ದೇವಾಂಗ್ದ ದಾಸಯ್ಯ ಸರಣರಲ್ಲಿರುವರು ।

ದೇವಂಗ್ದ ದಾಸಯ್ಯ ತುರುಕರ ಪೀರಯ್ಯ
ನಮ್ಮ ವಡ್ಡಾರ ಮುದ್ದಯ್ಯ ಸರಣರಲ್ಲಿರುವಾರು ।

ಇಂತ ಸತ್ಯವುಳ ಸರಣಾರು ಇನ್ನು ಇರುವರಪ್ಪ
ಅಲ್ಲಿ ಸತ್ವಂತರ‍್ಯಾರು ಅವ್ರ ಮಠದಲ್ಲಿ ।

ಕಣ್ಣಿನ ಒಳುಗೆಲ್ಲ ಕಡಜನ ಗೂಡ್ ಕಟ್ಟಿದೋರು
ಮೂಗಿನ ಒಳುಗೆಲ್ಲ ಮೂಗುತ್ತ ಬೆಳುದೋರು ।

ಕಿವಿಯ ಕರ್ಣದ ಒಳುಗೆ ಸಿಬುಲಕ್ಕಿ ಮರಿ ಮಾಡಿದೋರು
ಬೆನ್ನೀನ ಮ್ಯಾಲೆಲ್ಲ ಬನ್ನಿಮರ ಸಾಕೋರು ।

ಹೊಟ್ಟೆಯ ಮ್ಯಾಲೆಲ್ಲ ತೊಟ್ಟಿ ಮಳೆ ಬೆಳೆದವರು
ಹುಬ್ಬೀನ ಮ್ಯಾಲೆಲ್ಲ ದ್ರಬ್ಬೆಮೆಳೆ ಬೆಳೆದವರು ।

ಗಡ್ಡ ಮೀಸೆ ಒಳುಗೆ ಹಾವು ಚೇಳು ಸಾಕೋರು
ಕಂಕ್ಳನ ಒಳುಗೆ ಹೆಜ್ಜೇನ ಸಾಕೋರು ।

ಎಡುದ ಕಂಕುಳ ಒಳುಗೆ ಕಿರುದೇನ ಸಾಕೋರು
ಈಬುತ್ತಿ ಧರುಸೋರು ಇರುವಾರು ।

ರುದ್ರಾಕ್ಷಿ ಕಟ್ಟಿದೋರು ಭದ್ರಾಕ್ಷಿ ಕಟ್ಟಿದೋರು
ಜೋಳುಗೆಯ ಹೊತ್ತವರು ಇರುವಾರು ।

ಕಾವೀಯ ಕಂತೇಯವರು ಇಂತೆ ಸರಣರಲ್ಲಿ
ನಮ್ಮಾದಿ ಹರಳಯ್ಯ ಸರಣಾದಿರುವರು ।

ಆದಿ ಹರುಳಯ್ಯ ಮಾದಾರಿ ಚನ್ನಯ್ಯ
ನಮ್ ಹೊನ್ನಯ್ಯ ಚನ್ನಯ್ಯ ಸರಣಾರು ।

ಇಂತಿಂತೆ ಸರಣಾರ ಕಟುಕೊಂಡು ಬಸವಣ್ಣೋರು
ಇವುರುಪದೇಸ ಹೇಳ್ಕೊಂಡು ಇರುವಾರು ।

ಇವುರ್ಗೆ ಗುರುಬೋದ್ನೆ ಹೇಳ್ಕೊಂಡು ಗುರುವಾಗಿ ಇರುವಾರು
ಹಿರಿಯರಿಗೆ ಹಿರಿಯೋರು ಬಸವಣ್ಣ ।

ಹೆಂಗಸರ ಜನರಲ್ಲಿ ಸತ್ಯವುಳ್ಳವರು
ಯಾವ್ಯಾವ್ ಸರಣಾರು ಅಲ್ಲಿರುವಾರು ।

ಯಾವ್ಯಾವ್ ಸರಣಾರು ಅಲ್ಲಿರುವರೆಂದಾರೆ
ಬಸವಣ್ಣೋರ ಮಡದಿ ನೀಲಮ್ಮ ।

ಬಸವಣ್ಣೋರ ಮಡದಿ ದೆಸೆಯುಳ್ಳ ನೀಲಮ್ಮ
ಆ ಕಲ್ಯಾಣ ಕಟ್ಟಣಕೆ ಸಿವಸರಣೆ । ೬೦

ಆ ನೀಲಮ್ಮಯ್ಯ ತಾಯಿ ಯಾಕೆ ಸರಣಾರು ಅಂದಾರೆ
ಒಕ್ಕಳಕ್ಕಿ ಹಾಕಿ ಒಂದ್ಮಾನ ಬ್ಯಾಳೆ ಹಾಕಿ ।

ಒಂದು ಬದನೆಕಾಯಿ ಚಿತ್ತುರಿಸಿ ಆ ತಾಯಿ
ಲಕ್ಕಸ್ದ ಮ್ಯಾಲೆ ತೊಂಬತ್ತಾರು ಸಾವುರ ಕೋಟಿ ।

ಗಣಂಗಳಿಗೆ ಊಟುಕೆ ಪಡುಸಿ ಆ ತಾಯಿ
ಮಿಕ್ಕೊಕ್ಕುವ ಪರುಸಾದವನು ತಂದು ।

ಮಿಕ್ಕೊಕ್ಕುದ ಪದಸಾದವನು ಕಲ್ಲು ಬಂಡೀಗೆ ಕಟ್ಟಿ
ಕಲ್ಯಾಣ್ದ ಬಾಗುಲ್ಗೆ ಹೂಡ್ಸುವರಂತೆ ।

ಅದಕಾಗಿ ಮಾತಾಯಿ ನೀಲಮ್ಮ ಶಿವಸರಣೆ
ಸರಣಯರೆಲ್ಲಲ್ಲ ದೊಡ್ಡ ಶಿವಸರಣೆ ।

ಬಸವಣ್ಣೋರ ತಂಗಿ ಅಕ್ಕನಾಗಮ್ಮಯ್ಯ
ಆ ಕಲ್ಯಾಣ್ದ ಪಟ್ಟುಣಕೆ ಪತುವಾರ್ತಿ ।

ಅಕ್ಕನಾಗಮ್ಮ ತಾಯಿ ಯಾಕೆ ಪತುವಾರ್ತಿ ಅಂದರೆ
ಪುರುಷರ ಭೋಗ ಇಲುವಲ್ಲ ।

ಪುರುಷರ ಭೋಗ ಇಲ್ಲದ ಹರುಸವುಳ್ಳ ನಾಗಮ್ಮ
ಹೆಂಗುಸರ ಜನುಗಳಿಗೆ ಉಪುದೇಸ ।

ಹೆಂಗುಸರ ಜನುಗಳಿಗೆ ಉಪುದೇಸ ಹೇಳುಕೊಂಡು
ಗುರುಬೋದ್ನೆ ಕೊಟುಕೊಂಡು ಇರುವಾರು ।

ಗುರುಮಂತ್ರ ಹೇಳುಕೊಂಡು ಶಿವುಮಂತ್ರ ಹೇಳುಕೊಂಡು
ಅಕ್ಕನಾಗಮ್ಮ ಮಾ ಪತುವಾರ್ತಿ ।

ಹೆಂಗುಸರ ಜನರಲ್ಲಿ ಮತ್ಯಾರು ಸರಣಾರು ಅಂದರೆ
ನೀರೀನ ಬೋರಮ್ಮ ಘನಸರಣೆ ।

ನೀರೀನ ಬೋರಮ್ಮ ಯಾಕೆ ಸರಣೆ ಅಂದಾರೆ
ಹೊತ್ತುನಂತೆ ಎದ್ದು ಈಬುತ್ತಿ ಕೊಳದಲ್ಲಿ ।

ಹೊತ್ತುನಂತೆ ಎದ್ದು ಈಬುತ್ತಿ ಕೊಳುಕೋಗಿ
ಒಂದು ಬಿಂದ್ಗೆ ನೀರ ತರುವಾಳು ।

ಒಂದು ಬಿಂದ್ಗೆ ನೀರ ತಂದು ಕಲ್ಯಾಣದಲ್ಲಿ ಮಡಗಿದರೆ
ಜಂಗುಮರಿಗೆಲ್ಲ ಅಡುಗೆ ಹದಗೂಡಿ ।

ಜಂಗುಮರಿಗೆಲ್ಲ ಮೀಯಣವ ಮಾಡಿ
ಕೈಕಾಲು ಮೊಕುವ ತೋಳುದಾರು ।

ಕೈಕಾಲು ಮೊಕುವ ತೊಳಿದಾರು ಜಂಗಮರು
ಊಟ ಮಾಡಿದ ಕೈಯ ಅಲುಕುವರು ।

ಊಟ ಮಾಡಿದ ಕೈಯ ಅಲುಕಿ ನೋಡಿದರೆ
ತುಂಬೂದ ಬಿಂದ್ಗೆ ತುಂಬುದಂಗೆ ।

ತುಂಬೂದ ಬಿಂದ್ಗೆ ತುಂಬುದಂತೆ ಇದ್ದುವಂತೆ
ಅದಕಾಗಿ – ಆ ನೀರಿನ ಬೋರಮ್ಮ ಘನಸರಣೆ ।

ಕೊಟ್ಟಣದ ನನ್ನಮ್ಮ ಅವ್ವ ಬಾಳ ಸರಣೆ
ಅವುಳ್ಯಾಕೆ ಸರಣೆ ಶಿವಶಿವಾ ।

ಒನಕೇನ ಸರಣ ಮಾಡಿದರೆ ಆ ಒನಕೆ
ತಾನೆ ಎದ್ದು ನವುಣೆ ಕುಟ್ಟುವುದು ।

ಒಕ್ಕ ನವುಣೆ ಕುಟ್ಟಿ ಅಕ್ಕಿ ಅಳ್ತೆ ಮಾಡಿದರೆ
ದೊಡ್ನೆ ಒಂದ್ಗಂಡ್ಗ ಅಕ್ಕಿ ಆಗುವಾದು ।

ಅದುಕೋಸ್ಕರವಾಗಿ ಕೊಟ್ಟಣದ ನನ್ನಮ್ಮ
ಕಲ್ಯಾಣದಲ್ಲಿ ಘನಸರಣೆ ।

ದೀಪದ ಮಲ್ಲಮ್ಮ ಎಣ್ಣೇಯ ಚನ್ನಮ್ಮ
ಇಂತಿಂತೆ ಸರಣಾರ ಕಟ್ಟುಕೊಂಡು ।

ಇಂತಿಂತೆ ಸರಣಾರ ಕಟುಕೊಂಡು ಬಸವಣ್ಣ
ಅವುರಾಳಿದರು ಕಲ್ಯಾಣ್ದ ಗುರುಮಠುವ ।

"ಇಂತಾ ಕಲ್ಯಾಣ್ದ ಪರಿಪಾಲ್ನೆ ಮಾಡುವಂತ
ಗುರುವೀನ ದರುಸಣವ ನಾ ಮಾಡಬೇಕು ।

ಗುರುವೀನ ದರುಸಣವ ನಾ ಮಾಡಬೇಕು" ಅಂತ್ಹೇಳಿ
ಮಾನ್ಯ ಹರುಳಯ್ಯ ನುಡಿದಾರು ।

ಕಲ್ಯಾಣಮ್ಮಯ್ಯನ ಕರ್ದು ಹರಳಯ್ಯನವರು
"ನಾನು-ಹೋಗಿ ಬರುತೀನಿ ಗುರುವೀನ ದರುಸರಣಕೆ ।

ಗುರು ನೋಡ್ದಿದ್ದ ಮ್ಯಾಲೆ ನಮ ಕರ್ಮ ಸಮೆಯೋದಿಲ್ಲ
ಜಂಗಮರ ಸಭೀಕೆ ದೊಡ್ಡವರು ಬಸವಣ್ಣ ।

'ಬಸುವಣ್ಣ!' ಎನ್ನುತ್ಹೇಳಿ ದಿನುಕೊಂಡು ಸಲವಾದ್ರು
ನಮ್ಮ ಬಾಯ್ನಲ್ಲಿ ಹೊಗಳಿದರೆ ।

ನಮ್ಮ ಬಾಯ್ನುಲ್ಲಿ ಹೊಗಳಿದರೆ ಕಲ್ಯಾಣಿ
ದೆಸೆಗಟ್ಟು ಹೋಗುವುದು ನಮ್ಮ ಪಾಪುವೆಲ್ಲ ।

ಅದುಕೋಸ್ಕುರವಾಗಿ ನಾವೋಗುಲ್ಯಾ ಕಲ್ಯಾಣಿ
ನೀನಡುಗೆ ಮಾಡೂತನಕ ನಾ ಬರುತೀನಿ ।

ಬಂದು ಮಾಡ್ಕೋಳತೀನಿ ನವ ಲಿಂಗದ ಪೂರ್ಜ್ಯು
ಕಂಡು ಬರಬೇಕು ನನ್ನ ಗುರುವನ್ನು" ।

ಹಾಗಂದ ಮಾತನ್ನ ಕೇಳಿ ಕಲ್ಯಾಣಮ್ಮ
ಶಿವ ಶಿವ ಹೋಗಿ ಬನ್ನಿ ಗುರುವಿನ ದರುಸಣಕೆ ।

ನೀವೋಗಿ ಅವರ ದರುಸಣ ಮಾಡಿದರೆ
ನನ್ನ ಹೃದಯದ ಕರ್ಮವು ಪರಿಯಾರ ।

ಗಂಡ ಮಾಡಿದ ಪೂಜೆ ಅದು ನನ್ಗ ಸಲ್ಲುವದೆ”ಂದು
ಆ ಕಲ್ಯಾಣಮ್ಮಯ್ಯ ನುಡಿದಾಳು ।

ಕಕ್ಕೆ ಸೊಪ್ಪುನ ಮತವ ಬಿಟ್ಟರು ಹರಳಯ್ಯ
ಹೊರುಡುದರು ಕಲ್ಯಾಣ್ದ ಗುರುಮತಕೆ ।

ಮಾನ್ಯ ಹರುಳಯ್ಯನವರು ಮತವ ಬಿಟ್ಟಾಗಲೆ
ಹರಳಯ್ನ ಲಿಂಗ ಮುಂದೆ ಹೊರಟಿತ್ತು ।

ಮೊದಲು ಹೊರಟೋಗ್ಬುಡ್ತು ಹರಳಪ್ಪನ ಲಿಂಗ
ಬಸವಣ್ಣನವರ ಲಿಂಗದ ಜೊತೆಯಲ್ಲಿ ।

ಬಸವಣ್ಣನವರ ಲಿಂಗದ ಜೊತೆಯಲ್ಲಿ ಹೋಗಿ
ಆ ಲಿಂಗ ಲಿಂಗವೆರಡೆ ಮಾತಾಡುತಾವೆ ।

“ಈವತ್ತು ಬರುತ್ತಾನೆ ಸರಣ ಹರಳಯ್ಯ
ಗ್ಯಾಪಕವಿರುಲಪ್ಪ ನಿಮ್ ಮನದಲ್ಲಿ” ।

ಆ ಲಿಂಗ ಹೇಳಿದ ಮಾತ ಕೇಳಿದರು ಬಸವಣ್ಣ
ಇಂದೇನ್ ಕಾರ್ಣ ಬಂದನೊ ಹರಳಯ್ಯ ।

ಎಡದ ಬಲದ ಗ್ಯಾನ ಮರೆತರು ಬಸವಣ್ಣ
ಹರುಳಯ್ಯ ಬರುತ್ತಾನೆ ಎಂದು ಕುಳಿತಾರು ।

ಬಂದರು ಹರಳಪ್ಪ ಆದಿ ಕಲ್ಯಾಣ ಪುರಕೆ
ಅದಕರುವತ್ತು ಆರು ಬಾಗುಲು ।

ಅದಕರುವತ್ತು ಆರು ಬಾಗುಲುದಾಗೆ ಬಂದು
ಆ ಕಡೆಯ ಬಾಗುಲಲಿ ನಿಲುತಾನೆ ।

ಹರುಳಯ್ಯ ಬಂದು ನಿಂದ ಅರುವಾಯ್ತು ಬಸವಣ್ಣನಿಗೆ
“ಮಾನ್ಯ ಹರುಳಯ್ಯ ನನ ಗುರುಮತಕೆ ।

ಮಾನ್ಯ ಹರುಳಯ್ಯ ನನ್ನ ಮತಕೆ ಬರುತಾರೆ
ಅವ್ರ ತಡಿಬ್ಯಾಡಿ ಮರ್ಯಾದಿಯಿಂದ ಕರೆತನ್ನಿ ।

ತಡಿಯಾ ಬೇಡಿ ಹರುಳಯ್ಯ್ನ ಒಳಗಡೆ ಕರ್ಕೊಂಡ್ಬನ್ನಿ"
ಹೀಗೆಂದು ಒಡ್ಡೋಲಗ್ದಿಂದ ಹೇಳಿ ಕಳುಸಿದರು ।

"ಯಾವ ಜಂಗಮ್ರು ಬಂದರು ಬಿಡಬೇಡಿ ಅನುತಿದ್ರು
ಇಂದು ಸಮಪ್ಣೆ ಕೊಟ್ಟವ್ರೆ ಹರುಳಯ್ಯ ।

ನಡೆಯಪ್ಪ ಹರುಳಯ್ಯ ಗುರು ಅಪ್ಣೆಯಾಗದೆ
ನಿನಗಡ್ಡಿಯಿಲ್ಲ ಒಳಗಡೆ ದಯಾಮಾಡು" ।

ಅಷ್ಟು ಮಾತು ಕೇಳಿ ಇಷ್ಟೊಂದು ಕರುಣವು
ನನ್ನ ಗುರುವಿಗ ಇದ್ದಾರೆ ಸಾಕೆಂದು ।

ಗುರುವ ಗತಿಯೆಂದು ಗುರುವೆ ಮತಿಯೆಂದ
ಹರಳಯ್ಯ ಒಳಗಡೆಗೆ ಹೊರಟನು ।

ಜಂಗುಮರ ಸಭೆಯಲ್ಲಿ ಕುಳಿತಿದ್ದರು ಬಸವಣ್ಣ
ಬಂದ ಹರುಳಯ್ಯನವರ ನೋಡಿದರು ।

ಬಂದ ಹರುಳಯ್ಯನವರ ಒಳ್ಳೆ ತಕ್ಷಣ ನೋಡಿದರು
"ಬಂದಪ್ಪ ಹರುಳಯ್ಯ" ಎನ್ನುತ್ತಾರೆ ।

ಬಂದಪ್ಪ ಹರುಳಯ್ಯ ಎನ್ನುತ್ತಾರೆ "ನಿಮ್ಗೆ ಸರಣು ಸರಣಾರ್ತಿ
ಬಾರಪ್ಪ ಸರಣ ಹರುಳಯ್ಯ" ।

"ಬಂದಿ ಬನ್ನಿ ಬುದ್ಧಿ ನಿಮಗೆ ಸರಣು" ಎನುತ್ಹೇಳಿ
ಕೈಯೆತ್ತಿ ಕರವ ಮುಗಿದಾನು ।

"ದೇವರು ಮಾಡುವುದೆ ಸರಣು ಸರಣಾರ್ತಿಯ
ಸರಣ ಎಂದವುನಲ್ಲಿ ಗುರುವೀಗೆ ।

ಸರಣು ಎಂದವನಲ್ಲ ಗುರುವೀಗೆ ಹರಳಯ್ಯ"
ಅಲ್ಲಿದ್ದೋರ ಮನಸ್ಸು ಮರುಗೀತು ।

"ಅವರದು ಎರಡು ಸರಣ ಹರಳಯ್ಯನದು ಒಂದು ಸರಣು
ಇದು ಏನೋ ಕಾಣಪ್ಪ ತಿಳಿಯದು" ।

"ಎಂದೂ ಇಲ್ಲದ ಹರಳಯ್ಯ ಇಂದೇನು ಬಂದೀರಿ
ಮನದ ಸಂದೇಗ ಹೇಳಪ್ಪ ನನ್ನ ಜೊತೆಯಲ್ಲಿ" ।

"ಗುರುವೀನ ದರುಸಣಿಕೆ ಕರುಣ ಹುಟ್ಟಿತು ಬುದ್ದಿ
ತಮ್ಮ ದರುಸಣಕೆ ಬಂದಿ ಬಸವಣ್ಣ" ।

"ಹೌದು ಹರುಳಪ್ಪ ನನ್ಮೇಲುನ ಪ್ರೇಮ ಅಷ್ಟಿದ್ದರೆ ಸಾಕು
ಊಟ ಮಾಡೋಗು ಮಠದಲ್ಲಿ" ।

ದೇವುರಾಡಿದ ಮಾತ ಕೇಳಿದರು ಹರುಳಯ್ಯ
"ಶಿವಪೂಜೆಮಾಡಿಲ್ಲ ನನ್ನ ಗುರುವೇ ।

ಶಿವ ಪೂಜೆ ಮಾಡಿಲ್ಲಾ ನನಗುರುವೇ ಶಿವಾರ್ಚನೆ ತೀರಿಲ್ಲಾ
ತಮ್ಮ ಪಾದದ ದರುಸಣ ಸಾಕು ನನ ಗುರುವೇ ।

ತಮ್ಮ ಪಾದದ ದರುಸಣ ಸಾಕು ಹೋಗಿ ಬರುತ್ತೀನಿ ಬುದ್ಧಿ
ಹೋಗಿ ಬರುವೆ ನನ್ನ ಗುರು ಮಠಕೆ ।

ಹೋಗಿ ಬರ್ತೀನಿ ಸ್ವಾಮಿ" ಹಾಗೆಯ ಹರುಳಯ್ಯ
ಆಗ ಕಲ್ಯಾಣ ಬಿಟ್ಟಿಂದಿರುಗಿ ಹೊರಟನು ।

ಅರವತ್ತಾರು ಬಾಗಲ ಕಡಾದಾರು ಹರಳಯ್ಯ
ರಾಜ ಬೀದಿಗೆ ಬಂದ ಹರಳಯ್ಯ ।

ಬಸವಣ್ಣೋರ ಸರಣು ಇವುನ್ಮೇಲೊಂದುಳಿಯಾಲಾಗಿ
ಹರುಳಯ್ನ ನೇತ್ರ ಕಾಣದಲ್ಲ ।

ಎರಡು ಕಣ್ಣುಗಳೂವೆ ಹರುಳಯ್ಗೆ ಕಾಣ್ದಂಗಾದೊ
ಹುಡುಕಾಡುತಾನೆ ರಾಜಬೀದಿ ಒಳಗೆ ।

ಹುಡುಕಾಡುತಾನಲ್ಲೊ ತಡುಕಾಡುತಾನಲ್ಲೊ
ನಾ ಕೆಟ್ಟೆ ಅಂದ ತನ್ನ ಮನದಲ್ಲಿ ।

"ದೊಡ್ಡೋರ ದರುಸಣಕೆ ನನ ಪಾಪ ಕಳಿಯಾಕೆ ಬಂದಿ
ಕಳಿಯಾನಿಲ್ಲ ಪಾಪ ಶಿವ ಶಿವಾ ।

ಕಳಿಯನಿಲ್ಲ ಪಾಪ ಶಿವ ಶಿವ ಮತ್ತಷ್ಟು
ಬಂತಲ್ಲೊ ನನ್ನ ರುದಯಕ್ಕೆ ।

ನನ್ನ–ಕಕ್ಕೆಸೊಪ್ಪುನ ಮಠಕೆ ಕರುಕೊಂಡೋಗೋರ್ಯಾರಪ್ಪ
ನಾ ಕೆಟ್ಟೆ" ಎಂದರುಳಯ್ಯ ಅಳುತಾನೆ ।

ಇಲ್ಲಿ–ಹುಡುಕಾಡು ಹರುಳಯ್ಯ್ನ ಲಿಂಗ ಹೊರಟ್ಹೋಗಿ
ಕಲ್ಯಾಣಮ್ನ ಜೊತೆಯಲ್ಲಿ ತಿಳಿಸೀತು ।

“ಹರಳಯ್ ಬತ್ತಾವರಂತ ನೀ ಅಡ್ಗೆ ಮಾಡೀಯ ತಾಯಿ
ಕಣ್ಣಿಲ್ಲ ನಿನ್ನ ಹರಳಯ್ಗೆ ।

ಕಣ್ಣಿಲ್ಲ ಕಾಣಮ್ಮ ನಿನ ಗಂಡ ಹರುಳಯ್ಗೆ
ಹುಡುಕಾಡುತಾನೆ ರಾಜಬೀದೀಲಿ” ।

“ಅಯ್ಯಯ್ಯೊ ಹಂಗಂದರೇನಪ್ಪ ಶಿವಲಿಂಗ್ವೆ?”
ಅಡ್ಗೆ ಮಾಡೋದ ಬಿಟ್ಟಳಲ್ಲೆ ।

ಅಡ್ಗೆ ಮಾಡೋದ ಬಿಟ್ಟು ಕಕ್ಕೆಸೊಪ್ಪುನ ಮಠವ ಬುಟ್ಟು
ಓಡುತ್ತ ಬರುತ್ತಾಳೆ ಕಲ್ಯಾಣಮ್ಮ ।

ಓಡುತ ಬಂದರು ರಾಜಬೀದಿಗೆ ತಾಯಿ
ತಡಕಾಡುತಿದ್ರು ಹರಳಪ್ಪ ।

ತಡಕಾಡೂ ಹರಳಪ್ನ ಕಂಡುಕೊಂಡು ಕಲ್ಯಾಣಮ್ಮ
ಹೋಗಿ ಮುಂಗೈಯ್ಯ ಹಿಡುಕೊಂಡ ।

“ಶಿವ ಶಿವ ಯಾರೊ ನಾಕಾಣೆ ನನ ಕೈಯ ಮುಟ್ಟಿದೋರ
ನನ್ನ ಕೈಯಿಡುದೋರ್‍ಯಾರ ಹೇಳಿ ನನ್ ಜೊತೆಯಲ್ಲಿ” ।

“ಯಾರು ಬಂದಾರು ಸ್ವಾಮಿ ನಿಮ್ ಕೈಯಾನೆ ಹಿಡಿವುದಕೆ?
ನಾನು ಕಾಣಪ್ಪ ನಿನ್ನ ಕಲ್ಯಾಣಿ ।

ದೊಡ್ಡೋರ ದರುಸಣಕೆ ನೀವು ಹೊತ್ನಂತೆ ಬಂದುರಲ್ಲ
ಈ ಪಾಪ ಹೊತ್ತುಕೊಂಡ ಬಗೆಯೇನ ।

ಕಳುದೋಗಬೇಕಾಗಿತ್ತು ನಿಮ್ಮಾತ್ಮ ಲಿಂಗದ ಪಾಪ
ಏನು ನಡೆದಿತ್ತು ಅವರ ಮಠದಲ್ಲಿ ।

ಬಸವಣ್ಣನವರ್ಗು ನಿಮ್ಗು ಯಾವ್ ಮಾತು ನಡೆದೀತೆ”ಂದು
ಮಡ್ದಿ ಕೇಳಿದಳು ಕಲ್ಯಾಣಮ್ಮ ।

“ಕೇಳು ಕೇಳು ಕಲ್ಯಾಣಿ ನಡೆದ ಮಾತೇಳುತ್ತೀನಿ
ಕಲ್ಯಾಣ್ದ ಒಳಗಡೆ ನೇರುವಾಗಿ ।

ಕಲ್ಯಾಣ್ದಿ ಒಳಗಡೆ ನೇರುವಾಗಿ ಹೊರಟೋದಿ
ಗುರುಗಳು ಜಂಗುಮರ ಸಭೆಯಲ್ಲಿ ।

ಗುರುಗಳು ಜಂಗುಮರ ಸಭೆಯಲ್ಲಿ ಕುಂತಿದ್ದರು
ನಾನೋದ ತಕ್ಷಣವೆ ಏನಂದಾರು ।

ನಾನ್ಹೋದ ತಕ್ಷಣವೆ ಸರಣು ಸರಣೆಂದಾರು
ನಾ ಸರಣೆಂದು ಕೈಯ ಮುಗಿದೇನು ।

ಸರಣು ಎಂದವರಿಗೆ ಒಂದು ನಮುಸ್ಕಾರ ಮಾಡಿ
ಹೋಗುತೀನಿ ಅಂದಾಗ ಊಟ ಮಾಡು ಅಂದರು ।

ದರುಸಣವೆ ಸಾಕು ಎಂದು ಹೊರಗಡೆ ನಾ ಹೊರಟಿ
ಅರವತ್ತಾರು ಬಾಗಲ ಕಡದೇನು ।

ಅರವತ್ತಾರು ಬಾಗಲ ಕಡ್ಡು ನಾ ರಾಜ ಬೀದಿಗೆ ಬಂದಿ
ಬಂದ ತಕ್ಷಣ ಹೋಯ್ತು ನನ್ನ ಶಿವುನೇತ್ರ ।

ಹೊರುಟೋಯ್ತು ಕಲ್ಯಾಣಿ ಶಿವರುದ್ರವಾದ ಕಣ್ಣು
ನಾ ಕುರುಡಾನಾದಿ ಹೆಣ್ಣೆ ಜಗದಲ್ಲಿ ।

ಕುರುಡಾನಾದಿ ಕಲ್ಯಾಣಿ ಜಗದಲ್ಲಿ" ಅನುತ್ಹೇಳಿ
"ಈ ಕುರುಡ ಎಷ್ಟು ಕಾಲ ಬದುಕಿ ಫಲವೇನು?" ।

ಹಾಂಗಂದ ಮಾತನ್ನ ಕೇಳಿ ಕಲ್ಯಾಣಮ್ಮ
"ನೀವ್ ಹೇಳಿದ ಮಾತಿಗೆ ನಾ ಹೇಳುವೆ ಉತ್ತರವ ।

ತಾಳಿ ಹರುಳಯ್ಯ ಸಂದೇಗ ಪಡಬೇಡಿ
ಅದುರುತ್ತಾರ ನಾ ಹೇಳುವೆ ।

ದೊಡ್ಡೋರ ಸಭೆಯಲ್ಲಿ ಮಾಡಬಾರದೊಂಚಣಿ
ಮಾಡಿ ಬಂದುದರ ನವನರಕ" ।

"ಏನು ವಂಚಣೆಯ ಮಾಡೀದೆ ಕಲ್ಯಾಣಿ
ನೀನಾದ್ರು ಹೇಳಬಾರ್ದ ನನ್ನ ಜೊತೆಯಲ್ಲಿ?" ।

"ದೊಡ್ಡವರ ನಮುಸ್ಕಾರ ಉಳುದದೆ ನಿಮ್ಮೇಳೆ
ಆ ಬಾಕೀಗೊಂಟೋಯ್ತು ಶಿವನೇತ್ರ ।

ನೀವು ಸರಣು ಅಂತೇಳಿ ಅನ್ನಬಹುದೇನಪ್ಪ
ಅದ್ಕೆ–ಕಾಣಪ್ಪ–ನಮ್ಗೆ ಕೇಡುಗಾಲ". ।

"ಹಾಳು ಕಲ್ಯಾಣಿ ನನ್ಗೆ ತಿಳುವಳಿಕೆ ಬರನಿಲ್ಲ
ಇನ್ನು ಬರೊದಿಲ್ವ ನನ್ನ ಶಿವನೇತ್ರ ।

ಇನ್ನು ಬರೊದಿಲ್ವ ನನ್ನ ಶಿವನೇತ್ರ" ಎನುತೇಳಿ
ಅತ್ತತ್ತು ದುಕ್ಕಾ ಪಡುತಾನೆ ।

"ಕಣ್ಣು ಬರಬೇಕಾದ್ರೆ ನಾ ನಿಜವಾಗಿ ಹೇಳುತೀನಿ
ಆ ದೊಡ್ಡೋರಿಗೊಂದು ಪ್ರಾರ್ಥನೆಯ ।

ಆ ದೊಡ್ಡೋರಿಗೊಂದು ಪ್ರಾರ್ಥನೆಯ ನಾನೇಳಿದಂತೆ
ಕೇಳಕೊಂಡ ನೀವು ಮಾಡಬೇಕು ।

ನಾ ಹೇಳಿದಂತೆ ಪ್ರಾರ್ಥನೆಯ ಮನಸ್ಪೂರ್ತಿ ಮಾಡಿದರೆ
ಹೋಗಿರುವ ನೇತ್ರ ತಿರುಗಿ ಬರುತ್ತೀದೆ" ।

"ಏನೇಳಿಯೆ ಹೇಳು ಬುಡು ನೀ ಹೇಳುದಂಗೆ ಮಾಡುತೀನಿ
ಮಾಡ್ತೀನಿ ಬಸವಣ್ಣ ಸಾಕ್ಷಿಯಾಗಿ" ।
"ಮಾಡೀರ್ಯಾ ಹರುಳಪ್ಪ ನಾ ಹೇಳಿದಂತೆ ಪ್ರಾರ್ಥನೆಯ
ಹಂಗೊಂದು ಮಾತ ಕೇಳಪ್ಪ ।

ನಿಮ್ಮೆಡದ ತೊಡೆಯ ಚರ್ಮ ನನ್ ಬಲದ ತೊಡೆಯ ಚರ್ಮ
ಎರಡನು ಅಳದು ಹದಗೂಡಬೇಕು ।

ಆಯೂಧ ಮುಸ್ತೇವು ಒಂದನು ಸೋಕುಸದೆ
ನನ್ ಘಟದ ಆಯುಧಗಳಿಂದ ।

ನನ್ ಘಟದ ಆಯುಧಗಳಿಂದ ನಿಮ್ಮ ಪಾದ್ಕೆ
ಎರಡು ಪಾದ್ರಾಕ್ಷಿ ಮಾಡತೀನಿ ।

ಎರಡು ಪಾದ್ರಾಕ್ಷಿ ಮಾಡುತೀನಿ ಅನುತ್ಹೇಳಿ
ಹರಕೆಯ ನೀವು ಮಾಡಿಕೊಳ್ಳಿ ।

ಇಂತೆ ಹರಕೆಯಾ ಮಾಡುಕೊಂಡರೆ ನೀವು
ಹೋಗಿರುವ ನೇತ್ರ ಬರುತಾವೆ" ।

ಕಲ್ಯಾಣದ ಬೀದೀಲಿ ನಿಂತ್ಕೊಂಡು ಹರುಳಯ್ಯ
ಕಲ್ಯಾಣಕ್ಕೆ ಕೈಯ ಮುಗಿದನು ।

"ಭೂಮಿಯ ಪಡೆದೋರೆ ಭೂಲೋಕವ ಪಡೆದೋರೆ
ಕಾವಿ ಕಾಮಂಡ್ಲ ಪಡುದೋರೆ ।

ಕಾವಿಯ ಪಡದೋರೆ ಭೂಲೋಕವ ಪಡೆದೋರೆ
ಇಂತಾ ಸತ್ಯವರಿಗೆ ಒಂದು ಸರಣಪ್ಪ ।

ಜಗವನ್ನೆ ಪಡಾದೋರ್ಗೆ ಒಂದು ಸರಣೆಂದು
ಜಂಗುಮರ್ಗೆ ಗುರುಮಂತ್ರ ಹೇಳುವೋರ್ಗೆ ।

ಜಂಗುಮರ್ಗೆ ಗುರುಮಂತ್ರ ಉಪದೇಶ ಮಾಡುದಂತ
ನನ್ನ-ಸಂಗನ ಬಸವಣ್ಣ ನಿಮ್ಗೆ ಸರಣು ಸರಣಾರ್ತಿ" ।

ಸರಣ ಸರಣಾರ್ತಿ ಹಾಗೆಂದ ಕೂಡಲೆ
ಹರಳಯ್ನ ನೇತ್ರ ಕನ್ನಡಿ ।

ಹರಳಯ್ನ ನೇತ್ರ ಕನ್ನಡಿ ಹಂಗೆ ಕಾಣುತಲ್ಲೋ
ಹೋಗಿದ್ದ ನೇತ್ರ ಬರುತವೆ ।

ಹೋಗಿದ್ದ ನೇತ್ರ ನಮ್ಮ ಹರಳಯ್ಗೆ ಬಂದಾಗ
ಕೈಲಾಸಕ್ಕೆ ಕೈಯಾ ಮುಗಿದಾನು ।

"ಎಂತೆ ಗುರುಗಳಪ್ಪ ನನ್ನ ಕಲ್ಯಾಣ್ದ ಬಸವಣ್ಣ ।
ಒಂದ್ಸರುಣ್ಗೆ ನಮ್ಗೀ ನರ್ಕ ಕೊಡಬಹುದೇ ।

ಇಂದು ಗೊತ್ತಾಯ್ತಪ್ಪ ನಿನ್ನ ಮೈಮೆ" ಎನ್ನುತ್ಹೇಳಿ
ಮಾನ್ಯ ಹರುಳಯ್ಯ ತಿಳುಕೊಂಡ ।

"ಒಪ್ಪೀದೆ ಕಲ್ಯಾಣಿ ನೀ ಹೇಳುವ ಉತ್ತರುವ
ನೀ ಹೇಳಲಾಗಿ ಕಣ್ಣು ಬಂದುದಲ್ಲ" ।

"ಹೋಗನ ನಡೆಯಿರಿ ನಮ್ಮ ಕಕ್ಕೆಸೊಪ್ಪನ ಪಾದ್ರಾಕ್ಷಿಯ
ನಮ್ಮನದ ಕಾಟ ಕರ್ಮ ಕಳಿಯಲಿ" ।

ಗಂಡ ಹೆಂಡರು ಇಬ್ಬರು ಕಲ್ಯಾಣ್ದ ಬೀದಿ ಬುಟ್ಟು
ಬರುತಾರೆ ತಮ್ಮ ಗುರುಮಠಕೆ ।

ಬಂದರು ಹರಳಯ್ಯ ಬಂದರು ಕಲ್ಯಾಣಮ್ಮ
ಅಡುಗೆ ಮಾಡನಿಲ್ಲ ಅವುರ್ಮಠದಲ್ಲಿ ।

ಅಡುಗೆಯ ಮಾಡನಿಲ್ಲ ಮಠದಲ್ಲಿ ಕಲ್ಯಾಣಮ್ಮ
ಹನ್ನೆರಡು ದಿವಸ ಉಪುವಾಸ ।

ಗಂಡು ಹೆಂಡರು ಇಬ್ಬರು ಉಪುವಾಸ ಇದ್ದರಂತೆ
ಅವುರೇಳು ದೊಂಕುನ ಕತ್ಯ ತಗಿದಾರು ।

ಏಳು ದೊಂಕುನ ಕತ್ಯ ತಕ್ಕೊಂಡು ಹರುಳಯ್ಯ
ಉಜ್ಜಿ ಆಯುಧವ ಹದುಮಾಡಿ । ೩೨೦

ಉಜ್ಜಿ ಆಯುಧವ ಹದಮಾಡಿಕೊಂಡರುಳಯ್ಯ
ಕಲ್ಯಾಣಮ್ಮಯ್ನ ಕರಿದಾರು ।

ಕಲ್ಯಾಣಮ್ಮನ ಕರುದು ಪರದಾದ ಮರೆಯಲಿ ನಿಲ್ಲಿಸಿ
ನನ್ನ ಗುರು ಬಸವಣ್ಣ ನಿಮ್ಮ ಪಾದ ।

ನನ್ನ ಗುರು ಬಸವಣ್ಣ ನಿಮ್ಮ ಪಾದವೇ ಗತಿಯೆಂದು
ಅಳಿದಾರು ಅವಳ ಬಲ್ತೊಡೆ ಚರುಮಾವ ।

ಹರುಳಯ್ಯನವರು ತೊಡೆಯ ಚರ್ಮದ ಎಳಿದು
ಮದುರಂಗನ ಕೊಳಕೆ ನೆನಿಯಾಕಿ ।

ಸುಣ್ಣದಕ್ಕಿ ಮಾರಯ್ನ ಕರದು ಹರಳಯ್ಯನವರು
ಆ ಸುಣ್ಣದಲ್ಲಿ ಚರ್ಮ ಹದಮಾಡಿ । ೩೩೦

ಕಕ್ಕಯ್ಯ ಚಿಕ್ಕಯ್ನ ಕರದು ಹರುಳಯ್ಯನವರು
ಆ ಚೆಕ್ಕೆ ಒಳುಗೆ ಚರ್ಮ ಹದಮಾಡಿ ।

ಬಂಗಾರದಾಗೆ ಮೃದು ಬಂದೀತು ಆ ಚರ್ಮ
ಹನ್ನೆರಡು ದಿವ್ಸಕ್ಕೆ ಆದ ಹದಮಾಡಿ ।

ರತ್ನಗಂಬ್ಳಿ ಗದ್ಗೆ ಹೂಡುದುರು ಹರಳಯ್ಯ
ಈ ಪಾದ್ರಾಕ್ಷಿ ಕೆಲಸಕ್ಕೆ ಕುಳಿತಾರು ।

ರತ್ನ ಗಂಬಳಿ ಹೂಡಿ ಉದ್ಯಾಗಕ್ಕೆ ಕುಂತು ಕೊಂಡು
ಅಂಗೈಯ್ಯ ಅಡುಗಲ್ಲು ಮಾಡವುರೆ ।

ಅಂಗೈಯ್ಯ ಅಡಿಗಲ್ಲು ಮುಂಗೈಯ ಕೊಡುತಿ ಮಾಡಿ
ಬೆಚ್ಚಿದರೂ ಚರ್ಮ ಒಂದದುವಾಗಿ ।

ಹೆಬ್ಬೆಳ್ಳ ರಂಪೀ ಮಾಡಿ ಕೊರಿದಾರು ಹರುಳಯ್ಯ
ಬಸವಣ್ಣನವರ ಪಾದದಳತೇಯ ।

ದೊಡ್ಡವರ ಪಾದದಳತ್ಯ ಹೆಬ್ಬೆಳ್ಳಲ್ಲಿ ಕೊರಕೊಂಡು
ಕಿರು ಬೆರಳು ತಗದು ಉಳಿ ಮಾಡಿ ।

ಕಿರು ಬೆರಳು ತಗದು ಉಳಿಮಾಡಿ ಹರುಳಯ್ಯ
ಇದುಕ್ಕೊಲುಗೆ ದಾರುವೆ ಮೊದಲಿಲ್ಲ ।

ಬ್ಯಾರೆ ದಾರವ ಹೂಡುದ್ರೆ ನನಗುರು ಒಪ್ಪೀರಾ ಎಂದು
ಕಲ್ಯಾಣಮ್ಮಯ್ನ ಕರಿದಾರು ।

ಕಲ್ಯಾಣಮ್ಮನ ಕರುದು ಹಿಂದ್ ಮುಂದಾಗಿ ನಿಲ್ಸಿಕೊಂಡು
ಅವ್ರ ಬೆನ್ನುಳಿಯ ನರುವ ಎಳುಕೊಂಡ ।

ಬೆನ್ನುಳಿಯ ನರವ ಎಳೆದು ಶಿವ ಶರಣ ಹರಳಯ್ಯ
ಇದು ಹೊಲುಗೆ ದಾರವ ಮಾಡಿದರು ।

ಹೊಲುಗು ದಾರವ ಮಾಡಿ ಹೊಲುದವುರೆ ಪಾದ್ರಾಕ್ಷ್ಯ
ಅವರು ಪ್ರೀತಿ ಮಾಡಿದ ಹರುಳಯ್ಯ ।

ಅಂಗಾಲುಗೆ ನವರತ್ನ ಮುಂಗಾಲ್ಗೆ ಗೋಮೇದ್ಕ
ಮೇಗಲು ಮುಸ್ತೀಪು ನವರತ್ನ ।

ಪಟ್ಟೆ ಬಾರ್ಗಳುಗೆಲ್ಲ ನವರತ್ನುದರುಳ ಮೆಟ್ಟಿ
ನನ್ನ–ಮಾನ್ಯ ಹರಳಯ್ಯ ಮಾಡ್ದ ಪಾದ್ರಾಕ್ಷ್ಯ ।

ಹೆಣಕೆಯ ಹೆಣದವನೆ ಬಂಗಾರ್ದ ಗೊಂಡೆಯ ಮಾಡಿ
ಸೂರ್ಯನ ನೋಡ್ಬುವುದು ಜಗದಲ್ಲಿ ।

ಸೂರ್ಯನ ನೋಡಬವುದು ಚಂದ್ರನ ನೋಡಬಹುದು
ಅವುನ ಪಾದ್ರಾಕ್ಷಿ ಮಂಗಳಾರತಿಯ ಬೆಳುಗೀದ ।

ಮಂಗಳಾರುತಿ ಬೆಳುಗಿ ಮಾನ್ಯರೊಡೆಯ ಹರಳಯ್ಯ
ರತ್ನಗಂಭ್ಧೀಲಿ ಗಂಟ ಕಟ್ಟುತ್ತಾನೆ ।

“ಹೋಗಿ ಬರುಲ್ಯಾ ಕಲ್ಯಾಣಿ ಕಲ್ಯಾಣ್ದ ಗುರುಮಠಕೆ
ಒಪ್ಪೀಸಿ ಬರುತೀನಿ ಅವ್ರ ಪಾದ್ರಾಕ್ಷ್ಯ” ।

“ಹೋಗಿ ಬನ್ನಿ ಗುರುದೇವರೆ ಹರುಳಯ್ಯ
ಗ್ಯಾಪುಕವಿರಲಪ್ಪ ನಿಮ್ಮ ಮನದಲ್ಲಿ ।

ಕಂಡ ತಕ್ಷುಣವಾಗಿ ಕರವೆತ್ತಿ ಕೈಯ ಮುಗಿದು
ನೀವು ಭಕ್ತಿಯಿಂದ ಒಪ್ಪೀಸಿ ಅವುರ್ಗೆ ಪಾದ್ರಾಕ್ಷ್ಯ” ।

“ಆಗಲಿ ಕಲ್ಯಾಣಿ ನಾ ಗ್ಯಾಪಕ ಮಾಡುಗಿವ್ನಿ
ಒಪ್ಪೀಸಿ ನಾ ಬೇಗ ಬರುತೀನಿ” ।

ಮಠವನ್ನು ಬಿಟ್ಟು ಈ ಹರಳಯ್ಯ ಹೊರಟಾಗ
ಇವುರ್ಗಿಂತ ಮುಂಚೆ ಲಿಂಗ ಹೊರಟೋಯ್ತು ।

ಹರುಳಯ್ಯ ಲಿಂಗ ಹೋಗಿ ಬಸವಣ್ಣನ ಲಿಂಗದ ಬಳಿಗೆ
ಲಿಂಗ ಲಿಂಗವೆರಡೆ ಮಾತಾಡುತಾವೆ ।

“ಅವರ ಗಂಡಹೆಂಡಾರ ಚರ್ಮವ ನಿಮಗಳಿದು ಹರಳಯ್ಯ
ಮಾಡವ್ನೆ ನಿಮ್ಗೆ ಪಾದ್ರಾಕ್ಷ್ಯ ।

ಅದ ಮೆಟ್ಟಿದರೆ ಕೆಡುತೀರಿ ಮೆಟ್ಟ ಬ್ಯಾಡಿ ಸ್ವಾಮಿ
ಮೆಟ್ಟಬ್ಯಾಡಿ” ಎಂದು ಹರುಳಯ್ಯ ಲಿಂಗ ತಿಳಿಸೀತು ।

“ನನ್ನ ಕಲ್ಯಾಣ ಕೆಡಾಸೀನೇನೋ ನಾ ಕಾಣೆ” ಅನುತ್ಹೇಳಿ
ಚಿಂತೆ ಮಾಡಿದರು ಬಸವಣ್ಣ ।

“ಹರುಳಯ್ಯ ಬರುತಾನೆ ಅರುಗಾಗಿ ಊಳುಗದವರೆ
ಅವುನ್ಗೆ ಅಡ್ಡಿ ಮಾಡದೆ ಕರೆತನ್ನಿ” ।

“ಮಾಡೀರ್‍ಯಾ ಹರುಳಪ್ಪ ನಾ ಹೇಳಿದಂತೆ ಪ್ರಾರ್ಥನೆಯ
ಹಂಗೊಂದು ಮಾತ ಕೇಳಪ್ಪ ।

ನಿಮ್ಮೆಡದ ತೊಡೆಯ ಚರ್ಮ ನನ್ ಬಲದ ತೊಡೆಯ ಚರ್ಮ
ಎರಡನು ಅಳದು ಹದಗೂಡಬೇಕು ।

ಆಯೂಧ ಮುಸ್ತೇವು ಒಂದನು ಸೋಕುಸದೆ
ನನ್ ಘಟದ ಆಯುಧಗಳಿಂದ ।

ನನ್ ಘಟದ ಆಯುಧಗಳಿಂದ ನಿಮ್ಮ ಪಾದ್ಕೆ
ಎರಡು ಪಾದ್ರಾಕ್ಷಿ ಮಾಡತೀನಿ ।

ಎರಡು ಪಾದ್ರಾಕ್ಷಿ ಮಾಡುತೀನಿ ಅನುತ್ಹೇಳಿ
ಹರಕೆಯ ನೀವು ಮಾಡಿಕೊಳ್ಳಿ ।

ಇಂತೆ ಹರಕೆಯಾ ಮಾಡುಕೊಂಡರೆ ನೀವು
ಹೋಗಿರುವ ನೇತ್ರ ಬರುತಾವೆ" ।

ಕಲ್ಯಾಣದ ಬೀದೀಲಿ ನಿಂತ್ಕೊಂಡು ಹರುಳಯ್ಯ
ಕಲ್ಯಾಣಕ್ಕೆ ಕೈಯ ಮುಗಿದನು ।

"ಭೂಮಿಯ ಪಡೆದೋರೆ ಭೂಲೋಕದ ಪಡೆದೋರೆ
ಕಾವಿ ಕಾಮಂಡ್ಲ ಪಡುದೋರೆ ।

ಕಾವಿಯ ಪಡದೋರೆ ಕಾಮಂಡ್ಲ ಪಡುದೋರೆ
ಇಂತಾ ಸತ್ಯವರಿಗೆ ಒಂದು ಸರಣಪ್ಪ ।

ಜಗವನ್ನೆ ಪಡಾದೋರ್ಗೆ ಒಂದು ಸರಣೆಂದು
ಜಂಗುಮರ್ಗೆ ಗುರುಮಂತ್ರ ಹೇಳುವೋರ್ಗೆ ।

ಜಂಗುಮರ್ಗೆ ಗುರುಮಂತ್ರ ಉಪದೇಶ ಮಾಡುದಂತ
ನನ್ನ-ಸಂಗನ ಬಸವಣ್ಣ ನಿಮ್ಗೆ ಸರಣು ಸರಣಾರ್ತಿ" ।

ಸರಣ ಸರಣಾರ್ತಿ ಹಾಗೆಂದ ಕೂಡಲೆ
ಹರಳಯ್ಯ ನೇತ್ರ ಕನ್ನಡಿ ।

ಹರಳಯ್ಯ ನೇತ್ರ ಕನ್ನಡಿ ಹಂಗೆ ಕಾಣುತಲ್ಲೋ
ಹೋಗಿದ್ದ ನೇತ್ರ ಬರುತವೆ ।

ಹೋಗಿದ್ದ ನೇತ್ರ ನಮ್ಮ ಹರಳಯ್ಗೆ ಬಂದಾಗ
ಕೈಲಾಸಕ್ಕೆ ಕೈಯಾ ಮುಗಿದಾನು ।

"ಎಂತೆ ಗುರುಗಳಪ್ಪ ನನ್ನ ಕಲ್ಯಾಣ್ದ ಬಸವಣ್ಣ !
ಒಂದ್ಸರುಣ್ಗೆ ನಮ್ಗೀ ನರ್ಕ ಕೊಡಬಹುದೇ ।

ಇಂದು ಗೊತ್ತಾಯ್ತಪ್ಪ ನಿನ್ನ ಮೈಮೆ" ಎನುತ್ಹೇಳಿ
ಮಾನ್ಯ ಹರುಳಯ್ಯ ತಿಳುಕೊಂಡ ।

“ಒಪ್ಪೀದೆ ಕಲ್ಯಾಣಿ ನೀ ಹೇಳುವ ಉತ್ತರುವ
ನೀ ಹೇಳಲಾಗಿ ಕಣ್ಣು ಬಂದುವಲ್ಲ” ।

“ಹೋಗನ ನಡೆಯಿರಿ ನಮ್ಮ ಕಕ್ಕೆಸೊಪ್ಪನ ಮಠಕೆ
ನಮ್ ಗುರುಗೆ ಚಮ್ಮಾಳುಗೆ ಮಾಡಬೇಕು ।

ದೊಡ್ಡಪಾದಾದ ದೊರೆಗೆ ಮಾಡ್ಬೇಕು ಪಾದ್ರಾಕ್ಷಿಯ
ನಮ್ಮನದ ಕಾಟ ಕರ್ಮ ಕಳಿಯಲಿ” । ೩೧೦

ಗಂಡ ಹೆಂಡರು ಇಬ್ಬರು ಕಲ್ಯಾಣ್ದ ಬೀದಿ ಬುಟ್ಟು
ಬರುತಾರೆ ತಮ್ಮ ಗುರುಮಠಕೆ ।

ಬಂದರು ಹರಳಯ್ಯ ಬಂದರು ಕಲ್ಯಾಣಮ್ಮ
ಅಡುಗೆ ಮಾಡನಿಲ್ಲ ಅವುರ್ಮಠದಲ್ಲಿ ।

ಅಡುಗೆಯ ಮಾಡನಿಲ್ಲ ಮಠದಲ್ಲಿ ಕಲ್ಯಾಣಮ್ಮ
ಹನ್ನೆರಡು ದಿವಸ ಉಪುವಾಸ ।

ಗಂಡು ಹೆಂಡರು ಇಬ್ಬರು ಉಪುವಾಸ ಇದ್ದರಂತೆ
ಅವುರೇಳು ದೊಂಕುನ ಕತ್ಯ ತಗಿದಾರು ।

ಏಳು ದೊಂಕುನ ಕತ್ಯ ತಕ್ಕೊಂದು ಹರುಳಯ್ಯ
ಉಜ್ಜಿ ಆಯುಧವ ಹದಮಾಡಿ । ೩೨೦

ಉಜ್ಜಿ ಆಯುಧವ ಹದಮಾಡಿಕೊಂಡರುಳಯ್ಯ
ಕಲ್ಯಾಣಮ್ಮಯ್ನ ಕರಿದಾರು ।

ಕಲ್ಯಾಣಮ್ಮನ ಕರುದು ಪರದಾದ ಮರೆಯಲಿ ನಿಲ್ಲಿಸಿ
ನನ್ನ ಗುರು ಬಸವಣ್ಣ ನಿಮ್ಮ ಪಾದ ।

ನನ್ನ ಗುರು ಬಸವಣ್ಣ ನಿಮ್ಮ ಪಾದವೇ ಗತಿಯೆಂದು
ಅಳಿದಾರು ಅವಳ ಬಲ್ತೊಡೆ ಚರುಮಾವ ।

ಹರುಳಯ್ಯನವರು ತೊಡೆಯ ಚರ್ಮವ ಎಳಿದು
ಮದುರಂಗನ ಕೊಳಕೆ ನೆನಿಯಾಕಿ ।

ಸುಣ್ಣದಕ್ಕಿ ಮಾರಯ್ನ ಕರದು ಹರಳಯ್ಯನವರು
ಆ ಸುಣ್ಣದಲ್ಲಿ ಚರ್ಮ ಹದಮಾಡಿ । ೩೩೦

ಕಕ್ಕಯ್ಯ ಚಿಕ್ಕಯ್ನ ಕರದು ಹರುಳಯ್ಯನವರು
ಆ ಚೆಕ್ಕೆ ಒಳುಗೆ ಚರ್ಮ ಹದಮಾಡಿ ।

ಬಂಗಾರದಾಗೆ ಮೃದು ಬಂದೀತು ಆ ಚರ್ಮ
ಹನ್ನೆರಡು ದಿವ್ಸಕ್ಕೆ ಅದ ಹದಮಾಡಿ ।

ರತ್ನಗಂಬ್ಳಿ ಗದ್ಗೆ ಹೂಡುದುರು ಹರಳಯ್ಯ
ಈ ಪಾದ್ರಾಕ್ಷಿ ಕೆಲಸಕ್ಕೆ ಕುಳಿತಾರು ।

ರತ್ನ ಗಂಬಳಿ ಹೂಡಿ ಉದ್ಯಾಗಕ್ಕೆ ಕುಂತು ಕೊಂಡು
ಅಂಗೈಯ್ಯ ಅಡುಗಲ್ಲು ಮಾಡವುರೆ ।

ಅಂಗೈಯ್ಯ ಅಡಿಗಲ್ಲು ಮುಂಗೈಯ ಕೊಡುತಿ ಮಾಡಿ
ಚೆಚ್ಚಿದರೂ ಚರ್ಮ ಒಂದದುವಾಗಿ । ೩೪೦

ಹೆಬ್ಬೆಳ್ಳ ರಂಪೀ ಮಾಡಿ ಕೊರಿದಾರು ಹರುಳಯ್ಯ
ಬಸವಣ್ಣನವರ ಪಾದದಳತೇಯ ।

ದೊಡ್ಡವರ ಪಾದದಳತ್ಯ ಹೆಬ್ಬೆಳ್ಳಲ್ಲಿ ಕೊರಕೊಂಡು
ಕಿರು ಬೆರಳು ತಗದು ಉಳಿ ಮಾಡಿ ।

ಕಿರು ಬೆರಳು ತಗದು ಉಳಿಮಾಡಿ ಹರುಳಯ್ಯ
ಇದುಕ್ಹೊಲುಗೆ ದಾರುವೆ ಮೊದಲಿಲ್ಲ ।
ಬ್ಯಾರೆ ದಾರವ ಹೂಡುದ್ರೆ ನನಗುರು ಒಪ್ಪೀರಾ ಎಂದು
ಕಲ್ಯಾಣಮ್ಮಯ್ನ ಕರಿದಾರು ।

ಕಲ್ಯಾಣಮ್ಮನ ಕರುದು ಹಿಂದ್ ಮುಂದಾಗಿ ನಿಲ್ಸಿಕೊಂಡು
ಅವ್ರ ಬೆನ್ನುಳಿಯ ನರುವ ಎಳುಕೊಂಡ । ೩೫೦

ಬೆನ್ನುಳಿಯ ನರವ ಎಳೆದು ಶಿವ ಶರಣ ಹರಳಯ್ಯ
ಇದು ಹೊಲುಗೆ ದಾರವ ಮಾಡಿದರು ।

ಹೊಲುಗೆ ದಾರವ ಮಾಡಿ ಹೊಲುದವುರೆ ಪಾದ್ರಾಕ್ಷ್ಯ
ಅವರು ಪ್ರೀತಿ ಮಾಡಿದ ಹರುಳಯ್ಯ ।

ಅಂಗಾಲುಗೆ ನವರತ್ನ ಮುಂಗಾಲ್ಗೆ ಗೋಮೇದ್ಕ
ಮೇಗಲು ಮುಸ್ತೀಪು ನವರತ್ನ ।

ಪಟ್ಟಿ ಬಾರ್ಗ್ಳುಗೆಲ್ಲ ನವರತ್ನದರುಳ ಮೆಟ್ಟಿ
ನನ್ನ-ಮಾನ್ಯ ಹರಳಯ್ಯ ಮಾಡ್ದ ಪಾದ್ರಾಕ್ಷ್ಯ ।

ಹೆಣಕೆಯ ಹೆಣದವನೆ ಬಂಗಾರ್ದ ಗೊಂಡೆಯ ಮಾಡಿ
ಸೂರ್ಯನ ನೋಡ್ಬವುದು ಜಗದಲ್ಲಿ ।

ಸೂರ್ಯನ ನೋಡಬಹುದು ಚಂದ್ರನ ನೋಡಬವುದು
ಅವುನ ಪಾದ್ರಾಕ್ಷಿ ಮಂಗಳಾರತಿಯ ಬೆಳುಗೀದ ।

ಮಂಗಳಾರತಿ ಬೆಳುಗಿ ಮಾನ್ಯರೊಡೆಯ ಹರಳಯ್ಯ
ರತ್ನಗಂಬ್ಳೀಲಿ ಗಂಟ ಕಟ್ಟುತಾನೆ ।

"ಹೋಗಿ ಬರುಲ್ಯಾ ಕಲ್ಯಾಣಿ ಕಲ್ಯಾಣ್ದ ಗುರುಮಠಕೆ
ಒಪ್ಪೀಸಿ ಬರುತೀನಿ ಅವ್ರ ಪಾದ್ರಾಕ್ಷ್ಯ" ।

"ಹೋಗಿ ಬನ್ನಿ ಗುರುದೇವರೆ ಹರುಳಯ್ಯ
ಗ್ಯಾಪುಕವಿರಲಪ್ಪ ನಿಮ್ಮ ಮನದಲ್ಲಿ ।

ಕಂಡ ತಕ್ಷುಣವಾಗಿ ಕರವೆತ್ತಿ ಕೈಯ ಮುಗಿದು
ನೀವು ಭಕ್ತಿಯಿಂದ ಒಪ್ಪೀಸಿ ಅವುರ್ಗೆ ಪಾದ್ರಾಕ್ಷ್ಯ" ।

"ಆಗಲಿ ಕಲ್ಯಾಣಿ ನಾ ಗ್ಯಾಪಕ ಮಾಡುಗಿವ್ನಿ
ಒಪ್ಪೀಸಿ ನಾ ಬೇಗ ಬರುತೀನಿ" ।

ಮಠವನ್ನು ಬಿಟ್ಟು ಈ ಹರಳಯ್ಯ ಹೊರಟಾಗ
ಇವುರ್ಗಿಂತ ಮುಂಚೆ ಲಿಂಗ ಹೊರಟೋಯ್ತು ।

ಹರುಳಯ್ಯ ಲಿಂಗ ಹೋಗಿ ಬಸವಣ್ಣನ ಲಿಂಗದ ಬಳಿಗೆ
ಲಿಂಗ ಲಿಂಗವೆರಡೆ ಮಾತಾಡುತಾನೆ ।

"ಅವರ ಗಂಡಹೆಂಡಾರ ಚರ್ಮವ ನಿಮಗಳಿದು ಹರಳಯ್ಯ
ಮಾಡವ್ನೆ ನಿಮ್ಗೆ ಪಾದ್ರಾಕ್ಷ್ಯ ।

ಅದ ಮೆಟ್ಟಿದರೆ ಕೆಡುತೀರಿ ಮೆಟ್ಟ ಬ್ಯಾಡಿ ಸ್ವಾಮಿ
ಮೆಟ್ಟಬ್ಯಾಡಿ" ಎಂದು ಹರುಳಯ್ನ ಲಿಂಗ ತಿಳಿಸೀತು ।

"ನನ್ನ ಕಲ್ಯಾಣ ಕೆಡಾಸೀನೇನೋ ನಾ ಕಾಣೆ" ಅನುತ್ಹೇಳಿ
ಚಿಂತೆ ಮಾಡಿದರು ಬಸವಣ್ಣ ।

"ಹರುಳಯ್ಯ ಬರುತಾನೆ ಅರುಗಾಗಿ ಊಳುಗದವರೆ
ಅವುನ್ಗೆ ಅಡ್ಡಿ ಮಾಡದೆ ಕರೆತನ್ನಿ" ।

ಬಂದ ಹರಳಯ್ಯನ ಕಂಡಿ ಬಾಗುಲಲಿದ್ದೂಳುಗದವರು
ಕರೆಕೊಂಡು ಬಂದರವ್ನ ಒಳಗಡೆ ।

ಜಂಗುಮರ ಸಭೆಯಲ್ಲಿ ಕುಳಿತಿದ್ರು ಬಸವಣ್ಣ
ಅವರ ಅಂತು ನೋಡೀದ ಹರುಳಯ್ಯ ।

ಕಂಡ ತಕ್ಷಣವಾಗಿ ನಿಜುದಂತೆ ಹರಳಯ್ಯ
"ಸರಣು ಸರಣಾರ್ತಿ ಬಸವೇಶ ।

ಕಲ್ಯಾಣಕೆ ಸರಣು ಕೈಲಾಸಕ್ಕೊಂದು ಸರಣು
ಇಲ್ಲಿ ನೆರದಿರುವ ಜಂಗುಮರಿಗೆ ಸರಣು ಸರಣಾರ್ತಿ ।

ಇಲ್ಲಿ ಎಲ್ಲಾ ಜಂಗುಮರಿಗು ಸರಣಾರ್ತಿ" ಎಂತ್ಹೇಳಿ
ಆ ಕಂಬಳಿಯ ಗಂಟು ಇಳುಕೀದ ।

"ದಯಾ ಮಾಡಿ ನನ್ನ ಗುರು ನನ್ನ ದಯಾವುಳ್ಳ ಬಸವಣ್ಣ
ನಿಮ್ಗೆ ಮಾಡ್ಕೊಂಡ್ಬುಂದಿವ್ನಿ ಪಾದ್ರಾಕ್ಷ್ಯ ।

ಎರಡು ಪಾದಕ್ಕೂ ಗುರುವೆ ಎರಡು ಪಾದ್ರಾಕ್ಷಿ ತಂದಿವ್ನಿ
ಮೆಟ್ಟಿಕೊಳ್ಳಿ ಒಡೆಯಾ ನಿಮ್ಮ ದೊಡ್ಡ ಪಾದಕ್ಕೆ" ।

ಹಂಗಂದ ಮಾತನ್ನ ಕೇಳಿ ಬಸವಣ್ಣ
"ಬಂದ್ಯಪ್ಪ ಹರಳಯ್ಯ ಸರಣಾರ್ತಿ" ।

ಕಂಬಳಿ ಗಂಟನ್ನು ಬಿಚ್ಚಿಕ್ಕುದುರು ಹರಳಯ್ಯ
ಆ ಕಲ್ಯಾಣವೆಲ್ಲ ಹೊಳಿಯಾದೊ ।

ಕತ್ತಲೆಯ ಮನೆಗೆ ಜ್ಯೋತೀಯ ಹಸ್ನಾದಾಗೆ
ಪ್ರಕಾಸುವಾಯಿತು ಅವರ ಗುರುಮಠ ।

"ಇದೇನ್ಪ ಹರಳಯ್ಯ ನೀ ಮಾಡಿ ತಂದಿರುವ ಕೆಲಸ
ನನ್ನ ಪಾದಕಿಕ್ತಾರೆ ಅಂತ್ಹೇಳಿ ನೀ ತರುಬವುದ ? ।

ನರಲೋಕದವರಿಗೆ ಸಲ್ಲೊ ಪಾದ್ರಾಕ್ಷಿಯಲ್ಲ
ಇವು ಕೈಲಾಸಕ್ಕೆ ಸಲ್ಲೊ ಪಾದ್ರಾಕ್ಷಿ ! ।

ಕೂಡಲ ಸಂಗಮನಿಗೆ ಸಲ್ಲುವಂತ ಪಾದ್ರಾಕ್ಷಿ
ಇವು–ಬ್ಯಾಡಕಣಪ್ಪ ನನ್ಗೆ ಹರುಳಯ್ಯ" ।

ಎತ್ಕೊಂಡ್ರು ಪಾದ್ರಾಕ್ಷ್ಯ ತಮ್ ನೆತ್ತೀಮ್ಯಾಲಿಟ್ಟಿಕೊಂದ್ರು
ಜಂಗಮರ ಸಭೆಯಲ್ಲಿ ಮೆರಿದಾರು ।

ನೆತ್ತಿ ಮ್ಯಾಲಿಟ್ಟಾಗ ಕಂಡುಕೊಂಡ ಹರುಳಯ್ಯ
"ನಾ ಕೆಟ್ಟೆ" ಅಂದ ಹರುಳಯ್ಯ ।

"ಕಾಲಿಗೆ ಮಾಡೀದ ಎಕ್ಕುಡ ತಗುದು ಗುರುವೆ
ನಿಮ್ಮ ಸಿರುಮುಡಿಯ ಮ್ಯಾಲೆ ಮಡುಗ್‌ಬವುದ ? ।

ನತ್ತಿ ಮ್ಯಾಲಿಟ್ಟ ಮ್ಯಾಲೆ ನಮ್ಮ ದೇವರು ಬಸವಣ್ಣ
ಇನ್ನ ಮೆಟ್ಕೋದು ನಿಜವ ಅವುರ ಪಾದಕ್ಕೆ ।

ಒಂದು ಸರಣ್ನಾಗಿ ಈ ಬಂಧಾನಾ ಪಟ್ಟಿವ್ನಿ
ಸೊಲ್ಪ ಇಕ್ಕಬೇಕು ಬುದ್ದಿ ನಿಮ್ಪಾದವೆ" ।

"ಬ್ಯಾಡ ಕಾಣರುಳಯ್ಯ ನಿನ್ ಬೇಡಿಕೊಳ್ಳುತ್ತಿನೀ ನಾನು
ವಾಪ್ಸಿ ಕೊಂಡೋಗು ನಿನ್ನ ಗುರು ಮಠಕೆ" ।

"ಏನೇನಪರಾಧ ನಾ ಮಾಡಿದ್ದೇನು ಗುರುದೇವಾ
ಅಪರಾಧ ಮಾಪ್ ಮಾಡಿ ಮೆಟ್ಟಿಕೊಳ್ಳಿ ।

ನಿಮಗೆ ಮಾಡಿದ ಪಾದ್ರಾಕ್ಷೆ ಮತ್ಯಾವ ಕೊಡಲಪ್ಪ
ಇದು ಬಿಕ್ರಿ ಮಾಡುದೆ ನಾ ಮಾಡುನಿಲ್ಲಾ ।

ಮಾರುಕೊಳ್ಳಬೇಕಂತ ಮಾಡಿಲ್ಲ ಚಮ್ಮಾಳ್ಗಿಯ
ನಿಮುಗೋಸ್ಕರವಾಗಿ ಬುದ್ಧಿ ಮಾಡಿವ್ನಿ" ।

"ಬೇಡ ಕಾಣರುಳಯ್ಯ ನೀ ತಂಟೆ ಮಾಡಲು ಬ್ಯಾಡಿ
ನನ್ತಂದೆ ತಾಯಿ ಸಾಕ್ಷಿ ಮೆಟ್ಪೋದಿಲ್ಲ ।

ತಂದೆ ತಾಯಿ ಸಾಕ್ಷಿ ಮೆಟ್ಪೋದಿಲ್ಲಾ"ಂತ್ಹೇಳಿ
ಬಂದು ತಬ್ಬಿದರು ಹರಳಯ್ನ ।

ಬಂದು ತಬ್ಬುದರಲ್ಲೆ ಮಾನ್ಯ ಹರುಳಯ್ಯನ
ಪ್ರೀತಿಯಿಂದ ಮುದ್ದಾಡಿದರು ಬಸವಣ್ಣ ।

“ಯಾಕಪ್ಪ ನನ್ನ ಗುರುವೆ ನನ್ನ ಮುಟ್ಟುಕೊಂಡ್ರಿ ಬಸವಣ್ಣ
ಕೆಟ್ಟೊಲಿಯಾ ಮಾದುಗರ ನೀ ಮುಟ್ಟಬವುದ ।

ಕೆಟ್ಟೊಲಿಯಾ ಮಾದುಗರ ನೀವು ಮುಟ್ಟಿದಲ್ಲಿ ಗುರುವೆ
ದುಷ್ಟು ಈ ಪಾಪ ಕಳಿಯಂತ ತರನೆಂಗ್ಯಾ?” ।

ಹರುಳಯ್ಯಾಡಿದ ಮಾತು ಕೇಳಿದರು ಬಸವಣ್ಣ
ಹರಿಹರ ಎಂದು ಶಿರದೋಗಿ ।

“ಎಂತೆ ಮಾತ ಹೇಳಿದೆ ನನ್ನ ಮಾನುಭಾವರುಳಯ್ಯ
ಹೊಲೆಯಾಗ್ದೆ ಹುಟ್ಟುದೋರ ಮೊದಲೇಳು ।

ಹೊಲೆಯಲ್ಲಿ ಹುಟ್ಟಿದ್ದಾರೆ ಈ ಜಗತ್ಯ ನನ್ನ ಕಂದ
ಹೊಲೆಯಾಗ್ದೆ ತಲೆಯಲ್ಲಿ ಹುಟ್ಟುವಾರ ।

ಹೊಲೆಯಾಗ್ದೆ ತಲೆಯಲ್ಲಿ ಹುಟ್ಟುವಾರ ಹರುಳಯ್ಯ
ಹೊಲೆಯಾನಲ್ಲಪ್ಪ ಹೊನ್ನಯ್ಯ ।

ಮಾದಿಗ ಎಂತ್ಹೇಳಿ ಹೇಳಬದಲ್ಲ ಹರುಳಯ್ಯ
ಮಾದಿಗನಲ್ಲಪ್ಪ ನೀ ಮಾಸರಣ ।

ನೀನು ಮಾದುಗನಲ್ಲ ಕೇಳಪ್ಪ ಹರುಳಯ್ಯ
ಆಡಿದ ಮಾತುಗೆ ತಪ್ಪುದವ್ನೆ ಮಾದೀಗ ।

ಮಾತುಗೆ ತಪ್ನೆಡದೋರು ಹೊಲಯ ಮಾದಿಗರು ಕಾಣಪ್ಪ
ನೀವು ಸರನರು ಕಾಣಪ್ಪ ಈ ಜಗದಲ್ಲಿ ।

ಇಂತೆ ಮಾತನೆಲ್ಲ ಹೇಳಿದರೆ ಮೆಟ್ಟುಕೊಳತಾರೆಂದ್ಯಾ
ಈ ಕಲ್ಯಾಣ ಸಾಕ್ಷಿ ನಾ ಮೆಟ್ಟೋದಿಲ್ಲ ।

ಜಂಗಮರ ಸಾಕ್ಷಿಯಾಗಿ ನಾ ಪಾದ ಇಕ್ಕೋನಲ್ಲ
ನಿಮಗಂದರೆ ಕಾಲ್ಗೆ ತಗುಲುಸಬೋದ”? ।

“ಇಂತೆ ಮಾತನೆಲ್ಲ ಹೇಳಿದರಲ್ಲ ಗುರು
ನೀವು ಪಂಥ ಮಾಡಿದಿರ ನನ್ನ ಜೊತೆಯಲ್ಲಿ ।

ಆಸೆಯಾಗಿ ಮಾಡಿದ್ದು ಆನಂದುದಾದ ಪಾದ್ರಾಕ್ಷಿ
ನನ್ನಾಸೆಗೆ ಮೋಸ ನೀವು ಮಾಡಬವುದ ।

ಯಾರಿಗೆ ಕೊಡಲಪ್ಪ ಇಂತೆ ಆನಂದ ಪಾದ್ರಾಕ್ಷ್ಯ?"
ಎಂದು ಅಳುತ ಪೊಟ್ಟಣವ ಕಟ್ಟುತ್ತಾನೆ?

ಅಳದೆ ಪೊಟ್ಟಣವ ಕಟ್ಟಪ್ಪ ಹರಳಯ್ಯ
ಅವು ತಾನೆ ಹೊಯ್ತಾವೆ ಕೈಲಾಸ್ಕೆ ।
ನಾನು ಮೆಟ್ಟಿನಿಲ್ಲಾಂತ್ಹೆಳಿ ಸಂದೇಗ ಪಡಬೇಡ
ಅದ ಮೆಟ್ಟೋರ್ಗೆ ಕರ್ಮ ಬರುತೀದೆ ।

ಅದ ಮೆಟ್ಟೋರ್ಗೆ ಕರ್ಮ ಬರುತ್ತದೆ ಹರಳಯ್ಯ
ಸಾರಿ ಹೇಳಿ ನೀವಿನ್ನ ಜೊತಿಯಲ್ಲಿ ।

ಸಾರಿ ಹೇಳಿ ನೀವಿನ್ನು ಜೊತೆಯಲ್ಲಿ ಹರಳಯ್ಯ
ಹೊತ್ತಾಯ್ತು ಹೋಗಪ್ಪ ನಿನ್ ಗುರುಮಠಕೆ" ।

ಹೊತ್ತುಗೊಂಡು ಪಾದ್ರಾಕ್ಷೆ ಕಂಬಳಿ ಗ್ವಾಟೇಲಿ
ಅರವತ್ತಾರ್ ಬಾಗ್ಲು ಬುಟ್ಟು ಹೊರಟನು ।

ರಾಜ ಬೀದಿ ಒಳಗೆ ಬರುತಿದ್ದರು ಹರುಳಯ್ಯ
ಎದುರಾಗಿ ಬಂದ ಮದುವರಸು ।

ಅಜ್ಜು ಬೀಡಿನ ಅಳಿಯ ಮದುವರಸು ಬ್ರಾಮಾಣ
ಬಂದು ಹರಳಯ್ನ ತಡುಕೊಂಡ ।
"ಎಲ್ಲೋಗಿದ್ದೆ ಹರುಳ ನೀ ಎತ್ತ ಕಡೆ ಹೋಗಿದ್ದೆ
ಏನು ನಿನ್ನ ಕಂಬಳಿ ಮುಗುಟಾವು ?

ಕಂಬಳಿ ಗ್ವೋಟಲ್ಲಿ ನೀ ಸೇದುಕೊಂಡೀರೋದೇನ
ಹೇಳು ಹರಳ ನನ್ನ ಜೊತೆಯಲ್ಲಿ" ।

"ಏನು ಹೇಳ್ಲಿ ಮದುವರಸೆ ನಿನ್ನ ಜೊತೆಯೊಳಗೆ
ಆ ಮಾನವೀನದ ಮಾತ ನಾ ಹೇಳಲಾರಿ ।

ದೊಡ್ಡ ಪಾದದ ದೊರೆ ಕಲ್ಯಾಣ್ದ ಬಸವಣ್ಣ
ಅವುರ್ಗೆ–ಮಾಡಿದ್ದ ಎರಡು ಚಮ್ಮಾಳ್ಗೆಯಾ" ।

"ಅನಂತ್ರ ಏನಾಯ್ತು ಹೇಳೋ ಹರುಳ" ಎಂದು
ಅವ–ಎಕ್ಕ ಸೊಕ್ಕುದ ಮಾತ ಆಡುತಾನೆ ।

"ದೊಡ್ಡವರ ಬಾಯ್ನಲ್ಲಿ ಹರುಳ ಅನ್ನಿಲ್ಲವಲ್ಲೊ

ಇಂತೆ–ಅಂಕಾರ ಬ್ಯಾಡ ನಿನ್ಗೆ ಮನದಲ್ಲಿ" ।

"ಹರುಳ ಎನ್ನದೆ ನಿನ್ನ ಬುದ್ಧಿ ಎನ್ನಲುಬೇಕ?
ಇದ್ಮಾತ ಹೇಳು ನನ್ನ ಜೊತೆಯಲ್ಲಿ" ।

"ಇದ್ದ್ ಮಾತೇನಿಲ್ಲ ದೇವುರು ಬಸವಣ್ಣೋರ್ಗೆ
ಎರಡು ಪಾದ್ರಾಕ್ಷಿ ಮಾಡ್ಕೊಂಡು ।

ಎರಡು ಪಾದ್ರಾಕ್ಷಿ ಮಾಡ್ಕೊಂಡು ಹೋಗಿದ್ದೆ
ಅವುರೊಪ್ಪುನಿಲ್ಲ ನನ್ನ ಬಸವಣ್ಣ" ।

"ಯಾತಾಕೊಪ್ಪನಿಲ್ವೋ ಏನೋ" ಅನ್ನತಾನೆ ಮದುವರಸು
"ಅದ್ಯಾಕೊ ಕಾಣಪ್ಪ ನನ್ಗೆ ತಿಳಿಯಾದು ।

ನೀ ಮಾಡಿರುವ ಪಾದ್ರಾಕ್ಷಿ ಕೈಲಾಸ್ಕೆ ಹೊಯ್ತಾವೆಂದು
ವಾಪ್ಸಿ ಕಳುಗಿದರು ನನ್ನ ಗುರುಸ್ವಾಮಿ" ।

ಕೈ ತಪ್ಪೆ ಹೊಡೆಕೊಂಡು ನಗುತಾನೆ ಮಧುವರಸು
"ಕಾಸಿಲ್ಲದೋರ್ ಮಾತು ಇದೆ ತಾನೆ? ।

ಕಾಲಿನ ಎಕ್ಕಡ ಕೈಲಾಸ್ಕೆ ಹೋದವೇನೊ
ರೊಕ್ಕವಿಲ್ಲದೆ ಹೇಳವ್ನೆ ಬಸವಣ್ಣ ।

ಚೆನ್ನಾಗಿ ಮಾಡಿರುವುದು ಕಾಲಿನ ಎಕ್ಕುಡವ
ಕ್ರಾಯ ಹೆಚ್ಚಾಯ್ತಾದೆ ಎಂದು ಹಾಗ್ಹೇಳುವುನೆ ।

ಕ್ರಾಯ ಹೆಚ್ಚಾಯ್ತಾದೆ ಎಂದು ಹಾಗೆ ಹೇಳವನೆ ಬಸವಣ್ಣ
ಎಕ್ಕಡ ಕೈಲಾಸ್ಕೋಗೋದು ನಿಜವೇನೊ

ಬಿಕ್ಷ ಮಾಡೊ ಬಸವಣ್ಗೆ ರೊಕ್ಕವೆಲ್ಲಿಂದ ಬಂತು
ರೊಕ್ಕವಿಲ್ಲದೆ ಹೇಳವ್ನೆ ಹೊಸ ಮಾತ ।
ಕಂಬಳಿ ಗ್ವೋಟೀನ ಬೆಡಗು ಆ ಗಂಟನ್ನೆ ಬಿಚ್ಚಾಕು
ಅದೆಂಗೆ ಮಾಡಿದ್ದೀಯಾ ಸೊಲ್ಪ ನೋಡುತೀನಿ ।

ರೊಕ್ಕವಿಲ್ಲದ ಜನಕೆ ಬೋ ಚೆನ್ನಾಗಿ ಮಾಡ್ತೀಯ
ನಮಗ್ಯಾಕೆ ಮಾಡಬಾರ್ದು ಈ ತೆರನಾಗಿ?" ।

ಕಂಬಳಿಗಂಟ ಬಿಚ್ಚಿ ಮಡುಗವ್ನೆ ಪಾದ್ರಾಕ್ಷ್ಯ
ತಳತಳನ ಪಾದ್ರಾಕ್ಷಿ ಹೊಳೆಯೀತು ।

“ಗೊಂಡೆದಾರ ನೋಡು ಈ ಹರಳುಗಳ ಮೆಟ್ಟಿರೋದ ನೋಡು
ಇದೆಲ್ಲಿ ಕಲಿತಿದ್ಯೊ ಹರಳಯ್ಯ ।

ಇಂತೆ ಕೆಲ್ಸ ಮಾಡ್ತನಂತ ನಾನು ತಿಳಿದಿರನಿಲ್ಲ
ನೀನು–ಕೆಲ್ಸಗಾರ ಕಾಣೊ ಹರುಳಯ್ಯ ।

ಕ್ರಾಯ ಎಷ್ಟು ಹೇಳು ನಾ ಕೊಂಡುಕೊಳುತೀನಯ್ಯ
ನಡೆಯ ಮಾತ್ಹೇಳಾ ಹರುಳಯ್ಯ” ।

“ಬೆಲೆಯ ಹೇಳುವನಲ್ಲ ಕ್ರಾಯ ಹೇಳುವನಲ್ಲ
ನೀ ಬಂದ ದಾರೀಲೆ ಹೋಗು ಮಧುವರಸೆ ।

ಬಂದ ದಾರೀಲೆ ಹೊಗೊ ಮಧುವರಸೆ ಬ್ರಾಮಣ
ಆ ಪಾದ್ರಾಕ್ಷಿ ಗೊಡುವೆ ನಿಮಗ್ಯಾಕ?” ।

“ಕಾಸಿಗೆ ಗತಿಯಿಲ್ಲವ ಕೊಡುವುದಕೆ ಯೋಗ್ಯತೆ ಇಲ್ವ
ಇದ–ಕೊಂಡುಕೊಳುವ ಶಕ್ತಿ ನನಗಿಲ್ವ? ।

ಕೊಂಡುಕೊಳ್ಳುವ ಶಕ್ತಿ ನನಗಿಲ್ಲವೇನೊ ಹರಳ
ಬಾಳ ಸುಲಭದ ಮಾತ ಹೆಳುತ್ತಿಯೇ ।

ಈ ಚಮ್ಮಾಳ್ಗೆಯಿಂದ ಬಂದುದ್ದೆಲ್ಲಾ ಬರ್‍ಲಿ
ಇಕ್ಕುಲ್ಯ ನನ್ನ ಪಾದವನ್ನೆ ।

ಉಂಗುಷ್ಟ ಪಟ್ಟಿ ಸರಿಯಾಗಾದರೆ
ನೀ ಹೇಳುವಷ್ಟು ರೊಕ್ಕ ನಾ ಕೊಡುತೀನಿ” ।

“ಕೆಟ್ಟು ಮೂರು ಜಿನವಲ್ಲೊ ನನದುಷ್ಟು ಬ್ರಾಮಣಯ್ಯ
ಆ ದೊಡ್ಡವರ ಪಾದ್ರಾಕ್ಷಿ ನಿನಗ್ಯಾಕೆ ।

ಆ ಸತ್ತವಂತರ ಪಾದಕ್ಕೆ ಮಾಡಿರುವ ಪಾದ್ರಾಕ್ಷಿ
ಅದೆ ಮೆಟ್ಟಿ ಬ್ರಾಮಣ ನೀನು ಕೆಡಬ್ಯಾಡ” ।

“ಬ್ರಹ್ಮ ಪಿಂಡದೊಳಗೆ ನಾ ಹುಟ್ಟಿದ ಬ್ರಾಮಣ
ನನಗಿಂತ ಹೆಚ್ಚ ನಿನ್ನ ಬಸವಣ್ಣ ।

ನನಗಿಂತ ಹೆಚ್ಚ ತಿರುಪೆ ಮಾಡೊ ಬಸವಣ್ಣ?”
ಅಂತ–ಎತ್ತೀದ ಕಾಲ ಪಾದ್ರಾಕ್ಷಿಗೆ ।

ಕಾಲುಗಳ ಎತ್ತುದಾಗ ಅವು ಕೈಲಾಸ್ಕೆ ಹೊಂಟೋದೊ
ಮಾಯಾವಾಗಿ ಹಾರಿ ಹೊಂಟೋದೊ ।

ಹರಳಯ್ನ ಪಾದ್ರಾಕ್ಷಿ ಕೈಲಾಸ್ಕೆ ಹೊರಟೋದೊ
ಇವ–ಭಗ್ಗನೆ ಕತುಕೊಂಡ ಮಧುವರಸ ।

ಭಗ್ಗಭಗ್ಗನೆ ಉರಿ ಎದ್ದು ಧಿಗ್ಗು ಧಿಗ್ಗುನೆ ಉರಿದು
ಅವ ಜಗ್ಗು ಜಗ್ಗುನೆ ಬ್ರಾಮಣ ಕುಣಿದಾನೊ ।

ಮೂರು ಸಾರಿ ಹತ್ತಿ ಫಕ್ಕನೆ ಕೆಟ್ಟೋಯ್ತು
ಉರಿ ಹೊಪ್ಪಲೆ ಅವನ ಮೈಯಲ್ಲಿ ।

ಬಾಯ್ ಬಾಯಿ ಬಡಿಕೊಂಡು ಬಿದ್ದೊಡಾವನೆ ಬ್ರಾಮಣ
ಓಡು ಬಂದು ಬಿದ್ದ ತಮ್ಮನೆಯಲ್ಲಿ ।

ಮನೆಯೊಳಗೆ ಬಿದ್ದುಕೊಂಡು ಹೊರಳಾಡುತಾನೆ ಮಧುವರಸ
ಹಾಳಾದ ಉರಿಜ್ವಾಲ್ಯ ತಾಳನಾರ ।

“ಯಾರಾರಮ್ಮ ಯಾರ್ರೊ ನನ್ನ ನೀರಿನ ಗೌಡಿರೆ
ನನ್ನೂರು ಮುಂದಲ ಕೊಳುಕ್ಹೋಗಿ ।

ನನ್ನೂರು ಮುಂದಲ ಕೊಳಕೋಗಿ ಗೌಡೀರೆ
ತಣ್ಗೀರಾಗಣಿಯ ತನ್ನಿರಮ್ಮ ।

ತಣ್ಗೀರಾಗಣಿಯ ತಂದು ಬ್ಯಾಗನೆ ನೀವು
ನನ್ನ ಮಂಡೀಗೆ ಬ್ಯಾಗ ಎರೀರಮ್ಮ ।
ನನ್ನ ಮಂಡೀಗೆ ಬ್ಯಾಗ ಎರೀರಮ್ಮ ಗೌಡೀರೆ
ನಾ–ಯಮಲೋಕಕ್ಕೆ ಹೋಗೋ ಗತಿ ಬಂತು” ।

ಯಾರಿಂದೇನಾಯ್ತಪ್ಪ ನಮ್ಮ ಮಧುವರಸಂತ್ಹೇಳಿ
ಸುತ್ತು ಮುತ್ತುಗೆಯಾಗಿ ಅಳುತಾರೆ ।

“ಮಾತನಾಡಣ ಅಂದರೆ ಈ ಜ್ವಾಲೆ ಬ್ರಾದಿಯಲ್ಲೆ
ನಾ ತಾಳನಾರೆನವ್ವ ಈ ಜಗದಲ್ಲಿ ।

ಜಲ್ದಿ ಜಲ್ದಿ ಹೋಗಿ ನನ್ನುರಿ ಬೊಬ್ಬೆ ತಪ್ಪುಲಿ
ಉರಿ ತಪ್ಪುದ ಮೇಲೆ ನಾನು ನಿಮ್ಗೇಳ್ತೀನಿ” ।

ಹಿತ್ತಾಳೆ ಬಿಂದ್ಗೆ ತಗುದು ಕಂಚಿನ ಬಿಂದ್ಗೆ ತೆಗ್ದು
ಗೌಡೀರು ಕೊಳಕ್ಕೆ ಹೊರಟಾರು ।

ಊರಾ ಮಂದಲ ತಗುದು ಕಂಚಿನ ಬಿಂದ್ಗೆ ತೆಗ್ದು
ಗೌಡೀರು ಕೊಳಕ್ಕೆ ಹೊರಟಾರು ।

ಊರಾ ಮುಂದಲ ಕೊಳಕೆ ಬಂದರು ಗೌಡೀರು
ನೂರೊಂದು ಬಿಂದಿಗೆ ನೀರ ಮೊಗಿದಾರು ।

ನೀರನ್ನೆ ಹೊತ್ತುಕೊಂಡು ಜಟ್ಟ ದಟ್ಟನೆ ಬಂದು
ಎರೆದಾರು ಮಧುವರಸನ ಮಂಡೀಗೆ ।

ಮಧುವರಸಯ್ಯಾನ ಮೇಲೆ ಆ ತಣ್ಣೀರು ಬಿದ್ದಾಗ
ಮತ್ತಷ್ಟು ಬೆಂಕಿ ಹಚ್ಚುದಾಗೆ ।

ಹಾರ್‍ಹಾರಿ ಬೀಳಾತ್ತಾನೆ ಉರಿ ಉರಿ ಅನುತಾನೆ
ಅವ್ರು–ಬಿಸಿ ನೀರ್ತಂದು ನನ್ಗೆ ಎರಿಬವುದೆ?" ।

"ಬಿಸಿ ನೀರು ಎಲ್ಲಿ ಬಂತು ಇದು ಹಸು ನೀರು ಬ್ರಾಮಣ
ಇದು ತಣ್ಣೀರು ಕಾಣಪ್ಪ ಮಧುವರಸೆ" ।

"ನನ್ನ ಉರಿಯ ಜ್ವಾಲಿಗೆ ನನ್ನ ಮನಸು ಹಂಗಿರಬವುದು
ನನ್ನಾಸೆ ಇನ್ನು ನೀವು ಮಡ್ಗಬೇಡಿ ।

ನನ್ನಾಸೆ ಯಾರೂ ಮನದಲ್ಲಿ ಇಡಬ್ಯಾಡಿ
ನಾ–ಯಮ ಲೋಕಕೋಗೊ ಗತಿ ಬಂತು ।

ಕಲ್ಯಾಣಕ್ಕೆ ಸರಣು ಕೈಲಾಸಕ್ಕೆ ಸರಣು
ಅಲ್ಲಿರುವ ಬಸವಣ್ಣನಿಗೆ ಸರಣಪ್ಪು ।

ನಿನ್ಗೆ ಮಾಡಿದ ಪಾದ್ರಾಕ್ಷಿ ಈ ಹರಳಯ್ಯನಿಂದ ಕೇಳಿ
ಇಂತ ನವನರ್ಕಕೆ ನಾನು ಗುರಿಯಾದೆ ।

ಪ್ರಾಣವ ಬಿಟ್ಟರೆ ನಿನ್ಗೆ ಕೆಟ್ಟೆಸರು ಬಸವಣ್ಣ
ಕಾಪಾಡಿ ಕಲ್ಯಾಣ್ದ ಬಸುವೇಶ ।

ಕಾಪಾಡು ಕಲ್ಯಾಣ್ದ ಬಸವೇಶ" ಎನುತ್ಹೇಳಿ
ಎತ್ತಿ ಎರಡ್ಕರವ ಮುಗಿದಾನು ।

ದೇವರು ಬಸವಣ್ಣೋರ್ಗೆ ಬ್ಯಾಗದಲ್ಲರುವಾಗಿ
ನಮ್ಮ ಮಾನ್ಯ ಹರುಳಯ್ಗೆ ಅರುವಾಗಿ ।

"ಮಧುವರಸ ಪ್ರಾಣವ ಬುಡುತನಲ್ಲ ಗುರುವೆ
ಅವ ಸತ್ತರೆ ನಿಮಗು–ಅವಿಮಾನ ।

ಅವ ಸತ್ತರೆ ನಿಮಗು ಅವಿಮಾನ ಬಸವಣ್ಣ
ಅವ ಸತ್ತರೆ ನನಗು ಅವಿಮಾನ" ।

ಹಾಗಂತ ಹರುಳಯ್ಯ ಮನದಲ್ಲಿ ನೆನದಾಗ
ನಮ್ಮ ಗುರು ಬಸವಣ್ಣನಿಗೆ ಅರಿವಾದೊ ।

ಆಗ ಬಸವಣ್ಣನೊರು ಅವ್ರ ಪಾದುಕ್ಕೆ ಅರುವಾಗಿ
ಮಾಯಾದ ದೊಂಬಾರ ಕಳುಗಿದರು ।

ಮಧುವರಸಯ್ಯನ ಬೀದ್ಗೆ ದೊಂಬರಾಟ ಬಂತು
ಆಡುತಾರೆ ದೊಂಬಾರು ಒಂದು ತೆರನಾಗಿ ।

ಗಣವನ್ನೆ ಹೊತ್ತುತಾರೆ ದೋಳನ್ನೇ ಬಡಿತಾರೆ
ಗಣುದ್ಮೇಲ್ ಕೈ–ಬುಟ್ಟು ಆಟ ಆಡುತ್ತಾರೆ ।

ಆಡುವ ದೊಂಬಾರ ನೋಡಿದರು ಗೌಡೀರು
"ಅವ್ವ–ಇಂದೆ ಬರವುದ ಇಂತೆ ಹೊಸ ಆಟ ।

ಇಂತೆ ಗಣವ ಹತ್ತೋನ ನಾವು ನಾವೆಲ್ಲು ಕಂಡಿರನಿಲ್ಲ
ಆ ದೊಂಬರ ದೋಣನ ಬವುಣ ನೋಡಿರಪ್ಪ ।

ಎಂತೆ ಬಾವುಣವಾಗಿ ಆ ದೋಳನ್ನೆ ಹೊಡಿತಾರೆ
ಇಂತೆ ಸಂತೋಷವೆ ನಿಮ್ ಬೀದ್ಗೆ ಬರಬವುದೆ" ।

ಬಿಂದಿಗೆ ಇರೀಕೊಂಡು ಸಂದು ಸಂದ್ಗೆ ಸೇರಿಕೊಂಡು
ನೋಡುತಾರೆ ದೊಂಬಾರ ಆಟವ ।

ನೋಡುತಾರೆ ಗೌಡೀರು ದೊಂಬಾರ ವಿದ್ಯಾವ
"ನೀರುಗೆ ಹೊತ್ತಾಯ್ತು ನಡೀರವ್ವ ।

ಬುಟ್ಟನೆ ಮಧುವರಸ ಕಟ್ಟಾಕಿ ಹೊಡಿತಾನೆ"
ಎಂದು ಹೊರುಟೋದ್ರು ನೂರು ಜನ ಗೌಡೀರು ।

ನೂರೊಂದ್ಜನದ ಪೈಕೀಲಿ ನೂರು ಜನ ಹೊರಟೋದ್ರು
ಒಬ್ಬ ಕಣ್ಣು ಕಾಣದಜ್ಜಿ ನೀರಿನ ಬೋರಮ್ಮ ।

ದೊಂಬರ ವಿದ್ಯಾ ತೀರಿತು ಗಣವನ್ನೆ ಕಿತ್ತುಕೊಂಡು
ಅವ್ರು ಪೊಟ್ಟಣ ಕಟ್ಪೋಗ ಹುಡುಕುತಾಳೆ ।

ಪೊಟ್ಟಣ ಕಟ್ಕೊಕೊಂಡಾಗ ಹುಡುಕುತಾಳಜ್ಜಮ್ಮ
ನೂರು ಜನರ ನೀರ ಗೌಡೀರ ।

“ಎಲ್ಲೆಲ್ಲಿ ಹುಡುಕಿದರು ಆ ಗೌಡೀರೆ ಇಲ್ಲವಲ್ಲ
ಸೂರ್ಯ ಮುಳುಗಿ ಸಂದೆ ಆಯಿತಲ್ಲ ।

ಕತ್ತಲೆ ಆಯಿತಲ್ಲೊ ನಾಯತ್ತಲಾಗೋಗಲಿ
ನಾ ಎಲ್ಲೋಗಿ ನೀರ ಮೊಗೆಯಲಿ ।

ಬರಿ ಬಿಂದ್ಗೆ ಕೊಂಡ್ಹೋದ್ರೆ ನನ ಬುಟ್ಟಾನ ಮಧುವರಸ
ಕಟ್ಟಾಕಿ ನನ್ನ ಹೊಡೆಯಾನು ।

ಕಟ್ಟಾಕಿ ನನ್ನ ಹೊಡೆಯೋನು ಮಧುವರಸ
ನನಗ್ಯಾರೂ ಗತಿಯಿಲ್ಲವಲ್ಲ ಪರಶಿವನೆ ।

ಕಾಪಾಡಪ್ಪ ಬಸವಣ್ಣ ಈ ಪಾಪ ಮಾಡಿದ ಮಂಡ್ಯ”
ಎಂದು ಕಲ್ಯಾಣಕ್ಕೆ ಕೈಯ ಮುಗಿದಾಳು ।

ಎತ್ತಿ ಕೈಯ ಮುಗಿದ ಕಲ್ಯಾಣ್ದ ಗುರುಮಠಕೆ
ಅವಳು ಕತ್ತಿನ ಲಿಂಗ ಮಗುವಾಯ್ತು ।

ಕತ್ತಲಿರುವ ಲಿಂಗ ಒಳ್ಳೆ ಸಣ್ಣ ಜಂಗಮನಾಗಿ
ಅಜ್ಜಮ್ಮನ ಕೈಯ ಹಿಡಿದೀತು ।

“ಯಾಕಮ್ಮ ಅಜ್ಜಮ್ಮ ನೀ ಓರ್ವಳೆ ಅಳುತೀಯೆ
ಎಲ್ಲಿಗೋಗುಬೇಕು ನನಗೇಳು ।

ಎಲ್ಲಿಗೋಗಬೇಕು ನನ್ನಗೇಳು ಅಜ್ಜಮ್ಮ
ಅಲ್ಲೆ ಕೈ ಹಿಡಿದು ಕರ್ಕೊಂಡು ನಾ ಹೋಗುತ್ತೀನಿ” ।

“ಮಧುವರಸಯ್ನು ಮನೆಗೆ ನಾ ಗಂಗೆಯ ಹೊರಬೇಕು
ಈ ಊರ ಮುಂದ್ಲ ಕೊಳವ ತೋರಪ್ಪ” ।

“ಇದಾಕ್ಕಾಗಿ ಅಳುತೀಯಾ ನೀ ನಡಿಯವ್ವ” ಅನುತ್ಹೇಳಿ
ಕೈ ಹಿಡಿದು ಅಜ್ಜಮ್ಮನ ಕರತಂತು ।

ದೇವುರರುಳಯ್ಯನವರ ಕಕ್ಕೆ ಸೊಪ್ಪನ ಮಠ
ಅವ್ರ ಮದರಂಗ ಕೊಳಕೆ ಕರತಂದ ।

ಮದರಂಗನ ಕೊಳ ಅಂದ್ರೆ ಮಾನ್ಯ ಹರುಳಯ್ಯ
ಚರ್ಮಗಳ ಹದಮಾಡೋ ಕೊಳವಲ್ಲೊ ।

ಆ ಕೊಳದ ಬಳಿಯಾ ಒಳ್ಗೆ ಅಜ್ಜಮ್ಮನ ನಿಲಿಸಿಬುಟ್ಟು
ಆ ಬಿಂದಿಗೆ ಕೊಡವ ಮೊಗೆದಾನೊ ।

ಒಂದು ಬಿಂದಿಗೆ ನೀರ ಆ ಬಾಲಕನು ಮೊಗೆ ತಂದು
ಅಜ್ಜಮ್ಮನ ನೆತ್ತಿಗೆ ಹೊರಸೀತು ।

ಅಜ್ಜಮ್ಮ ತಲೆಮ್ಯಾಲೆ ಈ ನೀರ ಮಡಿಗಿದಾಗ
ಆ ನೀರು ಮರುಗ ಮಲ್ಲಿಗೆ ಹೊಸ ಗಮನ ।

ಎಂದು ಇಲ್ಲದ ನೀರ ಇಂದೇನು ದೇಕರಿಸೀವು
ಇಂದು ಹರುಳಯ್ನ ಮನೆಯ ಆಗ್ನಿಯೆಂದ ।

ಹೊತ್ಕೊಂಡು ಬರುತಾಳೆ ಕೈ ಹಿಡಿದವ್ನೆ ಬಾಲಕನು
ಮಧುವರಸಯ್ಯನ ಮನೆಗೆ ಬಿಡುತ್ತಾನೆ ।

ಮಧುವರಸಯ್ಯನ ಮನೆಗೆ ಬಿಟ್ಟು ಮಾಯಾವಾದನು ಬಾಲಕ
ಮಾಯ್ದಲಿ ಲಿಂಗವಾದ ಕೊರಳಿಗೆ ।

ಕತ್ತಿಗೆ ಲಿಂಗವಾದ ಆ ಪುತ್ರ ಜಂಗುಮನು
ಹೊತ್ತಂದ ಆಗಣಿಯಾ ಒಳಗಡೆ ।

“ಎಲ್ಲಾರು ಬಂದ್ರಲ್ಲಾ ಅಜ್ಜಿ ಬರಲಿಲ್ಲಾವಲ್ಲ
ಅವುಳ್ಗೆ ಸಂಬಳ ಕೊಡಬವುದ ಅನ್ಯಾಯವಾಗಿ ।

ಕಣ್ಣು ಕಾಣದ ಮುಂಡ್ಯ ನನ್ಮನೆಯಲ್ಲಿ ಇರಿಸಿಕೊಂಡು
ಒಂದು ಕೆಲ್ಸವು ಇಲ್ಲ ನನ್ ಮನೆಯಲ್ಲಿ ।

ಕಷ್ಟಾದ ಕಾಲ್ದಲ್ಲಿ ನೀರುಗೋದ ಮುಂಡೆ
ಅವಳಿನ್ನು ನೀರ ತರನಿಲ್ಲ” ।

ರೇಗಿ ರೇಗಿ ಬೀಳುತಿದ್ದ ಅಷ್ಟೊತ್ತಿಗೆ ಬಂದಳಜ್ಜಮ್ಮ
ಆ ದೇವರು ಬಸವಣ್ಣನ ನೆನಿದಾಳು ।

ಮಾನ್ಯ ಹರುಳಯ್ಯ ತನ್ನ ಮನದಲ್ಲಿ ನೆನುಕೊಂಡು
ಅವರ ನೆತ್ತಿಯ ಮ್ಯಾಲಾಗಣಿಯ ಎರಿದಾಳು ।

ನತ್ತಿಮ್ಯಾಲಾಗಣಿಯ ಅಜ್ಜಮ್ಮ ಎರಿದಾಗ
ತಪ್ಪೋಯ್ತು ಮಧುವರಸನ ಉರಿ ಬೊಬ್ಬೆ ।

ಉರಿಯೆಲ್ಲ ತಪ್ಪೋಯ್ತು ಬೊಕ್ಕೆವೆಲ್ಲ ಮರುಸೋಯ್ತು
ಇದ್ದಾಂಗೆ ಆದ ಆ ಮಧುವರಸು ।

ಇದ್ದಾಂಗೆ ಆದ ಆ ಮಧುವರಸು ತಾನು
ಹರುಸುವಾಯಿತು ಅವನ ರುದಯಕ್ಕೆ ।

“ನನ್ನ–ಜನ್ಮ ಪಾವನ ಮಾಡ್ದ ಅಜ್ಜಮ್ಮನ ಬೈಯ್ ಬೇಡಿ
ಆ–ಅಜ್ಜಮ್ನ ಸ್ವಲ್ಪ ಬರ ಹೇಳಿ ।

ನೀರು ತಂದಜ್ಜಮ್ಮನ ಬೇಗ ಕರೆತನ್ನಿ” ಅನುತ್ಹೇಳಿ
ಆಳ ಮೇಲೆ ಆಳ ಕಳುಸೀದ ।

ಬಂದಂತ ಆಳುಗೊಳ ನೋಡಿದ ಅಜ್ಜಮ್ಮ
“ಕಂದಾನೆ ನಾ ಬಲ್ಲಿ ನನ್ ಹೊಡೆಯೋದಕೆ ।

ಇಷ್ಟು ಹೊತ್ತುನ್‌ತನ್ಕ ನೀ ಎಲ್ಲಿಗೆ ಹೋಗಿದ್ದೆ ಎಂದು
ಹೊಡೆಯಾಕೆ ಕರದವ್ನೆ ನನ್ನ ಮಧುವರಸು ।

ಪಾಪ ಮಾಡಿದ ಮುಂಡ್ಯ ಕಾಪಾಡು ಬಸವಣ್ಣ” ಎಂದು
ಗಡಗಡನೆ ಒದುರಿ ಹೊರಟಳು ।

ಅಂಜುತ ಅಳಕುತ ಜೀವ ಕೈಯಲ್ಲಿ ಹಿಡಿದು
ಮುದುರಿ ಮುದ್ಯಾಗಿ ಬಂದ ಸಂಧನಕೆ ।

ಮುದುರಿ ಮುದ್ಯಾಗಿ ಅವನ ದಾರಿಗೆ ನಿಂತುಕೊಂಡು
ಜೋಡಿಸಿ ಎರಡು ಕರವ ಮುಗಿದಾಳು ।

“ಸತ್ಯವಂತೆ ತಾಯಿ ನನಗೆತ್ತಿ ಕೈಯ ಮುಗಿಬ್ಯಾಡ
ನೀ ಕೈಯ ಮುಗಿದಾರೆ ಕರ್ಮ ನನ್ಗೆ ಬರುತ್ತಿದೆ ।

ಹೆತ್ತಮ್ಮ ಕೈಮುಗಿದಾರೆ ನನ್ಗೆ ಮಾಹಾಪಾಪ ಬರುತೀದೆ
ನೀ–ನೀರ್ತಂದ ಜಾಗ್ವ ಮೊದಲೇಳು ।

ಎಲ್ಲಿ ತಂದೆ ತಾಯಿ ಸುವ್ವಾಸನವಾದ ನೀರ
ಭಯಪಡಬೇಡ ಹೇಳು ನನ್ನ ಜೊತೆಯಲ್ಲಿ" ।

ಬ್ರಾಮಣಾಡಿದ ಮಾತ ಕೇಳವ್ವೆ ಅಜ್ಜಮ್ಮ
ಮರುಸುಕೊಂಡ್ಯಾಗ್ಹೇಳ್ಳಿ ಇವ್ನ ಜೊತೆಯಲ್ಲಿ ।

"ದೊಂಬರಾಟ ನೋಡ್ತ ನಾವೆಲ್ಲ ನಿಂತಿದ್ವಿ
ಸಂದೆಯಾಯ್ತು ಇವ್ರು ನನ್ನ ಕರೀನಿಲ್ಲ ।

ಕತ್ತಲೆ ಆದಾಗ ಒಬ್ಬ ಸಣ್ಣ ಜಂಗುಮ ಬಂದು
ಹಿಡುಕೊಂಡ ಮಧುವರಸು ನನ್ ಮುಂಗೈಯ ।

ಮೊದಲೋಗುತ್ತಿದ್ದ ಕೊಳಕ್ಕೆ ನನ್ಗೆ ದಾರಿಯ ಕಾಣಲಿಲ್ಲ
ಬಂದು ಕಕ್ಕೆ ಸೊಪ್ಪನ ಮಠಕ್ಕೆ ನನ್ನ ಕರದೊಯ್ದ ।

ಆ ಕಕ್ಕೆ ಸೊಪ್ಪಿನ ಮಠದ ಮುಂದೆ ತಾವರೆ ಹೂವಿನ ಕೊಳ
ಆ ಕೊಳದಾಗಾಣಿಯ ನಾನು ತಂದನಪ್ಪ" ।

ಅಜ್ಜಿ ಆಡಿದ ಮಾತ ಅರ್ಥ ಮಾಡಿಕೊಂಡು ಬ್ರಾಮಣ
ಹಿಗ್ಗಿದ" ಅವನ ಸಿರುತೇರ್ಥ।

ಯಾರ ಮನೆ ಕೊಳದ್ದಲ್ಲ ಹರಳಯ್ನ ಮನೆ ಕೊಳ
ಅವುನೆಂತೇವ್ಯಾಗಿರಬಹುದು ಘನಸರಣ? ।

ಆ ಹರುಳಯ್ಯ ನಿಂದೀಸಿ ನಾ ಕೆಟ್ಟು ಬೆಂದೆನಲ್ಲ
ಈಗವನ ಮನೆಯ ಸಿರುತೇರ್ಥ ।

ಈಗವನ ಮನೆಯ ಸಿರುತೇರ್ಥ ನನ ಮಂಡೆಯ ಮೇಲೆ
ಬೀಳಲಾಗಿ ಪಾವನವಾಯ್ತು ನನ ರುದಯವು ।

ಪಾವನವಾಯ್ತು ನನ್ನ ರುದಯವು ಎಂದು
ಹಿಗ್ಗಿಗ್ಗಿ ಮಧುವರಸ ನಗುತ್ತಾನೆ ।

ಮಾಡಿದರೆ ಮಾಡಬೇಕು ಇಂತ ಒಳ್ಳೆ ನಂಟ
ಮಾಡದೆ ಹೋದರೆ ಫಲವೇನು ।

ಮಾನ್ಯ ಹರುಳಯ್ಯನ ಮಹಿಮೇಯ ನಾ ಕಂಡಿ
ಆ ಶರಣಾನ ನೆಂಟ ಮಾಡ್ಬೇಕು ।

ಸರಣ ಹರುಳಯ್ಯನಿಗೆ ಒಬ್ಬಳೆ ಹೆಣ್ಮಗಳು
ಆ ಹರುಳಯ್ನ ಮಗಳ ತರಬೇಕು ।

ಹರುಳಯ್ನ ಮಗಳ ನನ್ ಮಗನೀಗೆ ತಂದಾರೆ
ನಮ್ಮ ಪಾಪಗಳೆಲ್ಲ ಪರಿಹಾರ" ।

ತನ್ನ ಜೊತೆಗಾರರ ಕರೆಕೊಂಡು ಮಧುವರಸು
ಹರುಳಯ್ನ ಮಠಕೆ ಬರುತ್ತಾನೆ ।

ಕುದುರೆ ಸಾರೋಟನ್ನೆ ಏರುಕೊಂಡು ಮಧುವರಸು
ಬಲು-ಪ್ರೇಮದಲ್ಲಿ ಬರುತ್ತಾನೆ
ಹರುಳಯ್ನ ಗುರುಮಠಕೆ ।

ಕಕ್ಕೆ ಸೊಪ್ಪಿನ ಮಠದ ಮುಂದೆ ನಿಂತುಕೊಂಡರುಳಯ್ಯ
ಬರುವ ಮಧುವರಸನ ನೋಡುತ್ತಾರೆ ।

"ಎಂದು ಇಲ್ಲದ ಮಧುವರಸು ಇಂದ್ಯಾಕೆ
ಬಂದರೊ ನಾ ಕಾಣೆ
ಮಠವನೆ ಕೆಡುವ ದಿನ ಬಂತು ।

ಮಠವನೆ ಕೆಡುವ ದಿನ ಬಂತಲ್ಲ ಕಲ್ಯಾಣಿ
ಅವುರುಗೊಂದು ಮಂಗಳಾರತಿಯಾ ಬೆಳಗೆ"ಂದು ।

ಬಂಧ ಮಧುವರಸೀಗೆ ಒಂದಾರುತಿಯ ಬೆಳಗಿದರು
"ಸ್ವಾಮಿ ಬಂದಂತ ಬಗೆಯ ನಮಗ್ಹೇಳಿ ।

ದೊಡ್ಡೋರು ಈವತ್ತು ಬಡುವನ ಮಠಕೆ ಬಂದೀರಲ್ಲ
ಸಂದೇಗವೇನ ಮೊದುಲ್ಹೇಳಿ ।

"ಕುಳುತುಕೊಳ್ಳಿ ಹರುಳಯ್ಯ ಹೇಳುತೀನಿ ಒಂದು ಮಾತ
ಲಾಲೀಸ್ ಬೇಕಪ್ಪ ನಿನ್ ಮನದಲ್ಲಿ ।

ಲಾಲೀಸಬೇಕಪ್ಪ ನಿನ್ ಮನದಲ್ಲಿ ಹರುಳಯ್ಯ"
"ಅಂತ ಮಾತೇನು ಸ್ವಾಮಿ ತಿಳಿಪಡಿಸಿ" ।

"ನಿಮ್ಮ ಪಾದ್ರಾಕ್ಷಿಯ ಕೇಳಿ ನಾ ಕೆಟ್ಟುದ್ದು ಗೊತ್ತಾಯ್ತೆ
ನಾ ಪಟ್ಟುಂತ ಕಷ್ಟ ನಿಮುಗೆ ತಿಳಿದಿಲ್ವೆ" ।

"ಕಾಲುನೆಕ್ಕುಡದಿಂದ ನಿಮಗೇನು ತೊಂದರೆ ಗುರುವೆ?"
"ಪರಿಹಾಸ್ಯ ಮಾಡಿ ಕೇಳುದನಲ್ಲ ।

ಪರಿಹಾಸ್ಯ ಮಾಡಿ ನೀವು ಕೇಳಿದ ಕಾರಣದಿಂದ
ತೊಂದ್ರೆ ಇರಬಹುದು ನಿಮ್ಮನಕೆ"ಂದ ।

"ಸತ್ಯವಂತರು ಅಂದರೆ ಅವರೆಂತೇರ ಬಸವಣ್ಣ
ಅವರ್ಗೆ ಮಾಡಿದ್ದ ಪಾದ್ರಾಕ್ಷಿ ಕೇಳಬಹುದ? ।

ಅವರು ಮಾಡಿದ್ದ ಪಾದ್ರಾಕ್ಷಿ ಕೇಳಬಹುದ ಮಧುವರಸ
ಪಂಥ ಮಾಡಿ ನೀವು ಕೇಳಬಹುದ ? ।

ಕಾಲಿನೆಕ್ಕಡ ಕೈಲಾಸ್ಕೆ ಹೋದವು ಅಂದ್ರಲ್ಲ
ಅವು ಹೋದವೊ ಇಲ್ವೊ ಮೊದಲ್ಹೇಳಿ" ।

"ಎಂತ ಮಾತ ಸರಣ ಮಾನ್ಯ ಹರುಳಯ್ಯ
ನೀ ಎಂತೇದ್ರಲ್ ಮಾಡಿದ್ದೊ ಶಿವ ಬಲ್ಲ" ।

"ನಮ್ಮ ಗಂಡ ಹೆಂಡರ ತೊಡೆಯ ಚರ್ಮ ಅಳಿದು ಮಧುವರಸು
ಮಾಡಿದ್ದೊ ಅವರಿಗೆ ಪಾದ್ರಾಕ್ಷಿ" ।

"ಹಿಂಗೆ ಮಾಡುವರೆಂದು ನಾ ತಿಳಿದಿದ್ರೆ ಹರುಳಯ್ಯ
ನಾನು ನಿಲ್ಲಿಸಿ ಚರ್ಚೆ ಮಾಡೋನಲ್ಲ" ।

"ಆದುದೆಲ್ಲ ಆಯ್ತು ಮುಂದೆ ಗುರುವೀನ ದಯಾವಿರಲಿ
ಈಗ ಬಂದ ಮಾತ್ಹೇಳಿ ನನ್ನ ಜೊತೆಯಲ್ಲಿ" ।

"ನಾನು ಕೇಳುದು ಮಾತ್ಗೆ ನೀನುತ್ತರ ಹೇಳಬಾರ್ದು
ನೀನು ಸಂತೋಷ್‌ದಲ್ಲಿ ಮಾತ ಕೊಡಬೇಕು ।

ನಿನಗೆ ಹುಟ್ಟಿರುವಂತ ಸುಂದರವಾದ ಮಗಳ
ಒಪ್ಪಿ ನನ್ನ ಮಗುನೀಗೆ ಕೊಡಬೇಕು ।

ನಿನ್ನ ಮಗಳ ಕೊಟ್ಟು ನನ್ಮಗನೀಗೆ ಲಗ್ನ ಮಾಡಿದ್ರೆ
ನಾವು ಬೀಗ್ ಬೀಗರಾಗಿ ಮೆರೀಬವ್ಹು" ।

ಹಂಗಂದ ಮಾತನ್ನ ಕೇಳಿದರು ಹರುಳಯ್ಯ
ಶಿವಶಿವ ಎಂದು ಸಿರುದೂಗಿ ।

ಶಿವಶಿವ ಎನುತ್ಹೇಳಿ ಸಿರುದೂಗಿ ಹರಳಯ್ಯ
ಚಿಂತೆ ಕಾಂತನಾಗಿ ಕುಳಿತಾನು ।

"ಇಲ್ಲಸಲ್ಲದ ಮಾತ ಇಕಲ್ಲ್ಯಾಕೆ ಹೇಳುವಿರಿ ಸ್ವಾಮಿ
ಏನಂದಾರು ನಮ್ಮ ಸರಣರು ।

ಅಜ್ಜುಬೀಡನ ಅಳಿಯ ಮಧುವರುಸ ಬ್ರಾಮಣನು
ಅವನ ಮಗನಿಗೆ ನಮ್ಮ ಹರಳಯ್ಯ ।

ಅವನ ಮಗನಿಗೆ ನಮ್ಮ ಹರಳಯ್ಯ ಮಗಳ ಕೊಟ್ಟನೆಂದರೆ
ಜಗತ್ಯಕೆ ನನ್ನ ಬಾಳು ನಗೆಬಾಳು ।

ಜಗತ್ಯವೆ ನಗುತಾವೆ ನಮ್ಮ ಬಸವಣ್ಣ ನೆಗುತಾರೆ
ಸುದ್ದಿ ಕೇಳಿದರೆ ಬಿಟ್ಟಾನ ಕೊಂಡಗರ ಮಂಚ? ।

ಬಿಜ್ಜಳ ದೊರೆಯ ಬಳಿಗೆ ನನ್ನನ್ನೆ ಕರುಸುಕೊಂಡು
ಕೊಡಬಾರ್ದ ಕೊಲೆಯ ಕೊಡುತಾರೆ ।

ಜಾತೀಲಿ ಬ್ರಾಮಣನ ನೀ ಒಪ್ಪಿಕೊಟ್ಟ ಮಗಳ
ಅಂತ್ಹೇಳಿ ಸುಮ್ಮಾನೆ ಬಿಟ್ಟಾರೆ ಬಿಜ್ಜಾಳ? ।

ಯಾವ್ ಮಾತೇಳಿದಾರು ಕೇಳಿ ಮಧುವರಸ
ಹೆಣ್ಣೀನ ಮಾತು ನಿಮಗ್ಯಾಕ ? ।

ಹೆಣ್ಣಿನ ಮಾತು ನಿಮಗ್ಯಾಕೆ?" ಅಂತ್ಹೇಳಿ
ಆದಿ ಹರುಳಯ್ಯ ನುಡಿದನು ।

ಹರುಳಯ್ಯಾಡಿದ ಮಾತ ಕೇಳಿದನು ಮಧುವರಸು
ಕೋಪ ಹತ್ತೀತು ಅವನ ಮನದಲ್ಲಿ ।

"ದೊರೆಯೆ ಬಿಜ್ಜಳ ರಾಜ ಆ ಗುರುಗಳು ಬಸವಣ್ಣ
ನಾವು ನೀವೊಂದಾಗಿದರೆ ಏನ ಮಾಡಾರು ।

ನಾವು ನೀವೊಂದಾಗಿದರೆ ಏನ ಮಾಡಾರು ಹರುಳಯ್ಯ
ನಾವು ನೆಂಬರಾದರೆ ಬ್ಯಾಡ ಅನ್ನುವಾರ ।

ಏನ ಮಾಡರು ಅವರು ಹರುಳಯ್ಯ ಹೇಳೂ"ಂತ
ಮಧುವರಸು ಅವಗೆ ತಿಳುಹೀದ ।

"ನಿಮ್ಮ ಮನೆಯ ನೀರು ನನ ಮಂಡೇ ಮ್ಯಾಲೆ ಬಿದ್ದು
ತಪ್ಪೀತು ನನ್ನ ಉರಿಜ್ವಾಲೆ ।

ನಿಮ್ಮ ಗುಟ್ಟಾ ನಾನು ಕಂಡಿವ್ನಿ ಹರಳಯ್ಯ
ಇಂತೆ ಸರಣಾನ ನೆಂಟ ನಾ ಮಾಡಬೇಕು ।

ನಮ್ಮರ್ಮ ಕಾಣದ ನನರು ಏನಾರ ಹೇಳಿಕ್ಕೊಳ್ಳಿ
ನೀವೊಂದೇ ದುಡದಲ್ಲಿ ಒಪ್ಪ ಕೊಡಬೇಕು ।

ಒಂದೆ ದುಡದಲ್ಲಿ ಒಪ್ಪ ಕೊಟ್ಟರೆ ಹರಳಯ್ಯ
ನನ್ಗೆ ಬಂದಂತ ಕಷ್ಟ ಪರಿಯಾರ ।

ಏನು ಬಂದರು ಬರಲಿ ನಿಮ್ಮಿಂದ ಹರಳಯ್ಯ
ನೀವು ಕೊಡದಿದ್ದರೆ ಪ್ರಾಣ ಕಳಿಯಾದು ನಾವು ನಿಜತಾನೆ ।

ನಿಮ್ಮಿಂದ ನಮ್ಮ ಪ್ರಾಣ ಕಳುಕೊಳ್ತೀನಿ ಹರುಳಯ್ಯ
ನಾ ಪ್ರಾಣ ಬಿಟ್ಟರೆ ನಿಮಗೆ ಅವಿಮಾನ" ।

ಬಂತಲ್ಲ ಗ್ರಾಚರ ಎಂದು ಹರುಳಯ್ಯ
ದುಕ್ಕ ದುಕ್ಕುಳಿಸಿ ಅಳುತಾರೆ ।

ಯಾಕೆ ಅಳುತೀರ ಸ್ವಾಮಿ ಹರಳಪ್ಪನವರೆ ಎಂದು
ಆ ಕಲ್ಯಾಣಮ್ಮ ಕೇಳಿದರಂತೆ ।

"ಮಧುವರಸು ಬಂದವ್ರುರೆ ಮಗನಿಗೆ ಮಗಳ ಕೇಳತಾರೆ
ನಾ ಏನ್ವೇಳಲಿ ಹೆಣ್ಣೆ ಅವ್ರ ಜೊತೆಯಲ್ಲಿ ।

ಹೆಣ್ಣು ಕೊಡದೆ ಹೋದರೆ ಪ್ರಾಣ ಕಳಕೊಂಡಾರಂತೆ
ಈ ಗ್ರಾಚಾರ್ವ ಎಲ್ಲೋಗಿ ನಾನು ಕಳಿಯಾಲಿ?" ।

ಹರುಳಪ್ಪಾಡಿದ ಮಾತ ಕೇಳಿದರು ಕಲ್ಯಾಣಮ್ಮ
"ಇದಕ್ಯಾಕೆ ಸಂದೇಗೆ ಪಡುತೀರಿ ।

ಸೃಷ್ಟಿ ಮಾಡಿದ ಬ್ರಮ್ಮ ಆ ಬರಾ ಬರೆದಿದ್ರೆ
ನಾವು ನೀವು ಏನ ಮಾಡಬಲ್ಲೊ ।

ನಾವು ನೀವು ಏನ ಮಾಡಬಲ್ಲೊ ಹರಳಯ್ಯ
ನಿಮ್ಮಾತೀಗೆ ಪ್ರತಿ ಉತ್ರ ನಾ ಹೇಳ್ಲಾರಿ ।

ಒಪ್ಪು ಮಾತ ಕೊಡಿ ಅವರ್ಹಣೆ ಬರದಂಗಾಗ್ಲಿ!"
ಆ ತಾಯಿ ಕಲ್ಯಾಣಮ್ಮ ನುಡಿದಳು ।

"ಹೆಣ್ಮಾತ್ರ ಅವ್ರಮ್ಮನೆಗೆ ಮದುವೇಗೆ ಕಳುಗೋಳಲ್ಲ
ನಡೆ ಮದುವಿಗೆ ಗಂಡು ಇಲ್ಲೆ ಬರಬೇಕು ।

ಸೀತಾಳು ಚಪ್ಪರವ ನಮ್ಮಠದಲ್ಲಿ ಹಾಗಬೇಕು
ಆದರೆ ತಿರ್ಮಾನ ಮಾಡಿ ಕಳುಗೆ"ಂದ ।

"ಶಾಸ್ತ್ರ ಕೇಳಿಕೊಂಡು ಅದ್ರ ಸಮ್ಮಂದ ತಿಳಿಕೊಂಡು
ಬನ್ನಿ" ಹೋಗಿ ಎಂದ ಕಳುಗೀದ ।

ಕಲ್ಯಾಣಮ್ಮನ ಮಾತ ಕೇಳುಕೊಂಡು ಹರಳಯ್ಯ
ಈ ಉತ್ರ ಮಧುವರಸುಗೆ ತಿಳಿಸಿದರು ।

"ಶಾಸ್ತ್ರ ಸಮ್ಮಂದ ನಾವೋದಿರುವ ಬ್ರಾಮ್ಮಣ
ಬರುವಾಗಲೆ ನೋಡಿ ಬಾ ಬಂದಿವ್ನಿ ।

ನಿಮ್ಮ ಮಗಳಿಗೂ ನನ್ನ ಮಗನೀಗೂ
ವರ ಚನ್ನಾಗಿದೆ" ಅಂತಾನೆ ।

ವರ ಚೆನ್ನಾಗಿದೆ ಅಂತ್ಹೇಳಿ ಮಧುವರಸು
ಆಗಲ್ಲಿ ತಾನು ನಗುತಾನೆ ।

ಗಂಡು ಇಲ್ಲಿಗೆ ಬರಲಿ ಯಾವತ್ತು ಧಾರೆಯೆಂದು
ಹರಳಯ್ಯ ಕೇಳಿ ತಿಳಿದಾನು ।

"ನಾಳೆ ಸೋಮುವಾರ ಶುಭ ಲಗ್ನ ಉಂಟು
ಬೆಳಗಿನೊಂಬತ್ತಕ್ಕೆ ತಾಳಿ ಕಟ್ಟಿಸಿರಿ ।

ಬೆಳಗಿನೊಂಬತ್ತಕ್ಕೆ ತಾಳಿ ಕಟ್ಟಿದರೆ
ಬಾಳ ಚನ್ನಾಗಿದೆ" ಅಂದ ಮಧುವರಸ ।

"ಹೋಗಿ ಬರಲ್ಯಪ್ಪ ನಾವು ಒಪ್ಪಂದವೆ ನಿಮಗೆ
ಗಂಡು ಬಂದಾಗ ಮಾತ ತಗಿಬ್ಯಾಡಿ ।

ಶುಭ ಲಗ್ನಕ್ಕೆ ಮಾತ್ರ ಅಡ್ಡಿ ಮಾಡಬ್ಯಾಡಿ
ಇದು ಕಂಡುತ್ವಾಗಿ ಹೇಳಿ ಹರಳಯ್ಯ ।

ಎಡ ಬಲದೋರ ಮಾತ ನಿಮ್ ಕಿವಿಯಲ್ಲಿ ಕೇಳ್ಕೊಂಡು
ಇದಕಡ್ಡಿ ಮಾಡಿದರೆ ಗುರಿ ಯಾರು? ।

ಅಡ್ಡಿಯ ಮಾಡಿದರೆ ನಾ ಗುರಿಯಾಯ್ತೀನಿ" ಅಂತ್ಹೇಳಿ
ಹರುಳಯ್ಯ ಒಪ್ಪು ಕೊಡುತ್ತಾನೆ ।

"ರಾಜ ಬಿಜ್ಜಳನಿಂದ ಏನಾರು ಬಂದಾರೆ
ಅದ್ಕೆ–ತಗುಲಾಗಿ ನೀನು ಇರುಬೇಕು ।

ಆ ಮಾತಿನ ಭಾರ ನಿಮ್ಮದು ಮಧುವರಸೆ
ನನಗವಿಮಾನ ಮಾತ್ರ ತರುಬ್ಯಾಡಿ" ।

"ಯಾವುದು ಬಂದಾರು ನನ್ ಭಾರವಾಗಲಿಯಪ್ಪ
ವೈರಿಗಳಿಗೆ ನೀವ್ ಹೆದುರ್ಬ್ಯಾಡಿ ।

ವೈರಿಗಳಿಗೆ ನೀವ್ ಹೆದುರ್ಬ್ಯಾಡಿ ಹರಳಪ್ಪ"
ಇಂತೆ ಧೈರ್ಯದ ಮಾತ ಹೇಳುತಾರೆ ।

ಇಂತೆ ಧೈರ್ಯದ ಮಾತ ಹೇಳ್‌ಬುಟ್ಟು ಮಧುವರಸ
ಹೊರಟನು ತನ್ನ ಗುರುಮಠಕೆ ।

ಮಗನನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿ......
ತನ್ನ ಮಗನಿಗೆ ಬುದ್ದಿ ಹೇಳುತ್ತಾರೆ ।

"ರೂಪಿನಲ್ಲಿ ಚೆಲ್ವೆ ಹರಳಯ್ಯನ ಮಗಳು
ಅವಳ ಒಪ್ಪಂದ ಮಾಡಿ ಬಂದಿವ್ನಿ ।

ಅವಳ ಒಪ್ಪಂದ ಮಾಡಿ ಬಂದಿವ್ನಿ ನನ್ನ ಕಂಡ
ಒಪ್ಪುತೇನೊ ನಿನ್ನ ಮನಸೀಗೆ" ।

"ತಂದೆ ಮಾತೀಗೆ ಎಂದು ಉತ್ತುರವ ಹೇಳ್ದೋನಲ್ಲ
ಇಂದೇನ್ಹೇಳಿಯೆ ನೀನು ಹೇಳಪ್ಪ" ।

ಅಪ್ಪ ಆಡಿದ ಮಾತ ಮಗನು ಕೇಳಿದ
ನೀವೊಪ್ಪುದಂಗೆ ಮಾಡೀಂತ ಕರವ ನಮಸ್ಕರಿಸಿದ ।

"ನಾಳಿದ್ದು ಸ್ವೊಮುವಾರ ನಾವಿಲ್ಲಿಂದೋಗಲು ಬೇಕು
ಅಲ್ಲೆ ಕಾಣಪ್ಪ ನಡೆ ಮದುವೆ" ।

ತಂದೆ ಮಗನೊಂದಾಗಿ ಮಾತನ್ನೆ ಆಡುಕೊಂಡು
ಅದರಾಗುವ ಸಾಮಾನ ಸಿದ್ಯ ಪಡುಸಿದರು ।

ಹರುಳಯ್ಯನ ಮಗಳು ಆ ಮದ್ವೆ ಸುದ್ದಿ ಕೇಳಿ
ಇವ ಇಲ್ಲಿ ಅನ್ನಹಾರ ತೊರಿದಳು ।

ಅನ್ನಹಾರಗಳ ತೊರುವ ನಿದ್ರೆನೀರ್ಗಳ ತೊರುವ
"ಆ ಬ್ರಾಮಣಗೆ ನಮ್ತಂದೆ ಒಪ್ಪ ಕೊಡುಬವುದ ? ।

ಬ್ರಮ್ಮ ಪಿಂಡಾಕೆ ನಾನು ಹೆಂಗೆ ಲಗ್ನಾವಾಗಲಿ?" ಎಂದು
ಅವ ಅರಗಳ ಬುಟ್ಟು ಅಳುತಾಳೆ ।

ಒದುಗಿ ಬಂತು ಶಿವನೆ ಮದುವೆಯ ಸಮೀಪು
ಆಗ ಮುತ್ತೈದೇರ ಕರಸಿದರು ।

ಮುತ್ತೈದೇರ ಕರೆಸಿ ಸರಣ ಹರಳಯ್ಯ
ಮೊದಲು ಸಾಸ್ತರವ ಮಾಡಿದರು ।

ಸೋಬಾನಗಳ ಪಾಡಿ ಹರಳಯ್ನ ಮಗಳಿಗೆ
ಎಣ್ಣೆ ಒತ್ತಾಗಣಿಯ ಎರಿದಾರು ।

ಹತ್ತು ಮಾನ ಕೈಯೆಣ್ಣೆ ಐದುಮಾನ ಸೀಯೆಣ್ಣೆ
ಅವ್ಳ-ಮಂಡೆಗೊತ್ತಿ ಆಗಣಿಯ ಎರಿದಾರು ।

ಅರುಸಿಣ ಸೀಗೆಕಾಯಿ ಒತ್ತುದರು ಮುತ್ತೈದೇರು
ಆಗ ಇನ್ನೊಂದಾಗಣಿಯಾ ಎರಿದಾರು ।

ಕಡೆಯಲ್ಲಿ ಪನ್ನೀರ ಮೈತುಂಬ ಹುಯ್ದುವುರೆ
ಬಿಳಿಯ ಪತ್ತಲವ ಉಡುಸಿದರು ।

ಬಿಳಿಯ ಪತ್ತಲವ ಉಡಿಸಿ ಬಿಳಿಯ ಕುಪ್ಪುಸ ಧರಿಸಿ
ಹತ್ತಕ್ಕೆ ಕಡಗಾವ ಅಲ್ಲಿ ತೊಡಿಸಿದರು ।

ಹಸ್ತ ಕಡಗದ ಮುಂದೆ ಕಸ್ತೂರಿ ಬಳೆಯ ತೊಡಿಸಿದರು
ವಜ್ಜುರ್ದ ವಾಲೆ ಅಮ್ಮನ ಕರಣಕೆ ।

ಬಲಕೆ ಬಾಚೀ ಬಂದಿ ಎಡಕೆ ಒಂಕಿ ಬಂದಿ
ಹತ್ತು ಬೆರಳಿಗೆ ಹವಳದುಂಗುರ ।

ಹತ್ತು ಬೆರಳಿಗೆ ಹವಳದುಂಗುರ ಧರಿಸಿ
ಹೆಣ್ಣಿಗೆ ಸುಂಗಾರ ಮಾಡಿದರು ।

ತುಂಬಿದ ಸ್ವೋಮಾರ ಸೀತಾಳು ಚಪ್ಪರ ಹಾಕಿ
ಕಂಬ ಮೂರುತವ ಮಾಡಿದರಂತೆ ।

ಕಂಬ ಮೂರುತವಾಯ್ತು ಹರಳಯ್ನ ಮಠದಲ್ಲಿ
ತನ್ನ ಬಳಗವನ್ನೆಲ್ಲ ಕರಕೊಂಡು ।

ತನ್ನ ಬಳಗವನ್ನೆಲ್ಲ ಕರಕೊಂಡು ಮಧುವರಸು
ಮಗನ ಕರಕೊಂಡು ಹೊರುಟಾರು ।

ಗಂಡು ಕರುಕೊಂಡು ಬಂದುರು ಹರುಳಯ್ನ ಮಠಕೆ
ಸೀತಾಳು ಚಪ್ಪುರಕ್ಕೆ ಬಂದು ಇಳಿದಾರು ।

ಸೀತಾಳು ಚಪ್ಪುರಕ್ಕೆ ಗಂಡು ಬಂದಿಳಿದಾಗ
ಅವುನ್ಗೆ ಪರದಾವ ತಂದು ಬಿಡುತಾರೆ ।

ಪರದದ ಒಳಗಡೆ ಅವರ ಮಗನ ನಿಲುಸುದರಿ
ಸರಿಯಾಗಿ ಒಂಬತ್ತು ಗಂಟೆ ತುಂಬೀತು ।

ಸರಿಯಾಗಿ ಒಂಬತ್ತು ಗಂಟೆಯಾಯ್ತು ಹರುಳಯ್ಯ
ಸಾಸ್ತ್ರಕ್ಕೆ ನಿಮ್ಮಗಳು ಬರನಿಲ್ಲ ।

ಹರುಳಯ್ಯನವರ ಮಗಳಿಗೆ ಮೈತುಂಬ ಮುಸುಕಿಟ್ಟು
ರೇಕುವುಳ್ಳ ಬಾಸಿಂಗ ಪ್ರಣೆಯಲ್ಲಿ ।

ರೇಕುವುಳ್ಳ ಬಾಸಿಂಗ ಪ್ರಣೆಯಲ್ಲಿ ಕಟ್ಟಿರಲು
ಕಂಕಣದ ಕೈಯಲ್ಲಿ ಅಮ್ಮ ಹೊರಟರು ।

ತೆರೆಯ ಬಳಸಾ ಬಳಸ ಐದು ಬಳಸಾ ಬಂದು
ಎಳ್ಳು ಜೀರಿಗೆಯ ಹಿಡಿಸಿದರು ।

ಎಳ್ಳು ಜೀರಿಗೆ ಬಿಟ್ಟು ಪ್ರಣೆಗೆ ಈಬುತ್ತಿ ಹಸ್ಸಿ
ರೇಖೆವುಳ್ಳ ತಾಲ್ಯ ಹಿಡಿದಾರು ।

ಕುಲುಸಭೆಯ ಕೇಳಿದರು ತಾಲಿಯ ಕಟ್ಟೂದಕೆ
ಇವುಳು ಮಾಯವಾದುಳಲ್ಲಿ ಮದುಮಗಳು ।

ತೆರೆಯ ಮುಸುಕ ತಗದು ಒಳಗೆ ನೋಡಿದರು
ಹರಳಯ್ನ ಮಗಳೆ ಮೊದಲಿಲ್ಲ ।

ಹರಳಯ್ನ ಮಗಳೆ ಮೊದಲಿಲ್ಲ ಮದುವಮ್ಮ
ಹುಡುಕಾಡುತಾರೆ ಅವ ಸಿಗನಿಲ್ಲ ।

ವಾಲೆ ಮರದ ಮ್ಯಾಲೆ ಹೋಗಿ ಕುಂತವಳಲ್ಲ
ಸರಳ ನೋಡಿದ ಹರಳಯ್ಯ ।

"ಎಲ್ಲೆಲ್ಲಿ ಹುಡುಕಿದರು ಇಲ್ಲವಲ್ಲ ನನ್ಮಗಳು
ಅವಳಿರುವಂತ ಜಾಗ್ವ ನಿಮ್ಗೆ ತೋರುತೀನಿ" ।

ಈಸನ್ಯ ಬಾಗುಕ್ಕೆ ಚಪ್ಪರದಟ್ಟಿ ಒಳಗೆ
ಮಧುವರಸನ ಮಗನ ಕರತಂದು ।
ಚಪ್ಪುರದ ಈಶನ್ಯ ಭಾಗಕ್ಕೆ ಇಕ್ಕಲ ಮಾಡಿದರು
ಕೈಯಲ್ಲಿ ಕನ್ನಡಿಯ ಕೊಡುತ್ತಾರೆ ।

"ಚಿನ್ನದ ಕಂಡ್ಯಪ್ಪ ಚಿನ್ನದಂತೇವು ಕಂಡ್ಯ
ಕಂಡ ನನ್ಮಗಳ ಆನುಂದ್ರತಿಯ ।

ಬೆರಳಿಯಾ ಕಂಡ್ಯಪ್ಪ ಬೆರಳಿ ಅಂತೇವ್ಪ ಕಂಡ್ಯ
ಕಂಡ್ಯಪ್ಪ ನೀನು ಆನಂದ್ರತಿಯಾ ।

ಮದುವೆ ಕಲ್ಯಾಣವ ಮಾಡುವ ಜನಗಳಿಗೆ
ನನ ಮಗ ಆನಂದ್ರತಿಯಾಗಿ ಹೊರುಟೋದ" ।

ಹರುಳಯ್ಯಾಡಿದ ಮಾತ ಕೇಳಿ ಮಧುವರಸು
ರೇಗೀದ ಹರುಳಯ್ಯನ ಜೊತೆಯಲ್ಲಿ ।

"ಮಗಳ ಕೊಡುತೀನಿ ಎಂದು ನಿನ್ಮನೆಗೆ ಕರಸುಕೊಂಡು
ನನಗವಿಮಾನ ಮಾಡಿದ್ಯಾ ಹರುಳಯ್ಯ ।

ನನ್ನ ಮಗುಂಗು ನನಗು ಅವಿಮಾನ ಮಾಡಿದಿಯಾ
ಇಂದೋಗ್ತಿನಿ ಬಿಜ್ಜಳನ ಸನ್‌ದಾನ್ಕೆ ।

ಹೋಗೀನ್ತಿ ಬಿಜ್ಜಳನ ಸನ್ನಿಧಾನಕ್ಕೆ ಹರುಳಯ್ಯ
ನಾ ಹೋಗಿ ಹೇಳೇನು ಈ ಹೊಸ ಮಾತು" ।

ಎಂದೆಂದು ಇಲ್ಲದ ಮಾತ ಹೊಸದಾಗಿ ಅನಂದ್ರತಿ ಅಂದಮೇಲೆ
ಒಪ್ಪಕೊಳ್ಳಿ ನಾಳೆ ಕುಲದೋರು ।

ಕುಲದೋರು ಒಪ್ಪಿಕೊಳ್ಳಲಿ ಆ ರಾಜನು ಒಪ್ಪುಕೊಳಲಿ
ಅವರ್ಹೇಳೀದ ಶೀಕ್ಷ್ಯಕೆ ನೀನು ಗುರಿಯಾಗು ।

ಅವರ್ಹೇಳಿದ ಶೀಕ್ಷಕೆ ಗುರಿಯಾಗು ಹರಳಯ್ಯ
ಇನ್ನು ಮೇಲೆ ನಿನ್ನ ಹರುಳಯ್ಯ ಅನ್ನದಿಲ್ಲ ।

ಇನ್ನು ಮೇಲೆ ನಿನ್ನ ಹರುಳಯ್ಯ ಅನ್ನಿದಿಲ್ಲವಪ್ಪ
ಶೂದ್ರ ಎನುತ್ಹೇಳಿ ನಿನ್ನ ಕರಿಯೂವೆ" ।

ಇಂತ ಪ್ರಂಥ ಮಾಡಿ ಮಧುವರಸು ತಾನು
ಹರಳಯ್ನ ಮಟ ಬುಟ್ಟು ಹೊರಟನು ।

"ಅಂದಾಗೆ ಅನ್ನಿಯಪ್ಪ ಅಡ್ದಂಗೆ ಅಡ್ಯಪ್ಪ
ಸತ್ಯಕೆ ಯಾರು ತಗುಲಿಲ್ಲ ।

ಸತ್ಯಕೆ ಯಾರು ಅವಮಾನ ಮಾಡೋರಿಲ್ಲ
ಹಂಗೆ ಅನ್ನು ನನ್ನ ಜಗದಲ್ಲಿ" ।

ಬಂದ ಮಧುವರಸು ಮಗನ ಮನೆಗೇ ಬಿಟ್ಟು
ಅವನು ಹೋಗ್ತಾನೆ ರಾಜಬೀದೀಲಿ ।

ಆದಿ ಕಲ್ಯಾಣ ಅರವತ್ತಾರು ಬೀದಿ
ಆ ಬೀದಿ ಒಳುಗೆ ಬರುತಾನೆ ।

ಆ ಬೀದಿ ಒಳುಗೆ ಬರುತಾನೆ ಮಧುವರಸ
ರಾಜಾ ಬಿಜ್ಜಳನ ಅರಮನೆಗೆ ।

ತನ್ನ ಪರಂಗಪೀಠದ ಮೇಲೆ ಕುಳುತವ್ರೆ ಬಿಜ್ಜಳರಾಜ
ಅವರೊತ್ತುನಲ್ಲಿ ಕುಂತವ್ನೆ ಕೊಂಡುಗರ ಮಂದ ।

ಅವ್ರು ಕುಳಿತಿರುವ ಜಾಗಕ್ಕೆ ಬಂದ ಮಧುವರಸು
ವಂದಿಸಿ ಕರವ ಮುಗಿದಾನು ।

“ಬಂದ್ಯಪ್ಪ ಮಧುವರಸೆ ಬಂದ ಕಾರಣವೇನು
ಬಂದ ಮಾತ ಹೇಳೊ ನಮ್ ಜೊತೆಯಲ್ಲಿ” ।

“ಎಂದು ಇಲ್ಲದ ನಡತೆ ಇಂದು ನಡೆದಿದೆ ಮಹಾರಾಜ
ಪದಹೆಟ್ಟು ಹೋಯ್ತಲ್ಲ ನಮ್ಮ ಕಲ್ಯಾಣ” ।

“ಯಾತಕ್ಕೊಸ್ಕರವಾಗಿ ಹದಗೆಡುತು ಕಲ್ಯಾಣ
ಯಾರಿಂದ ಏನು ನಡೆದೀತು ।

ರಾಜರಿರುವ ಸ್ಥಳದಲ್ಲಿ ನಮಗೊಂದನು ತಿಳಿಸದೆ
ನನ್ ರಾಜ್ಯಕವಿಮಾನ ತರಬಹುದೆ ।

ನನುಗೊಂದು ಸ್ವಲ್ಪ ತಿಳುತಿಳುದು ಬಂದೀದೆ
ಬಾಯ್ ಬುಟ್ಟು ಹೇಳಯ್ಯ ನನ್ ಜೊತೆಯಲ್ಲಿ ।

ಕೊಂಡುಗರ ಮಂಚಣ್ಣ ಎಲ್ಲರ್‍ನು ಪರುಶೋದ್ನೆ ಮಾಡವ್ನೆ
ಈ ಊರಲ್ಲಿ ನಡೆಯೊದು ನನ್ನೊಳಗುಂಟು” ।

“ಎಲ್ಲರ್‍ನು ತಿಳಿದಂತ ಮಾರಾಜ ಕೇಳಪ್ಪ
ಅವ ಮಾಡಿದ ನಡತೆಯ ಹೇಳ್ತೀನಿ ।

ಯಾವತ್ತು ಒಂದಿನ ನಾ ಮಾರ್ಗದಲ್ಲೋಯ್ತಿದ್ದೆ
ಹರಳಯ್ಯ ಬಂದು ಕೈಯ ಹಿಡುಕೊಂಡು ।

ಕೈಹಿಡಿದ ಕಾರಣ ಏನೆಂದು ಕೇಳಿದಾಗ
ತಿದ್ದೀದ ಗೊಂಬ್ಯಾಗೆ ನನ ಮಗಳು ।

ತಿದ್ದೀದ ಗೊಂಬ್ಯಾಗೆ ನನ ಮಗಳು ಒಬ್ಬಳಿದ್ದಾಳೆ
ನಿಮ್ಮಗನೀಗ ಲಗ್ನ ಮಾಡ್ಕೊಳ್ಳಿ ।

ನಿಮ್ಮಗನೀಗೆ ಲಗ್ನ ಮಾಡ್ಕೊಳ್ಳಿ ಎಂದು
ತಾನೆ ಬಾಯ್ಬುಟ್ಟು ನನಗೆ ತಿಳಿಸಿದ ।

ಹಂಗಂದ ಮಾತ್ಕೇಳಿ ಹರಳಯ್ಯಾಗೆ ಹೇಳಿದೆ
ನಾನು ಬ್ರಮ್ಮ ಪಿಂಡವಲ್ಲಯ್ಯ ।

ನಾನು ಬ್ರಮ್ಮ ಪಿಂಡವಾದ್ಮೇಲೆ ಹರುಳಯ್ಯ
ಅದೆಂಗಪ್ಪ ಹರಳಯ್ಯ ಸರಿ ಎಂದಿ ।

ರೂಪಸ್ತೆ ಆದರು ಸರಿಯೆ ಚಲುವೆ ಆದರು ಸರಿಯೆ
ಕೊಟ್ಟು ತರುವ ಮಾತೆ ಬೇಡೆಂದಿ ।

ರಾಜ ಇರುವ ಸ್ಥಳದಲ್ಲಿ ನಾವೀರೀತಿ ಮಾಡಿದರೆ
ಬಿಟ್ಟಾನ ಬಿಜ್ಜಳ ದೊರೆಯೆಂದೆ ।

ಅವ ಏನು ಮಾಡಲು ಬಲ್ಲ ಬಿಜ್ಜಳ ಮಾರಾಜ
ಕೊಡುವೋರು ತರುವೋರು ನಾವಲ್ಲವ । ೧೦೧೦

ಕೊಡುವೋರು ತರುವೋರು ನಾವೊಂದಾವಣಿ ಇದ್ರೆ
ರಾಜೇನು ಮಾಡೀನು ಅಂದ ಹರುಳಯ್ಯ ।

ಅಂತಾದೊಂದು ಮನಸ್ಸು ನಿನ್ನೊಳಗೇ ಇದ್ದಮ್ಯಾಲೆ
ಆಗ್ಲಿ ಅಂತ್ಹೇಳಿ ಒಪ್ಪುಕೊಂಡಿ ।

ನೆನ್ನೆ ಸೋಮಾರ ಧಾರೆ ಮೂರುತವಿತ್ತು
ನೆಡೆ ಮದುವೆಗೆ ನನ್ ಮಗನ ಕರುತಂದಿ ।

ತೆರೆಯನ್ನ ಬುಟ್ಟುಕೊಂಡು ನನ್ನಗನ ನಾ ನಿಲ್ಲಿಸಿದ್ದಿ
ಐದ್ ಬಳಸ ಬಂದೆಳ್ಳು ಜೀರಿಗೆ ।

ಐದು ಬಳಸ ಬಂದೆಳ್ಳು ಜೀರಿಗೆ ಬಿಟ್ಟು
ತಾಲಿ ಕಟ್ಟುವಂತೆ ಹೊತ್ತಲ್ಲಿ ಹರಳಯ್ಯ । ೧೦೨೦

ತಾಳಿ ಕಟ್ಟುವಂತ ಹೊತ್ತಲ್ಲಿ ಹರಳಯ್ಯ
ಅವನೆಲ್ಲೊ ಮರುಮಾಡ್ಕೊಂಡ ತನ್ನ ಮಗಳ ।

ಎಲ್ಲೊ ಹರಳಯ್ಯ ನಿನ್ನ ಮಗಳೆಂದು ಕೇಳಾಗ
ಚಪ್ಪರದಟ್ಟೀಲಿ ಈಸನ್ಯ ಭಾಗ್ದಲ್ಲಿ ।

ಚಪ್ಪರದಟ್ಟಲಿ ಈಸನ್ಯ ಭಾಗದಲ್ಲಿ ನಿಲ್ಲಿಸಿ
ಕನ್ನಡಿ ಕೊಟ್ಟು ತೋರುಸೀದ ।

ಕನ್ನಡಿ ಕೊಟ್ಟು ಆನಂದ್ರತಿಯಾಗವ್ಳೆ ಅಂತ
ನನ್ನ ಮಗನೀಗ ಅವನು ತೋರಿಸಿದ ।

ಮದುವೆ ಆಗೋರ್‍ಗೆಲ್ಲ ಆನಂದ್ರತಿ ಆದಂತ
ಹರಳಯ್ಯ ನನ ಜೊತೆಯಲಿ ತಿಳಿಸೀದ । ೧೦೩೦

ಮಗನನ್ನು ಕರುಕೊಂಡು ಎಲ್ಲಾರ ಕರುಕೊಂಡು
ಈನನಾಗಿ ಬಂದಿ ನನ್ನ ಗುರುಮಠಕೆ ।

ರಾಜ್ಯ ಆಳೋರ್ಗೆಲ್ಲ ಅವನ್ಮಗ ಆನಂದ್ರತಿಯಂತೆ
ಇಂತೆ ಮಾತ ಅವ್ನು ಹೇಳವ್ನೆ ।

ಕಲ್ಯಾಣ್ದ ಬಸವನಿಂದ ಹೆಚ್ಚುಕೊಂಡ ಅಂತ್ಹೇಳಿ
ಕೊಂಡಕಾರ ನೊರುನೊರ್ನೆ ಹಲ್ಲ ಕಡಿದಾನು ।

"ಬಾಳ ಸರಣ ಅವನು ಹರಳಪ್ಪ ಅನುತ್ಹೇಳಿ
ಬಸವಣ್ಣ ಒಬ್ಬ ನಂಬುವುನೆ ।

ಬಸವಣ್ಣುಂಗೆ ಅವನೀಗು ಬಾಳ ಸಿನೇತ
ಅದ ಕೆಡುಸ ಬೇಕಂದ ಮಂಚಣ್ಣ । ೧೦೪೦

ಆ ಬಸವಣ್ಣಿಂದಾಗ ನಮ್ ದೆಸೆಯಲ್ಲ ತಪ್ಪೋಯ್ತು
ಈವತ್ತೇಳಿವ್ನಿ ದೊರೆಯ ಬಾಯಿ ಬುಟ್ಟು ।

ಹರಳಯ್ಯನಂತಾ ಸತ್ಯ ಯಾರಲ್ಲು ಇಲ್ಲಾಂತ್ಹೇಳಿ
ಆ ಬಸವಣ್ಣ ಹೊತ್ತಿ ಹೊತ್ತಿ ಹೊಗುಳುತ್ತಾನೆ ।

ಕಲ್ಯಾಣ ಕಟ್ಟುವ ನೀವು ರಾಜರಾದೋರು ನೀವು
ಉತ್ತರ ದೇಶದಿಂದ ಗತಿಗೆಟ್ಟು ಇಲ್ಲಿಗೆ ಬಂದ ।

ಉತ್ತರ ದೇಸ್ದಿಂದ ಗತಿಗೆಟ್ಟು ಇಲ್ಲಿಗೆ ಬಂದ
ಅವುನ್ಗೆ ಮಂತ್ರಿಯ ಪದವಿ ಕೊಡಲಾಗಿ ।

ನನ್ನೇನ್ನೇ ತಗುದ್ಬುಟ್ಟು ಅವುನ್ಗೆ ಮಂತ್ರಿಪದವಿ ಕೊಟ್ರು
ಅವ ಜಂಗುಮರ ಗುಂಪು ಕಟ್ಟುಕೊಂಡು । ೧೦೫೦

ಒಬ್ಬೊಬ್ರಾಗೆ ಸೇರುಸ್ಕೊಂಡು ಲಿಂಗಧಾರ್ಣೆ ಮಾಡ್ಕೊಂಡು
ಈಗ ಗುರು ಅಂತ್ಹೇಳಿ ಅವ್ನು ಹೆಸುರಾದ ।

ಗುರು ಆಗ್ನೆ ಕೀರ್ತ್ಯಿ ಪಡುಕೊಂಡು ಬಸವಣ್ಣ
ಈಗ ಅವುನ್ದೆ ದೆಸೆ ನಮ್ಮ ಮಠದಲ್ಲಿ ।

ಮಂತ್ರಿಯಾದುದ ಮರ್ತ ಅನ್ನ ಕೊಟ್ಟುದ ಮರತ
ಈಗ ಉರಿಯ ಸಿಂವಾಸನೆ ಗುರುವಾದ ।

ಉರಿಯ ಸಿಂವಾಸನೆ ಗುರುವಾದ ಬಸವಣ್ಣ
ಅವ್ನು ಕಟ್ಟುಕೊಂಡವ್ನೆ ಹರಳಯ್ನು ।

ಹರಳಯ್ನು ಕಟ್ಟುಕೊಂಡು ಜಾತಿ ಕುಲವಿಲ್ಲ
ಮಧುವಾನದಲ್ಲಿದ್ದ ಕೊಳವಿಲ್ಲ । ೧೦೬೦

ಮಧುವಾನದಲ್ಲಿದ್ದ ಕೊಳವಿಲ್ಲ ಬಸುವಣ್ಣ
ಎಲ್ಲಾನು ಐಕುಮತ ಮಾಡ್ದ ಬಸವಣ್ಣ ।

ಬಂದ ಬಂದೋರ್ನೆಲ್ಲ ನನ್ನವರು ಎನುತ್ಹೇಳಿ
ಎಲ್ಲಾರು ಒಗ್ಗಟ್ಟು ಮಾಡುಕೊಂಡು ।

ರಾಜ ಇರುವ ಸ್ಥಳದಲ್ಲಿ ಇಂತೆದೆಲ್ಲ ನಡುದ್ಮೇಳೆ
ರಾಜ ನಾಳೆ ನಿನಗೆ ಅವಿಮಾನ" ।

"ನೆಡಾದ ಮಾತನೆಲ್ಲ ನೀ ಹೊಟ್ಟೆಲಿಟ್ಟಿದ್ದೀಯ
ನಿನುಗಿಂತ ಇಗುತ್ವಂತ ಇಲ್ಲಪ್ಪ ನನ್ ಸಭೆಯಲ್ಲಿ ।

ನಿನ್ನಂತ ಇಗುತ್ವಂತ ಇನಿಲ್ಲ ಕಾಣಪ್ಪ
ನೀ ನ್ಯಾಯ್ಗಾರ ಕಾಣಪ್ಪ ಕೊಂಡುಗ । ೧೦೭೦

ರಾಜನಾದರೆ ಏನ ನಾ ರಾಜ್ಯ ಆಳಿದರೇನು
ಇಂತೆ ಮಾತುಗಳು ಒಂದು ನೆನುಪಿಲ್ಲ ।

ಹೌದು ನೀನೇ ಹೇಳು ಮತ್ತೆ ಬಾಳು ಹಿಗ್ಗಿದ ಬಸವ
ಬಸವಣ್ಣ ಹಿಗ್ಲಾಗಿ ಹರಳಯ್ಯ ।

ಬಸವಣ್ಣ ಹಿಗ್ಲಾಗಿ ಹರಳಯ್ಯ ಎನ್ನೋನು
ಹಿಗ್ಗಿ ಬಲು ಧೈರ್ಯ ಮಾಡವ್ನೆ ।

ಇವರಿಬ್ಬರ ಸಾಮಾರ್ಥ್ಯ ನಾವು ಮುರಿಯಲು ಬೇಕು
ಇದ್ಕೆ ತಕ್ಕ ಮಾತೇಳಪ್ಪ ಮಂಚಣ್ಣ" ।

"ಅವರೇಗ್ತಿ ಕೆಡುಸ್ಬೇಕಾದ್ರೇಳು ಬಿಜ್ಜಳು ದೊರೆಯೆ
ಕೋಟುಗೊಬ್ಬ ಸರಣಾರು ಮಂಚಣ್ಣ । ೧೦೮೦

ಕೋಟುಗೊಬ್ಬ ಸರಣಾರು ಕುಲುಕೊಬ್ಬ ಭಕ್ತರು
ನ್ಯಾಯಕ್ಕೆ ನಾವು ಸೇರಬೇಕು ।

ಇಂದೆ ನಾಳ್ಕೆ ನಾವು ನ್ಯಾಯಕ್ಕೆ ಸೇರ್ಕೊಂಡು
ಅಲ್ಗೆ ಬಸವಣ್ಣನ ನಾವು ಕರುಸ್ಬೇಕು ।

ಹರುಳ ಎಂಬೊನ್ ನ್ಯಾಯ್ವ ಆ ಸಭೆಯ ಜನಗೊಳಲ್ಲಿ
ಎಲ್ಲರ ಮುಂದೆ ಇಡಬೇಕು ।

ಉತ್ತುರಕ್ಕೆ ಉತ್ರ ಸರಿ ಬರದೆ ಹೋದ್ರೆ
ಆ ಸಮಯಾದಲ್ಲೇಳ್ತೀನಿ ನಿನ್ನ ಜೊತೆಯಲ್ಲಿ ।

ಹೆದುರ್ಬ್ಯಾಡ ಹೋಗು ಅಜ್ಜು ಬೀಡನ ಅಳಿಯ
ಮಧುವರಸು ನೀನು ಹೆದರ್ಬ್ಯಾಡ । ೧೦೯೦

ನ್ಯಾಯ ಇಟ್ಟ ಮ್ಯಾಲೆ ಹೆದುರ್ಬ್ಯಾಡ ಮಧುವರಸ
ಅವ್ರ ದೌಲತ್ತ ನಾವು ಕೆಡುಸ್ತೀನಿ" ।

ಕುಳಿತಿರುವ ಜಾಗದಲ್ಲಿ ಕುಳಿತಾನೆ ಬಿಜ್ಜಾಳ
ಆಗ ಕುಲಕೊಬ್ಬ ಭಕ್ತರಿಗೆ ವಾಲೆ ಬರಿದಾರು ।

ಕುಲಕೊಬ್ಬ ಭಕ್ತರಿಗೆ ಕೋಟಿಗೊಬ್ಬ ಸರಣರಿಗೆ
ಬಸವಣ್ಣನಿಗೊಂದ್ವಾಲೆ ಬರಿದಾರು ।

"ಕಲ್ಯಾಣಕ್ಕೆ ದೊಡ್ಡೋನು ಎಲ್ಲಾರ್ಗೂ ಲಿಂಗ ಕಟ್ಟೋನೆ
ಸಂಗಾನ ಬಸವಣ್ಣ ಬರಬೇಕು ।

ಕುಲುಪದ್ಧತಿದೊಂದು ನ್ಯಾಯ ಬಿದ್ದದಪ್ಪ
ನಾಳೆ ಸಬುಗೆ ನೀನು ಬರಬೇಕು । ೧೧೦೦

ಆ ನ್ಯಾಯ ಸಭೆಯಾಕೆ ನೀನು ಬರಬೇಕು
ಆ ಹರಳಯ್ನು ಅಲ್ಲಿಗೆ ಬರಬೇಕು ।

ನಾಳೆ ಸಭೆಯದೊಳಗೆ ಸತ್ಯವಂತರ ಮುಂದೆ
ಈ ನ್ಯಾಯವ ನಾವು ಇಡುತೀವಿ" ।

ಸತ್ಯವಂತ ಸರಣರು ಈ ವಾಲೆಯ ಓದ್ನೋಡಿ
ನಾವುತ್ರ ಹೇಳುಬೋದ ರಾಜನ ಜೊತೆಯಲ್ಲಿ ।

ರಾಜ ಉತ್ರ ಮಾಡುವರೆ ನಾ ಉಳಿಯಕಾಗದಿಲ್ಲಾಂತ
ಸರಣ ಜಂಗುಮರೆಲ್ಲ ಹೊರುಟಾರು ।

ಬಂದು ಸೇರಿರದಂತೆ ಪಂಚಾಯ್ತಿ ಮುಂದುಕ್ಕೆ
ಅಲ್ಲಿ ಕುಲವೆಲ್ಲ ಕುಳಿತಾರು ।                                                      ೧೧೧೦

ಇದೇನೊ ಗೊತ್ತಿಲ್ಲ ಯಾವ ನ್ಯಾಯ್ವೊ ಕಾಣೆ
ಹಾಗೆಂದು ಬಸವಣ್ಣ ಬರುತಾರೆ ।

ಹಾಗೆಂದು ಬಸವಣ್ಣ ದಯಾವಾದರು ಸ್ವಾಮಿ
ಮಂದದ ಕಟ್ಗೆ ಬರುತಾರೆ ।

ಬರುಬರುತ್ತ ಕರೆಯಿಸಿದರು ಹರಳಯ್ನ ಬಸವಣ್ಣ
ಈ ನ್ಯಾಯದ ಸಂದರ್ಪು ಅವುರ್ಗೆ ತಿಳಿದಿಲ್ಲ ।

ಯಾರ್ಯಾರ್ದೊ ನ್ಯಾಯ ಎಂದು ಹರಳಯ್ನ ಕರುಕೊಂಡು
ಕುಲಸಭೆಗೆ ಬಂದು ಇಳಿದರು ।

ಮೊದಲೆ ಬಂದಿಳಿದಾನೆ ಮಾರಾಜ ಬಿಜ್ಜಾಳ ದೊರೆ
ಅವನೊತ್ತಲ್ಲಿ ಕುಂತವ್ನೆ ಕೊಂಡುಗ ।                                                  ೧೧೨೦

ರಾಜನ ಬತ್ತೀಲಿ ಕೊಂಡುಗರ ಮಂಚಣ್ಣ
ಬಸವಣ್ಣ ಬರುವುದ ನೋಡಿದರು ।

ಆ ಕುಲುಸಭೆಗೆ ಬಂದು ಇಳಿದಾರು ಬಸವಣ್ಣ
ಕೂಡಿರುವ ಕುಲಕೆ ಸರಣಂದು ।

ಬನ್ನಿ ಬಸವಣ್ಣೋರೆ ನಿಮುಗೆ ಸರಣೆಂದು
ಒತ್ತಿಗೆ ಕರೆದ ಬಿಜ್ಜಾಳ ।

ರಾಜನೊತ್ತುನ ಒಳುಗೆ ನಮ್ ಬಸ್ವಣ್ಣ ಕುಳುತವ್ರೆ
ಈ ನ್ಯಾಯವ್ಯಾವುದೊ ಕಾಣೆ ನನ್ಗೆ ತಿಳಿಯದು ।

ನ್ಯಾಯ ಯಾವುದೊ ಕಾಣೆ ನನ್ಗೆ ತಿಳಿಯಾದು ಅನುತ್ಹೇಳಿ
ಆ ರಾಜನ ಕೇಳಿದನು ಬಸವಣ್ಣ ।                                                    ೧೧೩೦

"ಕೇಳ್ತಾನೆ ಕೊಂಡುಗರ ಮಂಚ ನೀವು ತಿಳುಕೊಳ್ಳಿ ಬಸವಣ್ಣ
ಒಬ್ಬೊಬ್ರುಗ್ಹೇಳೋದು ಸರಿಯಲ್ಲ ।

ಕುಲುವೆಲ್ಲ ತಿಳಿಯೊಂಗೆ ಸಾರೇಳು ಕೊಂಡಗರ ಮಂಚ
ಎಲ್ಲ ತಿಳುಕೊಳ್ಳಿ ನಮ್ಮ ಕುಲಸಭೆಯ" ।

"ಹರುಳ ಎಂಬುವನು ಯಾರೀಗೆ ಸಮ್ಮಂದ
ಇವುನ್ಗೆ ಹೆಣ್ಣು ಕೊಡೋದುಂಟ ನಮ್ ಕುಲದಲ್ಲಿ ।

ಹಿಂದೆ ಯಾರ್‍ಯಾರು ಕೊಟ್ಟಿದಿರ ಯಾರಾರು ತಂದಿದ್ದೀರ
ನಡೆದಿದ್ರೆ ಸಾಕ್ಷೇಳಿ ನನ್ ಜೊತೆಯಲ್ಲಿ ।

ಹಿಂದೆ ಮುಂದೆ ಕೊಟ್ಟು ತಂದಿದ್ದು ಗೊತ್ತಿಲ್ಲ
ನಮ್ಗೆ ತಿಳಿಯದು ಅಂದರು ಕುಲಸಭೆಯ । ೧೧೪೦

ಬ್ರಮ್ಮ ಕುಲದ ಬ್ರಾಮ್ಮಣ ಮಧುವರಸ ಸರಿಯಷ್ಟೆ
ಅವುನ್ಮಗುಂಗೆ ಹೆಣ್ಣ ಕೊಡುತಿನೀ ಅಂದುದ್ದು ನಿಜವಪ್ಪ ।

ಹೆಣ್ಣು ಕೊಡುತೀನಿ ಎಂದು ಇವರಿಬ್ರು ಬೆರ್‍ಕೊಂಡು
ನೆನ್ನೆ ಸ್ವೋಮಾರ ಮಾಡಿದ ಕಥೆ ನಿಮ್ಗೆ ತಿಳಿದಾದೆ ।

ಎಲ್ಲ ಕೇಳಿಲ್ಲವೇನ್ರೊ ಕೂಡಿದ ಕುಲದವುರೆ
ತಿಳುಕೊಳ್ಳಿ ಅಂದ ಕೊಂಡುಗರ ಮಂಚ ।

ಇವುರು ಮಾಡಿದ ನಡತೆ ನಿಮುಗೆಲ್ಲರ್‍ಗು ಒಪ್ಪಂದ್ವ
ಕೂಡಿರುವ ಕುಲದೊರೆ ಹೇಳ್ರಪ್ಪ" ।

ಮಂಚಪ್ಪಾಡಿದ ಮಾತ ಕುಲುದೋರೊ ಕೇಳ್ಕೊಂಡು
"ಇವ್ರು ಮಾಡಿರುವ ಕೆಲಸ ಸರಿಯಿಲ್ಲ । ೧೧೫೦

ನಿಮುಗೊಪ್ಪಚಾರವ ಹೇಳಿ ಕಲ್ಯಾಣ್ದ ಬಸವಣ್ಣ
ನೀವೊಪ್ಪಬೇಕು ಈ ಮಾತ ಮೊದಲಾಗಿ" ।

"ಕೊಡದೇ ಹೋದವುನ ಮನೆಗೆ ಇವ್ರು ಬಿಡದೆ ಹೋದ್ಮೆಲೆ
ನಾನು ಏನ್ಹೇಳ್ಳಿ ಬಿಜ್ಜಾಳ ನಿಮ್ ಜತೆಯಲ್ಲಿ" ।

"ಬಿಡದೆ ಯಾರೋಗಿದ್ರು ಅದನ್ಹೇಳ್ಳಿ ಬಸವಣ್ಣಾರೆ
ದುಡುವಾಗಿ ಹೇಳಿ ನಿಮ್ಮನದಲ್ಲಿ" ।

"ಮಧುವರಸು ಹೋಗಿ ಬಿಡದೆ ಕುಂತನಂತೆ
ಅದು ತಿಳಿದಿದ್ದಿ ಸೊಲ್ಪ ಕಿವಿಯಲ್ಲಿ ।

ನೀನೆ ಸರಣ ನನಗರ್ಥವಾಯಿತು ಎಂದು
ಚರ್ಚೆ ಮಾಡುದರಂತೆ ಮಧುವರಸು" । ೧೧೬೦

ಬಸವಣ್ಣಾಡುವ ಮಾತ ಕೇಳುದುರು ಮಧುವರಸ
“ಯಾರ್ಹೇಳಿದರು ಬಸವಣ್ಣ ನಿಮ್ ಜತೆಯಲ್ಲಿ? ।

ಹರಳಯ್ಯಂಗೂ ನನ್ಗೂ ಇಂತೆ ಸಮ್ಮಾಂಧವಿತ್ತ ?
ಇದು ಸುಳ್ಳು” ಅನ್ತಾನೆ ಮಧುವರಸು ।

“ಇಬ್ರು ಸೇರ್ಕೊಂಡು ನೀವೊಬ್ಬುರುಗು ತಿಳಿಸಾದೆ
ಈಗ ಮಾಡಿರುವ ಅಪರಾದ್ಕೆ ಗುರಿಯಾರು ।

ಮಾಡಿರುವ ಅಪರಾಧಕ್ಕೆ ಗುರಿ ಯಾರು?” ಅಂತ್ಹೇಳಿ
ದೊರೆ ಕೇಳೀದ ಬಿಜ್ಜಳ ರಾಜ ।

“ಇಂತಾ ನಡುವಳಕ್ಕ ನನ್ನ ಕಲ್ಯಾಣದಲ್ಲಿ ನಡೆದಾರೆ
ನಾಳೆ ಕೆಟ್ಟೆಸ್ರು ನನಗೆ ಬರುತಾದೆ ।

ಇಂದು ಹರಳಯ್ಯಂಗೆ ನಾವೇನ ಮಾಡ್ಬೇಕ”ಂತ
ದೇವರು ಬಸವಣ್ಣನ ಕೇಳಿದರಂತೆ ।

“ಏನಂತ ಹೇಳುದೊ ನಮ್ಗೆ ಬಾಯ್ ಬರದು” ಅಂತ
ಗುರು ಬಸವಣ್ಣ ಹೇಳಿದರು ।

“ಎಲ್ಲಾನು ನೀವ್ ಬಲ್ರಿ ನಿಮ್ ಸಂಗ ಬಿಡೋದಿಲ್ಲ
ನನಗೆಲ್ಲಾ ಗೊತ್ತು” ಅಂದ ಮಂಚಣ್ಣ ।

“ಇಂತೆ–ನ್ಯಾಯಗಳೆಲ್ಲ ನಿಮಗೆ ಗೊತ್ತಾದ್ಮೇಲಿ
ಅವ್ರುಗೇನ್ಮಾಡಬೇಕು ಮಂಚಣ್ಣ ।

ಕುಲುಸಭೆಯ ಮುಂದೆ ಎಲ್ಲುರ್ಗು ತಿಳುವಳಿಕೆಯಾ
ಏನು ಮಾಡಬೇಕು ಹೇಳಪ್ಪ?” ।

ಹಂಗೆಂದ ಮಾತನ್ನೆ ಕೇಳವ್ನೆ ಕೊಂಡುಗ
“ನಾ ಹೇಳುದ್ಕೆ ಎಲ್ಲಾರು ಒಪ್ಪಬೇಕು ।

ಸೂಲಾ ತಂದು ಮಂದದಲ್ಲಿ ನೆಡಿಸಿ
ಸೂಲಕ್ಕರುಳನ್ನು ಎತ್ತು ಬೇಕು ।

ಅವುನೆರಡು ಕಣ್ಗಳ ತಗುದು ಸೂಲುಕ್ಕೆ ಬಲುದ್ರೆ
ಒಪ್ತಾರೆ ನನ್ನ ಕುಲುಸಬುಯು” ।

“ಎಂತ ಮಾತ್ತಾಡ್ಡಪ್ಪ ಕೊಂಡುಗರ ಮಂಚಣ್ಣ
ಹಂಗಂತ ಬಸವಣ್ಣ ನುಡಿದಾರು ।

ಅಪರಾಧ ಇರಬಹುದು ಮರಣ ಮಾಡೋದುಂಟೆ
ಇದು ಧರ್ಮವೇನಪ್ಪ ಮಂಚಣ್ಣ । ೧೧೯೦

ತಕ್ಕಾದ ಅಪರಾಧ ಪಡಕೊಳ್ಳಿ ಕುಲುದೋರು
ಹರುಳಯ್ಯನ ಮರಣ ಮಾಡೊದೊ ಸರಿಯಲ್ಲ” ।

“ಬಿಡಿಬಿಡಿ ಬಸವಣ್ಣ ಒಪ್ಪುದೊ ನಿಮ್ಮ ಮಾತು
ಅವುನ್ಗೆ ಜೊತೆಯಾದ ಮಾತ ಹೇಳ್ತೀರಿ” ।

“ನಾಳೆ ಜಿನ ಇನ್ನ್ಯಾರು ಇಂತೆ ಕಥೆಯ ಮಾಡಿದರೆ
ನಾವು ಅಪ್ರಾದ ಪಡುಕೊಂಡು ಸುಮ್ನೆ ಇರಬಹುದು ।

ನಾ ಹೇಳುದಂತ ಸೂಲುಕ್ಕೆ ಅಪ್ರಾಧಿಗಳು ಬಲಿಯಾದ್ರೆ
ತಿಳ್ಕೋಳುತಾರೆ ನಾಳೆ ಕುಲವೆಲ್ಲ” ।

“ನಿನ್ನ ಅಧುಕಾರ್ದಲ್ಲಿ ಬಿಜ್ಜಳನ ದೊರ್ತಾನದಲ್ಲಿ
ಏನಾದ್ರು ನೀವು ಮಾಡಬಹುದು” । ೧೨೦೦

ಆ ಮಾತ ಕೇಳ್ಕೊಂಡು ಕೊಂಡುಗರ ಮಂಚಣ್ಣ
“ಹೌದು ನನ್ನದುಕಾರ್ದಲ್ಲಿಂಗೆ ನಡೀ ಬೇಕು” ।

ಸೂಲದ ಮರ ತಂದು ಮಂದದಲ್ಲಿ ನಿಲ್ಲಿಸಿದರು
ನಾವು ಸೂಲಕ್ಕೇತ್ತುತೀವಿ ಒಪ್ಪಂದವಯ್ಯ ।

ಕೊಂಡುಗರ ಮಂಚಣ್ಣನ ಮಾತ ಕೇಳಿಕೊಂಡು ಹರಳಯ್ಯ
ಕತ್ಯ ಕೈಯಲ್ಲಿ ಹಿಡಿದಾನು ।

ಅಂದವುಳ್ಳ ಚೌಕ ತನ್ನ ಕೈಯಲ್ಲಿ ಹಿಡಿಕೊಂಡು
“ಬಂದುದೆಲ್ಲ ಬರ್ಲಿ ಅಂದುಕೊಂಡು ।

ಬಂದುದೆಲ್ಲ ಬರ್ಲಿ ನನ್ನ ಗುರುವೀನ ದಯವಿರಲಿ”
ಅಂತ್ಹೇಳಿ ಕಣ್ಣುನ ಗುರಳ್ಯಾ ಕಿತ್ತುಕೊಂಡ । ೧೨೧೦

ಗುರುಳ್ಯೆ ಕಿತ್ತುದ್ದ ನೋಡುದುರು ಕುಲುಸಭೆಯು
ನಾವು ನೋಡುವುದಪ್ಪ ನಮ್ ಕಣ್ಣಾರ ।

ಹಿಡುದು ಹರುಳಯ್ಯನೋರು ಸೂಲಕ್ಕೆ ಬಂದಾರು
ಆಗೋದು ಇಂದು ಹರಳಯ್ಯ ।

ಹರಳಯ್ಯನ ಕತೆ ಮುಗಿದೀತು ಅನುತ್ಹೇಳಿ
ಕೊಂಡುಗರ ಮಂಚ ನುಡಿದಾನು ।

“ಒಪ್ಪುತಾ ಮಧುರಸೆ ನಮ್ ಕುಲದೋರ್ ಮಾಡಿದ
ಈಗ ಸಂತೋಷ ಬಂತಪ್ಪ ನಿನ್ ಮನದಲ್ಲಿ ।

ನ್ಯಾಯ ತೀರೋಗ್ಬುಡ್ತು ಕುಲಾ ಹೇಳಿ” ಎಂದು
ಎದ್ದಾರು ಆಗ ಕುಲುದೋರು ।

ಗುರುವಿನ ದಯದಿಂದ ಬಸವಣ್ಣನ ಕರುಣದಿಂದ
ಸೂಲದ ಮರವು ಚಿಗುರುತು ।

ಸೂಲದ ಮರವು ಬಿಲ್ವಪ್ತ್ರೆ ಮರವಾಯ್ತು
ಚಿಗುತ ಬಿಲ್ವಪ್ತ್ರೆ ಮರ ಜೋತೀತು ।

ಆ ಬಿಲ್ವಪ್ತ್ರೆ ಮರದ ಮೇಲೆ ಕುಂತುಕೊಂಡು ಹರಳಯ್ಯ
“ನೋಡಪ್ಪ ನನ್ನ ಕುಲ ಸಭೇಯ ।

ಹರಳಯ್ಯ ಸತ್ತ ಎಂದು ಸಂದೇಗ ಪಡಬೇಡ
ಗುರುವೀನ ದಯಾದಿಂದ ಉಳುದಿವ್ನಿ” ।

ಕುಲವೆಲ್ಲ ನೋಡಿದರೆ ಕೈತಪ್ಪೆ ಹೋಡಿದರು
ಇವ ಸರಣ ಕಾಣಪ್ಪ ಹರಳಯ್ಯ ।

“ನಾ ಬೇಡಿ ಅಂತ ನಿಮುಗೆ ನಾನ್ ಮೊದಲೆ ಹೇಳ್ಳಿಲ್ವೆ
ಈಗ ನೋಡಿದಿರ ಸರಣಾನ ನಿಜಭಕ್ತರು ।

ನೋಡಿದರ ಸರಣಾನ ನಿಜ ಭಕ್ತ್ಯ” ಅನುತ್ಹೇಳಿ
ನುಡಿದಾರು ಗುರು ನಮ್ಮ ಬಸವಣ್ಣ ।

ಸೂಲದ ಮರದ್ಮೇಲೆ ಕುಂತುಕೊಂಡು ಹರಳಯ್ಯ
ಏನಂತ ಸರಣ ನುಡಿದಾನು ।

“ಲಿಂಗ ಕಟ್ಟಿದ ಜಂಗಮರಿಗೆ ಆ ಲಿಂಗದ ಪೂಜೆಗೆ
ನಾ ಬಿಲ್ವಪ್ತ್ರೆಯಾಗಿ ಮೊದಲು ಬರುತೀನಿ ।

ಈ ಬಿಲ್ವತ್ರೆ ಧರಿಸಿ ನೀವು ಪೂಜೆ ಮಾಡಿ" ಎಂದು
ಆ ಮರದ್ಮೇಲಿ ಹರಳಯ್ಯ ನುಡಿದಾನು ।

ಬಿಲ್ವತ್ರೆ ಎನ್ನೋದು ಈ ಜಗದಲ್ಲಿ ಇರಲಿಲ್ಲ
ಅವ್ನ ಸೂಲದ ಮರವೆ ಬಿಲ್ವತ್ರೆ ।

ಮರವ ಬಿಟ್ಟು ಕೆಳಗೆ ಇಳಿದಾಗ
ಮಧುವರಸು ಕೈಯಾ ಹಿಡಿದಾನು ।

"ಅಲ್ಲಸಲ್ಲದ ಮಾತ ನಾ ಕುಲದಲ್ಲಿ ಹೇಳಿಬುಟ್ಟೆ
ಮಾಪ್ ಮಾಡು ನನ್ನ ಹರಳಯ್ಯ ।

ಕೊಂಡುಗರ ಮಂಚ ಬಂದು ಕೈಯೆತ್ತಿ ಕರವ ಮುಗಿದು
ಸೂಲಕ್ಕೆ ಎತ್ತಕೆ ನಾ ಹೇಳುದೆನು ।

ಸೂಲಕ್ಕೆ ಎತ್ತಿ ಎಂದು ನಾ ಹೇಳುವಂತ ಪಾಪಿ
ಕ್ರೋಧ ಇಡಬ್ಯಾಡಿ ಹರುಳಯ್ಯ ।

ನಿಮ್ಮಿಂದಾಡಿ ನನ್ನ ಸತ್ಯ ಬೆಳಗೀತಪ್ಪ
ಕ್ರೋಧುವಿಲ್ಲ ನನ್ನ ಮನದಲ್ಲಿ ।

ಕಕ್ಕೆಸೊಪ್ಪುನ ಮಠದ ಒಳಗೆ ಕಾಲ ಮಾಡ್ತಾನೆ ಎಂದು
ಇದುವರುಗು ನಾವು ತಿಳಿದಿದ್ದೊ ।

ಕಕ್ಕೆ ಗುರುಳಿನ ಒಳುಗೆ ನೀ ಕಾಲ ಮಾಡುದುರೂವೆ
ನಿನ್ನ ಸತ್ಯ ತೊಲುಗನಿಲ್ಲ ಹರಳಯ್ಯ ।

ಇಂದೆಲ್ಲಾ ಒಂದೂಗೆ ನಡೀಯಿರಿ ಹರಳಯ್ನ ಜೊತೆಯಲ್ಲಿ
ಅವ್ರ ಮನೆತನ್ಕ ಹೋಗಿ ಕಳುಗಿ ಬರಬೇಕು" ।

ಹರಳಯ್ನ ಕರಕೊಂಡು ಸಭೆಯಲ್ಲಿ ಹೋರಟಾರು
ಬಂದುರು ಹರಳಯ್ನ ಗುರುಮಠಕೆ ।

ಕುಲುಸಭೆಯು ಬರುವಾಗ ಕಲ್ಯಾಣಮ್ಮಯ್ಯ
ಹದ್ನರಾಳುದ್ದ ಬಾವೀಲಿ ನೀರ ಸೇತ್ತಾಳೆ ।

"ಬತ್ತರೆ ಕುಲಸಭೆಯು ಎತ್ತಿ ಕೈಯ ಮುಗಿ ಕಲ್ಯಾಣಿ"
ಎಂದ ಮಾನ್ಯ ಹರುಳಯ್ಯ ನುಡಿದಾನು ।

ಯಾಜಮಾನ್ರ ಮಾತ ಕೇಳಿ ಕಲ್ಯಾಣಮ್ಮ
ಕೈಬುಟ್ಟು ಕುಲಕೆ ಸರಣಂದ ।

ಆ ಬಾವಿಯೊಳಗೆ ಬಿಂದುಗೆ ಅರ್ಧ್ಯ ಬಂದಿತ್ತು
ಅದು ನಿಂತ ಜಾಗದಲ್ಲಿ ನಿಂತಿರುವುದು ।

ಎಷ್ಟು ದೂರ ಎಳದಿದ್ರೂ ಅಷ್ಟು ದೂರ್ದಲ್ಲಿ ನಿಂತಾದೆ
ಇವುಳೆಂತಾ ಘನಾ ಗರತಿಯೊ ತಿಳಿಯಾದು ।

ಭಕ್ತರ ಬರುತ್ತಾರೆ ನೀ ರಾಜುಣವ ಕುಟ್ಟಿದ್ಯಾ
ರಾಜುಣ ಕುಟ್ಟೋದ ಕುಲುಕೆ ತೋರಮ್ಮ ।

ರಾಜುಣ ಎಂದರೆ ನವಣಿ ಸರಣರೀಗೆ
ಆ ನವಣೆ ತೆಗುದು ಒರಳೀಗೆ ।

ಆ ನವಣೆ ತಗುದು ಒರಳಿಗೆ ಸುರುಕೊಂಡು
ಒನಕೆ ಎತ್ತಿದಾರು ಕಲ್ಯಾಣಮ್ಮ ।

"ಕಲ್ಯಾಣಿ ಗುರು ಬಸವಣ್ಣ ಬಂದಾರಲ್ಲ
ಎತ್ತಿ ಕೈ ಮುಗಿಬಾರದ?" ಅಂದರು ।

ಎತ್ತಿರುವ ಒನಕೆ ಬುಟ್ಟು ಗುರುಬಸವಣೋರ್ಗೆ
ಸರಣ ಸರಣಾರ್ತಿ ಅನ್ನುತಾಳೆ ।

ಎಷ್ಟ್ರು ದೂರ ಎತ್ತಿದ್ರು ಅಷ್ಟು ದೂರ್ದಲ್ಗೆ ಕೈ ಬಿಟ್ರು
ಅರ್ಧ ಅಂತರದಲ್ಲಿ ಒನಕೆ ನೀಂತೀದೆ ।

"ಇಂತ ಭಕ್ತಿವಂತ್ಯ ನಾವಿನ್ನು ಕಾಣ್ಣಿಲ್ಲಾ
ಸರಣೆ ಕಾಣಪ್ಪ ಕಲ್ಯಾಣಮ್ಮ" ।

"ಕಲ್ಯಾಣಮ್ಮ ಸರಣತ್ವ ನಿಮಗ್ಯಾರಿಗೂ ಗೊತ್ತಿಲ್ಲ
ನಾ ಬಲ್ಲಿ" ಅಂದರು ಬಸವಣ್ಣ ।

ನಮ್ಮ ಮಠವ ಕಟ್ಟುದ್ಮೇಕೆ ಕಲ್ಯಾಣಮ್ಮನ ಹೆಸರು
ಹೆಂಗೆ ಬಂತೆಂದು ಹೇಳುತೀನೀ ।

ಆ ತಾಯಮ್ಮನ ಹೆಸರೇಳಿ ಒಂದುಳಿ ಏಟೊಡೆದಾರೆ
ಆಗ ಅಲ್ಲಾಗೋಂತ ಚಪ್ಪಿ ಹಾರುತಿತ್ತು ।

ಒಂದೊಂದೂ ಮನೆ ತುಂಬ ಒಂದೊಂದು ಚಪ್ಡಿ ಎಬ್ಬಿತು
ಅವ್ರ-ಗಂಡನ ಸೇವೆ ಘನಗರ್ತಿ ।

ಗಂಡನ ಸೇವೆ ಘನಗರ್ತಿ ಆದ್ದರಿಂದ
ಕಟ್ಟೇದಿ ನಾನು ಈ ಕಲ್ಯಾಣವ ।

ಕಟ್ಟೇದಿ ನಾನು ಈ ಕಲ್ಯಾಣ ಮಠವ
ಕರುಕೊಂಡೆ ಅವಳ ಹೆಸಾರನ್ನೆ ।

ಕಲ್ಯಾಣ ಪಟ್ಟಣದ ಶಿವಶರಣೆ ಕಲ್ಯಾಣಮ್ಮ
ಎಂದು ಅವಳೆಸರ ಕರುಕೊಂಡಿ" ।

"ಒಪ್ಪುದೋ ಬಸವಣ್ಣ ಅವ್ರ ಗಂಡ ಹೆಂಡ್ರ ಸತ್ಯವ
ಇನ್ನು ಮಾತುಂಟೆ ಸರಣರ ಜೊತೆಯಲ್ಲಿ । ೧೩೦೦

ಇಂತ ಸರಣಾರಿಲ್ದೆ ಈ ಲೋಕ ಬೆಳಗಾಗೋದಿಲ್ಲ
ಇಂತೇವ್ರಿಂದಲೆ ಅರುವೆಂದು ।

ಇಂತೇವ್ರಿಂದ ತಾನ ಹೆಣ್ಣಗಂಡೆಲ್ಲ
ಅರುವ ಮಾಡ್ಕೊಬೇಕು" ಅನ್ನುತಾರೆ ।

"ಅರುವ ಮಾಡ್ಕೊಂಡು ನಡೆದಾರೆ ಜಂಗುಮರ
ಸತ್ಯವ ತಿಳಿಯಬವುದು" ಅನ್ನುತಾರೆ ।

ಮಾರಾಜ ಬಿಜ್ಜಾಳ ತನ್ನರಮನೆಗೆ ಹೊರುಟೋದ
ಮಂಕಾಗಿ ಹೋಯ್ತಾನೆ ಕೊಂಡುಗ ।

ಸಿರಾ ಬಗ್ಗಿ ಹೊಯ್ತಾನೆ ಮಧುವರಸು ತನ್ ಮನೆಗೆ
ಈ ಸತ್ಯ ನಮ್ಮ ಒಳಗಿಲ್ಲ । ೧೩೧೦

ಬಂದರು ಬಸವಣ್ಣ ಕಲ್ಯಾಣ್ದ ಗುರುಮಠಕೆ
ಅವ್ರು ಹೊಕ್ಕಿದರು ಕಲ್ಯಾಣ್ದ ಗುರುಮಠವ ।

ಮಾಗುರು ಬಂದರು ಎಂದು ಮಾತನ್ಹಂಸಗಳು
ನಮ್ಮ ಗುರುವಿಗೆ ಮಂಗಳಾರ್ತಿಯ ಬೆಳಗಿದವು ।

ಮಂಗಳಾರ್ತಿ ತಕ್ಕೊಂಡು ನಮ್ ಸಂಗನ ಬಸವಣ್ಣ
ತಮ್ಮ ಪಟ್ಟೆ ಸಿಂವಾಸನಕೆ ಹೊರಟಾರು ।

ಆ ಗದ್ದಿಗೆ ಮೇಲೆ ಬಂದು ನಮ್ ಗುರುಗಳು ಕುಳಿತಾರು
ಹರಳಯ್ನ ಮಾತ ನೆನೆಕೊಂಡು

ಸತ್ಯವಂತಹ ನಿಜ ಮಾತ್ರ ಎಂದೆಂದು ತೊಲಗೋದಿಲ್ಲ
ಸತ್ಯ ಇರಬೇಕು ಈ ಜಗದಲ್ಲಿ । ೧೩೨೦

ಕರ್ಮ ಕತ್ತಲೆ ಎಂದು ಸತ್ಯವೆ ಬೆಳಕೊಂಡು
ಸತ್ವಂತರು ಸಾರಿದ್ದು ಹುಸೀಲಿಲ್ಲ ।

ಸತ್ವಂತರು ಸಾರಿದ್ದು ಇದು ಸುಳ್ಳಲ್ಲ ಎನುತ್ಹೇಳಿ
ನಮ್ಮ ಸತ್ಯವುಳ್ಳ ಬಸವಣ್ಣ ನೆನಿದಾರು ।

ಸತ್ವಂತ ಹರುಳಯ್ಯ ಮಾಡಿದ ಈ ಕತೆಯ
ಆ ಸತ್ವಂತರೀಗೆ ಸರಣಪ್ಪ ।

ಕಲ್ಯಾಣಕೆ ಸರಣು ಕೈಲಾಸಕ್ಕೆ ಸರಣು
ಆ ಕಲ್ಯಾಣಮ್ಮನಿಗೆ ಒಂದ್ಸರಣಪ್ಪ ।

ಇಂತೆ ಆದಿ ಹರುಳಯ್ಯನ ಮಾತ ಕೇಳಿದ ಮಾನ್ಯರಿಗೆ
ಆ ಪುಣ್ಯಾತ್ಮಾರಿಗೊಂದು ಸರಣಪ್ಪ । ೧೩೩೦

ಇಲ್ಲಿಗೆ ಹರ ಹರ ಇಲ್ಲೀಗೆ ಶಿವ ಶಿವ
ಇಲ್ಲಿಗೆ ಹರುಳಯ್ಯನ ಕತೆ ಸಂಪೂರ್ಣ । ೧೩೩೨

ಅಪರಿಮಿತವಾದ ಕನ್ನಡದ ಜ್ಞಾನಸಂಪತ್ತು ಶಿಷ್ಟ ಮತ್ತು ಜಾನಪದ ಎರಡೂ ನೆಲೆಗಳಲ್ಲಿಯೂ ಅನನ್ಯತೆ ಹಾಗೂ ಘನತೆಯನ್ನು ಹೊಂದಿದೆ. ಯಾವುದೇ ಸಾಹಿತ್ಯದ ಮೂಲ ಇರುವುದು ಜಾನಪದದಲ್ಲಿಯೇ. ಕನ್ನಡ ಸಾಹಿತ್ಯದಲ್ಲಿ ಜನಪದಸಾಹಿತ್ಯವು ಬಾಯಿಂದ ಬಾಯಿಗೆ ಹರಿದು ಬರುತ್ತಿತ್ತೇ ಹೊರತು ಗ್ರಾಂಥಿಕವಾಗಿರಲಿಲ್ಲ. ಆದಿಮಾನವನ ಮೊದಲನೆಯ ಉಸುರಿನಿಂದ ಹೊರಹೊಮ್ಮಿದ ಈ ಹಾಡುಗಳು ಆಧುನಿಕ ಮಾನವನರೆಗೂ ಆತನೊಡನೆ ಬೆಳೆದುಕೊಂಡು ಬಂದಿವೆ. ನಿತ್ಯಪರಿವರ್ತನಶೀಲವಾದ ಸಮಾಜದ ಪ್ರಗತಿಪಥದಲ್ಲಿ ಅವೂ ಮುನ್ನಡೆದಿವೆ. ಅವನ ಮುನ್ನಡೆಗೂ ಅವು ಕಾರಣವಾಗಿದೆ. ಅಂದಂದಿನ ಅವನ ಸಮಸ್ಯೆಗಳಿಗೆ, ಸಾಹಸಗಳಿಗೆ, ಸಾಧನೆಗಳಿಗೆ, ಆಶೋತ್ತರಗಳಿಗೆ ಅನುಗುಣವಾಗಿ ಅವು ಮೂಡಿಬಂದಿವೆ. ಜ್ಯೋತಿ ತನ್ನ ಬೆಳಕಿನಿಂದಲೇ ತಾನು ಗೋಚರವಾಗುವಂತೆ ಇವು ಜನಜೀವನದಿಂದಲೇ ಮೂಡಿದ್ದರೂ ಅದರ ಅಂತರಂಗ ದರ್ಶನಕ್ಕೆ ಕಾರಣವಾಗಿವೆ.

ಸಾಮಾನ್ಯಜನರಿಂದ ರಚಿತವಾದ ಈ ಸಾಹಿತ್ಯ, ಪ್ರೌಢಪಂಡಿತರ ಶಾಸ್ತ್ರೀಯವಾದ ವ್ಯಾಸಂಗದ ವಿಷಯವಾಗಬಲ್ಲುದೆಂಬ ಕಲ್ಪನೆಯೇ ಇತ್ತೀಚಿನದು. ಶಿಷ್ಟಕವಿಗಳಿಂದ ಬಹುತೇಕ ನಿರ್ಲಕ್ಷ್ಯಕ್ಕೆ ಒಳಗಾದ ಜನಪದಸಾಹಿತ್ಯವು ಕನ್ನಡದ ಶಿವಶರಣರ ಚಳುವಳಿಯಿಂದ ಸ್ವಲ್ಪಮಟ್ಟಿಗೆ ಶಿಷ್ಟರ ಸನಿಹಕ್ಕೂ ಬಂದಿತು. ಅವರು ಬಳಸುತ್ತಿದ್ದ ಏಳೆ, ತ್ರಿಪದಿ, ಸಾಂಗತ್ಯ, ಕಲ್ಪದಿ, ಅಕ್ಕರ, ಅಕ್ಕರಿಸಿ ಮೊದಲಾದ ಪ್ರಕಾರಗಳನ್ನು ವಚನಚಳುವಳಿಯ ಪರಿಣಾಮವಾಗಿ ಶಿಷ್ಟರೂ ತಮ್ಮ ಕಾವ್ಯಾಭಿವ್ಯಕ್ತಿಗೆ ಬಳಸುವಂತಾಯಿತು. ಆದರೂ

ಬಹುತೇಕ ಅದು ಜನಸಾಮಾನ್ಯರಿಂದ ಹುಟ್ಟಿ ಅವರ ಜೀವನಕ್ಕಷ್ಟೇ ಸೀಮಿತವಾಯಿತು. ಸುಸಂಸ್ಕೃತ ಸಾಹಿತ್ಯದಿಂದ ಅಂಗೀಕಾರದ ಮುದ್ರೆಯನ್ನು ಪಡೆಯಲಿಲ್ಲ; ಗ್ರಂಥಸ್ಥವಾಗಲಿಲ್ಲ. ಆದುದರಿಂದ ಅದರ ಬದಲಾವಣೆಯ ವಿವಿಧ ಘಟ್ಟಗಳನ್ನು ಗುರುತಿಸುವುದು ಸಾಧ್ಯವಿಲ್ಲ. ತೀರಾ ಇತ್ತೀಚೆಗೆ ೨೦ನೆಯ ಶತಮಾನದಲ್ಲಿ ವಿರಳವಾಗಿ ಅದು ಗ್ರಂಥಸ್ಥವಾಗತೊಡಗಿರುವುದು ಸ್ವಾಗತಾರ್ಹವಾಗಿದೆ.

ಸಮಾಜದ ಸಮಷ್ಟಿ ಮನಸ್ಸಿನ ಅಭಿವ್ಯಕ್ತಿಯ ಪ್ರಯತ್ನದ ಫಲವಾದ ಜನಪದಸಾಹಿತ್ಯ ಇಡೀ ಜನಾಂಗದ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಪರಿಣಾಮವಾಗಿ ಪ್ರಕೃತಿಯ ವೈವಿಧ್ಯದ ಹಾಗೂ ಹುದುಕಿನ ವೈಚಿತ್ರ್ಯದ ಕತೆಗಳು, ಕಾವ್ಯಗಳು, ಮಹಾಕಾವ್ಯಗಳು ಹೀಗೆ ಅನೇಕ ಪ್ರಕಾರಗಳಲ್ಲಿ ಹುಟ್ಟಿಕೊಂಡು. ಅವುಗಳ ಸಂಗ್ರಹಕಾರ್ಯ ೨೦ನೇ ಶತಮಾನದಿಂದೀಚೆಗೆ ಆರಂಭವಾಯಿತು. ಅದು ಇನ್ನೂ ನಡೆಯಬೇಕಾಗಿದೆ. ಸಮಾನತೆಯ ಸಂಸ್ಕೃತಿಯನ್ನು ಸಂಸ್ಥಾಪಿಸಲು ಅಹಿರ್ನಿಶಿ ದುಡಿದ ಬಸವಣ್ಣ ಅಲ್ಲಮಪ್ರಭು ಮತ್ತು ಆತನ ಸಮಕಾಲೀನರ ಜೀವನದ ಕಥಾನಕವನ್ನು ಆಶಯಗಳನ್ನು ಜನಪದ ಮಹಾಕಾವ್ಯಗಳಾದ ಮಲೆಯ ಮಹದೇಶ್ವರಸ್ವಾಮಿ ಮಹಾಕಾವ್ಯ ಹಾಗೂ ಧರೆಗೆ ದೊಡ್ಡವರು ಎಂಬ ಮಂಟೇಸ್ವಾಮಿ ಮಹಾಕಾವ್ಯಗಳು ಪ್ರತಿಬಿಂಬಿಸುತ್ತಿವೆ. ಸಮಾನತೆಯ ಸಂಸ್ಕೃತಿಯ ನಿರ್ಮಾಣಕ್ಕಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟಿದ್ದ ೧೨ನೆಯ ಶತಮಾನದ ಶರಣರ ಕಥಾನಕಗಳನ್ನು 'ಜನಪದ ಶರಣ ಕಾವ್ಯಗಳು' ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿದವರು ಜಾನಪದ ತಜ್ಞರಾದ ಡಾ. ಪಿ.ಕೆ. ರಾಜಶೇಖರ್ ಅವರು.

ಕರ್ನಾಟಕದ ಶರಣಧರ್ಮ ಜಗತ್ತಿನಲ್ಲಿಯೇ ಅಭೂತಪೂರ್ವವಾದುದು. ಅದು ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ, ಸಾಹಿತ್ಯಕ ಕ್ಷೇತ್ರಗಳನ್ನೆಲ್ಲಾ ಆವರಿಸಿಕೊಂಡು ಎಲ್ಲಾ ಜಾತಿ ಹಾಗೂ ವರ್ಗದವರನ್ನೆಲ್ಲಾ ಸಮಾನತೆ, ಮಾನವೀಯತೆಯ ನೆಲೆಯಲ್ಲಿ ಒಂದೆಡೆ ಬಂಧಿಸಿದ ಚುಂಬಕಶಕ್ತಿ. ಅದರ ನೇತಾರರಾದ ಬಹುಮುಖೀ ವ್ಯಕ್ತಿತ್ವದ ಬಸವಣ್ಣನವರ ಗುಣಾತ್ಮಕತತ್ವ ಚಿಂತನೆಗಳು ಇಂದಿಗೂ ಎಂದೆಂದಿಗೂ ಪ್ರಸ್ತುತ. ಶರಣ ಧರ್ಮ ಈ ನೆಲದ ವ್ಯಕ್ತಿಯಿಂದ ಈ ನೆಲದ ಭಾಷೆಯಲ್ಲಿ ಈ ನೆಲದ ಜನರಿಗಾಗಿ ರೂಪುಗೊಂಡಂತೆ ಕಂಡರೂ ಅದರ ತತ್ವಗಳು ಉದಾರ ಮಾತೃಹೃದಯದ ಮಾನವತಾಧರ್ಮ. ಜಾತಿಯ ಹೆಸರಿನಲ್ಲಿ ಹರಿದು ಹಂಚಿಹೋಗಿದ್ದ ಜನಸಮುದಾಯವನ್ನು ಮಾನವೀಯ ತತ್ವದ ನೆಲೆಯಲ್ಲಿ ಒಗ್ಗೂಡಿಸಿದ ಕ್ರಾಂತಿಕಾರೀ ಯುಗಶಕ್ತಿ ಶರಣಧರ್ಮದ್ದು. ಕಾಯಕವೇ ಕೈಲಾಸವೆಂದು ದುಡಿಮೆಯಲ್ಲಿ ದೈವದ ಆರಾಧನೆಯನ್ನು ಕಾಣುವ ಘನತತ್ವದ ಪ್ರಚಾರಕರಾಗಿ ಪ್ರಸಾರಕರಾಗಿ, ಗುಣಾಧಾರಿತ ಮೌಲ್ಯಯುತ ಸಮಸಮಾಜದ ರೂವಾರಿಗಳಾಗಿ, ಪ್ರಾಮಾಣಿಕ ಸಂಘಟನಾ ಚತುರರಾಗಿ, ಲಿಂಗಾಧಾರಿತ ಭೇದವೆಣಿಸದೆ ಸರ್ವದರಲ್ಲಿಯೂ ಸಮಾನ ಅವಕಾಶಗಳನ್ನಿತ್ತ ಪ್ರಗತಿಪರ ಚಿಂತಕರಾಗಿ, ಸರ್ವದರಲ್ಲಿಯೂ ಮೌಢ್ಯವನ್ನೆಣಿಸದ ಪ್ರಖರ ವಿಚಾರವಾದಿಯಾಗಿ ಅಂತಹ ಶರಣ ಧರ್ಮದ ಪ್ರತಿಪಾದಕನಾಗಿ ಬಸವಣ್ಣ ಮಾನವಜನಾಂಗದ ನೇತಾರನಾಗಿದ್ದಾನೆ. ಧರ್ಮ, ನೀತಿ, ಮೌಲ್ಯ, ಅರಿವು, ಆಚಾರ, ವಿಚಾರ, ಅನುಭಾವ ಎಲ್ಲರಿಗೂ ಎಟುಕುವಂತಹ ಮುಕ್ತ ವಾತಾವರಣದಲ್ಲಿ ಸಮಾಜದ ಬಹುಸಂಖ್ಯಾತರು ಶರಣರ ಆಶ್ರಯದಲ್ಲಿ ಜೀವನ ಕಟ್ಟಿಕೊಂಡರು. ಅಂತಹ ಕಾಲಘಟ್ಟದಲ್ಲಿ ನಮ್ಮ ಜನಪದರು ಪಡೆದುಕೊಂಡು ಉಳಿಸಿಕೊಂಡು ಬಂದವುಗಳೇ ಜನಪದರ ಈ ಶರಣಕಾವ್ಯಗಳು.

ಸರ್ವರ ಸ್ವತ್ತಾಗಿದ್ದ ಶರಣಧರ್ಮ ಕಾಲಾನುಕ್ರಮದಲ್ಲಿ ಉಳ್ಳವರ ಸ್ವತ್ತಾದಾಗ ಅದನ್ನು ಪ್ರತಿಭಟಿಸಿ ನಿಂತವರ ಗುಂಪುಗಳಿಗೆ ಮಂಟೇಸ್ವಾಮಿ, ಮಾದೇಶ್ವರರು ನಾಯಕರುಗಳಾದಂತೆ ತೋರುತ್ತದೆ. ಅವರುಗಳು ಉತ್ತರದಿಂದ ದಕ್ಷಿಣಕ್ಕೆ ಬಂದು ನೆಲೆಸುವವರೆಗೂ ಮೆರೆದ ಪವಾಡಸದೃಶ ಘಟನಾವಳಿಗಳನ್ನೆಲ್ಲ ಕತೆ ಮಾಡಿ ಹಾಡಿ ಅನುಸರಿಸಿದವರು ನೀಲಗಾರರಾದರು; ಮಾದೇಶ್ವರನನ್ನು ಅನುಸರಿಸಿದವರು ಹಾಡಿದವರು ದೇವರಗುಡ್ಡರಾರರು. ಅಲ್ಲದೆ ಹರಳಯ್ಯ, ಮಾಚಯ್ಯ, ಚನ್ನಬಸವಣ್ಣ, ಮೈದಾಳ ರಾಮಣ್ಣ, ಕುಂಬಾರಗುಂಡಯ್ಯ, ಗುಂಡುಬ್ರಹ್ಮಯ್ಯ, ಸಿದ್ಧರಾಮಯ್ಯ, ಕುರುಬರ ಬೀರಯ್ಯ, ಮುಂತಾದ ಶರಣರನ್ನೆಲ್ಲಾ ಕುರಿತು ಕಾವ್ಯವನ್ನು ಕಟ್ಟಿ ಹಾಡಿದರು. ಶರಣರ ಕ್ರಾಂತಿ ನಡೆದದ್ದು ಉತ್ತರ

ಕರ್ನಾಟಕದಲ್ಲಾದರೂ ಅವರ ಆಶಯಗಳನ್ನು ಹೊತ್ತುಕೊಂಡು ದಕ್ಷಿಣಕ್ಕೆ ಬಂದ ಶರಣರೇ ನಮ್ಮ ಧಾರ್ಮಿಕ ವೃತ್ತಿಗಾಯಕರಲ್ಲಿ ಅಗ್ರಗಣ್ಯರಾದ ದೇವರ ಗುಡ್ಡರು ಮತ್ತು ನೀಲಗಾರರು. ಇವರು ಹಾಡುವ ಕಾವ್ಯಗಳಲ್ಲದೆ ಹೆಂಗಸರ ಹಾಡ್ಗತೆಗಳಲ್ಲೂ ಶರಣರನ್ನು ಕುರಿತ ಕಥಾಕುಸುಮಗಳು ಅರಳಿ ಘಮಘಮಿಸುತ್ತಿವೆ. ಅದರಲ್ಲಿ 'ಘನಶರಣಹರಳಯ್ಯ' ಕಾವ್ಯವೂ ಒಂದು.

**ಹರಳಯ್ಯನೆಂಬೋನು ನರನಲ್ಲ ಕಾಣಿರೊ**

**ಅವನು-ಶರಣರಿಗೆ ಶರಣ ಘನಶರಣ**

ಎಂದು ಜನಪದಕವಿಯೊಬ್ಬ ಶರಣ ಹರಳಯ್ಯನನ್ನು ಕೊಂಡಾಡಿದ್ದಾರೆ. ಈ ರೀತಿಯಾಗಿ ಜನಪದರ ಹೃದಯವನ್ನು ಸೂರೆಗೊಂಡಿರುವ ಹರಳಯ್ಯನ ಬಗೆಗೆ ಅಕ್ಷರಸ್ಥರಲ್ಲಿ ಒಮ್ಮತವಿಲ್ಲ. ಶಿಷ್ಟರ ೧೧ ಕಾವ್ಯಗಳಲ್ಲಿ ಈತನ ವಿಚಾರ ಬಂದಿದೆ. ಅವರಲ್ಲಿ ಹರಳಯ್ಯನೆಂಬ ಶರಣನೊಬ್ಬನಿದ್ದನೆ? ಇದ್ದರೆ ಆತನ ನಿಜನಾಮಧೇಯವೇನು? ಅವನು ವಚನಕಾರನಾಗಿದ್ದನೆ? ಅವನು ಹಾಗೂ ಅವನ ಪತ್ನಿ ಕಲ್ಯಾಣಮ್ಮನವರು ತಮ್ಮ ತೊಡೆಯ ಚರ್ಮದಿಂದ ಬಸವಣ್ಣನವರಿಗಾಗಿ ಪಾದರಕ್ಷೆಗಳನ್ನು ಮಾಡಿದ್ದು ನಿಜವೆ? ಗುಲ್ಬರ್ಗಾಜಿಲ್ಲೆಯ ಸೇಡಂ ತಾಲ್ಲೂಕಿನ ಬಿಜನಹಳ್ಳಿಯಲ್ಲಿ ರಕ್ಷಿಸಿಕೊಂಡು ಬಂದಿರುವ ಪಾದುಕೆಗಳು ನಿಜವಾಗಿಯೂ ಅವರವೇ? ಎಂಬೆಲ್ಲಾ ಪ್ರಶ್ನೆಗಳಿವೆ. ಆದರೆ ಜನಪದರಲ್ಲಿ ಕಲ್ಯಾಣದ ಕ್ರಾಂತಿಯ ನಂತರ ಚದುರಿದ ಶರಣರಲ್ಲಿ ಹರಳಯ್ಯನ ಆದರ್ಶವನ್ನು ಹೊತ್ತು ನಡೆದವರು ತಾವು ಎಂಬ ಭಾವನೆಯಿದ್ದು ತಾವು ನೆಲೆಗೊಂಡ ಸ್ಥಳಗಳಲ್ಲೆಲ್ಲ ಹರಳಯ್ಯನ ತೋರು ಗದ್ದುಗೆಗಳನ್ನು ಸ್ಥಾಪಿಸಿ, ಮಠಗಳನ್ನು ಕಟ್ಟಿದ್ದಾರೆ. ವಾಸ್ತವ ಸಂಗತಿಯೆಂದರೆ ಶರಣ ಹರಳಯ್ಯನವರ ಹೆಸರಿನಲ್ಲಿರುವಷ್ಟು ಗದ್ದಿಗೆಗಳಾಗಲಿ ಮಠಗಳಾಗಲಿ ಬೇರೆ ಯಾವ ಶರಣನ ಹೆಸರಿನಲ್ಲೂ ಇಲ್ಲ ಎಂದಾಗ ಹರಳಯ್ಯನ ಮಹೋನ್ನತ ವ್ಯಕ್ತಿತ್ವ ಅರಿವಿಗೆ ಬರುತ್ತದೆ. ಅವರು ಹುಟ್ಟಿಬೆಳೆದ, ಓಡಾಡಿದ, ಪವಾಡವೆಸಗಿದ ಸ್ಥಳಗಳನ್ನೆಲ್ಲಾ ಜನಪದರಿಂದ ಗುರುತಿಸಲಾಗಿದೆ.

ಪ್ರಸ್ತುತ ಜನಪದರು ಹಾಡಿರುವ ಘನಶರಣ ಹರಳಯ್ಯನ ಕಾವ್ಯ ಹಲವಾರು ವಿಭಿನ್ನ ವಿಚಾರಗಳ ನಿರೂಪಣೆಯಿಂದ ಗಮನಸೆಳೆಯುವಂಥದ್ದಾಗಿದೆ. ಹರಳಯ್ಯ ಬಸವಣ್ಣನವರಿಂದ ಎರಡು ಶರಣಾರ್ಥಿಗಳನ್ನು ಸ್ವೀಕರಿಸಿದ್ದಕ್ಕೆ ಪ್ರತಿಯಾಗಿ ತನ್ನ ಬಲತೊಡೆ ಮತ್ತು ತನ್ನ ಪತ್ನಿ ಕಲ್ಯಾಣಮ್ಮನ ಎಡತೊಡೆ ಚರ್ಮದಿಂದ ಪಾದರಕ್ಷೆಯನ್ನು ತಯಾರಿಸಿ ಅದನ್ನು ಬಸವಣ್ಣನವರ ಪಾದಗಳಿಗೆ ಮೆಟ್ಟಿಸಿ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಆಶಯ, ಪ್ರೀತಿ ಮತ್ತು ಭಕ್ತಿಗಳೆಂಬ ಮೌಲ್ಯಗಳ ಪರಾಕಾಷ್ಠೆ ಎನಿಸುತ್ತದೆ. ಅದನ್ನು ಚಿನ್ನ ಮತ್ತು ರತ್ನಗಳಿಂದ ಅಲಂಕರಿಸಿದ ಎಂದಿರುವುದು ಕವಿಯ ಭಾವಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಅದನ್ನು ಅವರು ಹೊತ್ತು ತಂದು ಬಸವಣ್ಣನವರಿಗೆ ಅರ್ಪಿಸಿದಾಗ ಅದರ ವಿಚಾರತಿಳಿದ ಬಸವಣ್ಣನವರು ಇದು ಕೂಡಲಸಂಗಮನಿಗೆ ಸಲ್ಲಬೇಕೆಂದು ತಲೆಯ ಮೇಲೆ ಇಟ್ಟುಕೊಂಡರು. ಈ ಹೃದ್ಯ ಸನ್ನಿವೇಶ ದಮನಿತ ವರ್ಗಗಳ ನಿಷ್ಠೆ-ನಿಯತ್ತು, ಶ್ರದ್ಧೆ-ಕತುಶಕ್ತಿಗಳಿಗೆ ಮಹಾಮನ್ನಣೆ ನೀಡುವ ಬಸವಣ್ಣನವರ ನಡತೆಯಿಂದ ಬೆದರಿದ ಹರಳಯ್ಯ ಕೊರಗಿದ. ಕೂಡಲಸಂಗಮನಿಗೆ ಅರ್ಪಿಸಲು ಅದನ್ನು ರಾಜಬೀದಿಯಲ್ಲಿ ತರುತ್ತಿರಬೇಕಾದರೆ ಬ್ರಾಹ್ಮಣ ಮಧುವರಸ ಹರಳಯ್ಯನನ್ನು ಅಡ್ಡಗಟ್ಟಿ ಪಾದರಕ್ಷೆಗಳ ಚಂದಕ್ಕೆ ಮರುಳಾಗಿ ಬೇಡಬೇಡವೆಂದರೂ ಬಿಡದೆ ಮೆಟ್ಟಲು ಹೋದನು. ಆ ಕ್ಷಣವೇ ಅವು ಮಾಯವಾದವು. ಜೊತೆಗೆ ಅವನ ಮೈಯೆಲ್ಲಾ ಉರಿಯತೊಡಗಿತು. ಆಗ ಅವನಿಗೆ ನೀರು ತಂದು ಸುರಿಯುವುದೇ ನೂರೊಂದು ಗೌಡೀರ ಕೆಲಸವಾಯಿತು. ಅವರಲ್ಲಿ ಒಬ್ಬಾಕೆ ಕಣ್ಣುಕಾಣದಾಕೆ ಆ ಊರಿಗೆ ಹೊಸದಾಗಿ ಬಂದಿದ್ದ ದೊಂಬರ ಆಟವನ್ನು ನೋಡುತ್ತಾ ಮೈಮರೆತು ಅದು ಮುಗಿದ ಮೇಲೆ ಆತುರಾತುರವಾಗಿ ಓಡಲು ಕಣ್ಣುಕಾಣದಾಗಲು ಕೊಳದೂರವೆಂದು ಹತ್ತಿರದಲ್ಲೇ ಇದ್ದ ಹರಳಯ್ಯನ ಧರ್ಮ ಹದ ಮಾಡುವ ಕರೆಬಾನಿ ನೀರನ್ನು ತುಂಬಿ ತಂದು ಮಧುವರಸನ ಮೇಲೆ ಹಾಕಲು ತಕ್ಷಣವೇ ಆತನ ಉರಿ ಶಮನವಾಯಿತು. ಇದರಿಂದ ಸೋಜಿಗಗೊಂಡು ನಿಜಸಂಗತಿಯನ್ನು

ಗೌಡಿತಿಯಿಂದ ತಿಳಿದು ಆತನೊಂದಿಗೆ ನಂದು ಬೆಳೆಸಲು ನಿರ್ಧರಿಸುತ್ತಾನೆ. ಆ ನಿರ್ಧಾರವೇ ಕಲ್ಯಾಣದ ಕ್ರಾಂತಿಗೆ ಆದಿ ಬೀಜವಾಗಿ ಪರಿಣಮಿಸುತ್ತದೆ.

ಮಧುವರಸ ಹಾಗೂ ಹರಳಯ್ಯನ ಮಕ್ಕಳ ನಡುವಿನ ಮದುವೆ ವಿಚಾರದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅದು ಕೇವಲ ಪ್ರಯತ್ನ ಎಂಬುದು ಒಂದು ಅಭಿಪ್ರಾಯವಾದರೆ, ಮದುವೆ ನಡೆದದ್ದು ನಿಜ ಎಂಬುದು ಇನ್ನೊಂದು ವಾದವಾಗಿದೆ. ಈ ವಿಚಾರವಾಗಿ ಪ್ರಸ್ತುತ ಕಾವ್ಯ ವಿಶೇಷ ಬೆಳಕು ಬೀರುತ್ತದೆ.

ಬಹುತೇಕ ಕಾವ್ಯಗಳಲ್ಲಿ ಮಧುವರಸನ ಮಗಳಿಗೂ ಹರಳಯ್ಯನ ಮಗನಿಗೂ ವಿವಾಹವಾದಂತೆ ತಿಳಿಸಿದ್ದರೆ, ಈ ಕಾವ್ಯ ಹರಳಯ್ಯನ ಮಗಳು ಹಾಗೂ ಮಧುವರಸರ ಮಗನ ನಡುವೆ ವಿವಾಹ ಸನ್ನಾಹ ನಡೆದಂತೆ ತಿಳಿಸುತ್ತದೆ. ಜೊತೆಗೆ ವರ್ಣಸಂಕರದ ಪರಿಣಾಮವನ್ನು ಊಹಿಸಿ ಹರಳಯ್ಯ ಈ ಮದುವೆಯನ್ನು ನಿರಾಕರಿಸಿದಂತೆ ಹೇಳಿರುವುದು ಹೊಸ ವಿಚಾರವಾಗಿದೆ. ಅಲ್ಲದೆ ಹರಳಯ್ಯನ ಮಗಳು ಅರುಂಧತಿ ನಕ್ಷತ್ರವಾದಳು ಎಂದು ಹೇಳುವುದೇ ಕಾವ್ಯದ ಮೂಲ ಆಶಯವಾಗಿದ್ದು ಅದರ ಮೇಲೆ ಹೆಚ್ಚು ಒತ್ತುಕೊಟ್ಟಂತೆ ಕಂಡುಬರುತ್ತದೆ. ಅನಂತರ ಬ್ರಾಹ್ಮಣ ವರನನ್ನು ಮದುವೆಯಾಗಲೊಲ್ಲದೆ ಹರಳಯ್ಯನ ಮಗಳು ಮದುವೆ ಮಂಟಪದಿಂದ ಮಾಯವಾದಂತೆ ಚಿತ್ರಿಸಿರುವುದು ಇದಕ್ಕೆ ಪೂರಕವಾಗಿದೆ. ಹೀಗೆ ಮದುವೆ ಜರುಗದೆ ಹೋದಾಗ ಬಿಜ್ಜಳನಲ್ಲಿ ಮಧುವರಸ ದೂರು ಸಲ್ಲಿಸಿ ಬಸವಣ್ಣನವರನ್ನು ಆರೋಪಿಯನ್ನಾಗಿಸಿರುವುದು ವಿಚಿತ್ರವೆನಿಸುತ್ತದೆ. ಅನಂತರ ಪವಾಡ ಸದೃಶಘಟನೆಗಳ ಮೂಲಕ ಸಂದರ್ಭವನ್ನು ಸಾಪೇಕ್ಷವಾಗಿ ಮುಕ್ತಾಯಗೊಳಿಸಲಾಗಿದೆ.

ಒಟ್ಟಾರೆ ಈ ಬಗೆಯ ಚಿತ್ರಣ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಈ ಕುರಿತಾದ ಇನ್ನಷ್ಟು ಸಂಶೋಧನೆಗೆ ಇದು ಪ್ರೇರಣೆ ನೀಡುತ್ತದೆ. ಇದು ಗ್ರಂಥಸ್ಥಕಥಾವಸ್ತುವಿಗಿಂತ ಭಿನ್ನಮುಖಗಳನ್ನು ಹೊಂದಿದೆ. ಮತಪ್ರಚಾರದ ಸೋಂಕು ಇದರಲಿಲ್ಲ. ಮಾನವ ಸಹಜ ಸ್ವಭಾವದ ನಡಿಗೆ ಈ ಕಥನಗೀತೆಯಲ್ಲಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅಲ್ಲದೆ ಶರಣೆಯರ ವಿಶೇಷ ಉಲ್ಲೇಖ ಹಾಗೂ ಶರಣೆಯರ ಕಾಯಕನಿಷ್ಠೆಯನ್ನು ವಿಶೇಷವಾಗಿ ಇಲ್ಲಿ ಹೇಳಿದ್ದಾರೆ. ದಮನಿತ ವರ್ಗಗಳನ್ನು ಉನ್ನತಿಗೊಳಿಸುವ ಬಸವಣ್ಣನವರ ಮಾನವೀಯ ವರ್ತನೆ ಇಲ್ಲಿದೆ. ಕ್ರಾಂತಿಕಾರೀ ವಿವಾಹದ ಚಿತ್ರ ಇಲ್ಲಿ ಆಕಸ್ಮಿಕವಾಗಿ ಮುಕ್ಕಾಗಿದೆ. ನೀಲಗಾರರಲ್ಲಿ ಕೆಲವರು ಈ ಪಾಠ ಹೇಳಿರುವುದುಂಟು. ಶರಣತತ್ವಗಳನ್ನು ಆಚರಣೆಯಲ್ಲಿತಂದು ನುಡಿನಡೆಗಳನ್ನೊಂದಾಗಿಸಿದ ಕೀರ್ತಿ ಹರಳಯ್ಯ ಮಧುವರಸರಿಗೆ ಸಲ್ಲುತ್ತದೆ.

## ಘಟಕ ೪ : ಅ) ಸರ್ವಜ್ಞನ ತ್ರಿಪದಿಗಳು :

### ಕವಿ–ಕಾವ್ಯ–ವಿಚಾರ :

ಸರ್ವಜ್ಞನ ವೈಯಕ್ತಿಕ ಜೀವನವನ್ನು ಕುರಿತು ನಿಶ್ಚಿತವಾಗಿ ಹೇಳಬಹುದಾದ ಯಾವ ಐತಿಹಾಸಿಕ ಆಧಾರವು ಸಿಕ್ಕಿಲ್ಲ. ಈತ ಸಂಪೂರ್ಣವಾಗಿ ಜನಜೀವನದಲ್ಲಿ ಬೆರೆತುಹೋಗಿದ್ದಾನೆ. ಕೊನೆಗೆ ಆತನ ಹೆಸರೇನೆಂಬುದು ಸಹ ತಿಳಿಯದು. ಸರ್ವಜ್ಞ ಎಂಬುದು ವ್ಯಕ್ತಿಗತವಾದ ಹೆಸರಲ್ಲ; ಅದು ವ್ಯಕ್ತಿತ್ವನಿರಸನದಿಂದ ಸಿದ್ಧಿಸಿದ ಸಮಷ್ಟಿ ಚೇತನದ ಸ್ವರೂಪ ಎಂಬುದು ಸ್ಪಷ್ಟ. ಬಹುಶಃ ಅವನೇ ಹೇಳಿಕೊಂಡಿರುವಂತೆ ಅದು ಗರ್ವದಿಂದ ಬಂದುದಲ್ಲ 'ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ' ಆದುದರ ಸಂಕೇತ.

ಇದರ ಹೊರತಾಗಿ ಈತನಿಗಿದ್ದ ಮೊದಲ ಹೆಸರು, ಈತ ಬದುಕಿದ್ದಕಾಲ, ಈತನ ಜೀವನದ ವಿವರಗಳು ಈ ಎಲ್ಲದರ ಮೇಲೂ ಕಾಲಪುರುಷ ತನ್ನ ತೆರೆಯನ್ನೆಳೆದಿದ್ದಾನೆ. ಆದರೂ ಆತನ ವಚನಗಳಲ್ಲಿ ಅಲ್ಲಲ್ಲಿ ಗೋಚರವಾಗುವ ಒಂದೆರಡು ಎಳೆಗಳನ್ನು ಹಿಡಿದು ತೆರೆಯನ್ನು ಓಸರಿಸಿ ನೋಡುವ ಆ ಮೂಲಕ ಅವನ ಜೀವನವನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆದಿವೆ.

**ಸರ್ವಜ್ಞ:** (ಎಲ್ಲವನ್ನು ತಿಳಿದವನು ಎಂಬ ಅರ್ಥಬರುತ್ತದೆ)

ಈತ ಕನ್ನಡದ ತ್ರಿಪದಿ ಸಾಹಿತ್ಯ ಸೃಷ್ಟಿಯ ಪ್ರಮುಖ ಕವಿಯಾಗಿದ್ದಾನೆ. ಮೂರು ಸಾಲಿನ ಪದ್ಯಗಳನ್ನು ಬರೆದಿರುವ ಈತನ ಸಾಹಿತ್ಯಕ್ಕೆ ತ್ರಿಪದಿ ಎನ್ನಲಾಗಿದೆ. ಜೊತೆಗೆ ಸರ್ವಜ್ಞನ ಅನುಭವದ ನುಡಿಯಾದುದರಿಂದ ಸರ್ವಜ್ಞನ ವಚನಗಳೆಂದೂ ಕರೆಯಲಾಗುತ್ತದೆ. ಈತನ ಕಾಲದ ಬಗೆಗೆ ಸಂಶೋಧಕರು, ಪ್ರಾಜ್ಞರು, ಚರಿತ್ರಾಕಾರರು ನಿಖರವಾದ ದಾಖಲೆ ಇವನಿಂದ ಲಭ್ಯವಾಗಿಲ್ಲದ ಕಾರಣ, ಇತರ ಬರಹಗಾರರು ಇವನ ಬಗೆಗೆ ಪ್ರಸ್ತಾಪಿಸಿರುವ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ೧೭ನೇ ಶತಮಾನ ಎಂದು ಗುರುತಿಸಿದ್ದಾರೆ.

ಪ್ರಾಯಶಃ ಪುಷ್ಪದತ್ತ ಎಂಬುದು ಈತನ ನಿಜನಾಮವಾಗಿದ್ದು ಸರ್ವಜ್ಞ ಎಂಬುದು ಕಾವ್ಯನಾಮ.

ಸರ್ವಜ್ಞ ಇಂದಿನ ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲೂಕಿನ ಕುಮುದ್ವತಿ ನದಿದಂಡೆಯ ಮೈಸೂರಿನಲ್ಲಿ ಜನಿಸುತ್ತಾನೆ. ಇವನ ಹೆತ್ತ ತಾಯಿ ಕುಂಬಾರಮಾಳಿ, ಸಾಕು ತಾಯಿ ಮಲ್ಲಕ್ಕ, ತಂದೆ ಬಸವರಸ.

ಬಸವರಸನಿಗೆ ಮಕ್ಕಳಾಗದೇ ಇದ್ದಾಗ ಪುತ್ರ ಸಂತಾನ ವರ ಪಡೆಯಲು ಕಾಶಿಗೆ ತೆರಳುತ್ತಾನೆ. ಕನಸಿನಲ್ಲಿ ಬಂದ ವಿಶ್ವನಾಥನು ನಿನಗೆ ಪುತ್ರ ಸಂತಾನವಾಗುವುದೆಂದು ವರವಿತ್ತನು. ಖುಷಿಯಿಂದ ಗಂಗಾನದಿಯಲ್ಲಿ ಮಿಂದು ಅರ್ಚಿಸಿ ಗ್ರಾಮದೆಡೆಗೆ ಸಾಗುತ್ತಾನೆ. ಅಂಬಲೂರ ಎಂಬ ಗ್ರಾಮದಲ್ಲಿ ಮಳೆಯ ಕಾರಣದಿಂದ ತಂಗುತ್ತಾನೆ. ಕುಂಬಾರಸಾಲೆಯಲ್ಲಿ ಕುಂಬಾರ ಮಾಳಿ ಎಂಬುವಳ ಮನೆಯಲ್ಲಿ ವಸತಿ ಮಾಡುತ್ತಾನೆ. ಕಾಲವಶದಿ ಇಬ್ಬರು ಸೇರಿದರು. ಮುಂದೆ ಸರ್ವಜ್ಞನು ಜನಿಸಿದನು ಎಂಬ ಪ್ರತೀತಿ ಇದೆ.

ಸರ್ವಜ್ಞ ಬೆಳೆದು ಪುಣ್ಯಕ್ಷೇತ್ರಗಳನ್ನೊ, ಗುರು ಮಠಗಳನ್ನೊ ಭೇಟಿ ಮಾಡಿ ಜ್ಞಾನಾರ್ಜನೆ ಮಾಡಿಕೊಂಡು, ಸಾಮಾಜಿಕ, ಧಾರ್ಮಿಕ ಇನ್ನು ಹಲವಾರು ಕಾಳಜಿಯುಳ್ಳ ತ್ರಿಪದಿಗಳನ್ನು ರಚಿಸಿದನು. ಸರ್ವಜ್ಞ ತನ್ನ ಬಗೆಗೆ ವಚನಗಳಲ್ಲಿ ಹೀಗೆ ಉಲ್ಲೇಖಿಸಿದ್ದಾನೆ.

**೧) ಯಾತರ ಹೂವಾದರು । ನಾತರೆ ಸಾಲದೆ**

ಜಾತಿ–ವಿಜಾತಿಯೆನಬೇಡ–ಶಿವನೊಲಿ
ದಾತನೇ ಜಾತಿ ಸರ್ವ

೨) ಬೊಮ್ಮವನರಿದೊಡೆ । ಸುಮ್ಮನೆ ಇರಬೇಕು
ಬೊಮ್ಮವನರಿದು ಗಳಹಲು – ಕಳಹೋಗಿ
ಕೆಮ್ಮಿದಂತಕ್ಕು ಸರ್ವಜ್ಞ

೩) ಸತ್ಯರ ನುಡಿ ತೀರ್ಥ । ಮತ್ತೆ ಜಂಗಮ ತೀರ್ಥ
ಉತ್ತಮರ ಸಂಗವದು ತೀರ್ಥ–ಹರಿವ ನೀ
ರೆತ್ತಣ ತೀರ್ಥ ಸರ್ವಜ್ಞ

೪) ಬಲ್ಲವರ ಒಡನಾಡೆ । ಬೆಲ್ಲವನು ಸವಿದಂತೆ
ಅಲ್ಲದಜ್ಞಾನಿಯೊಡನಾಡೆ–ಮೊಳಕೈಗೆ
ಕಲ್ಲು ಹೊಡೆದಂತೆ ಸರ್ವಜ್ಞ

೫) ಅನ್ನದೇವರಿಗಿಂತ । ಇನ್ನು ದೇವರು ಇಲ್ಲ
ಅನ್ನಕ್ಕೆ ಮೇಲು ಹಿರಿದಿಲ್ಲ – ಜಗದೊಳ
ಗನ್ನವೇ ದೈವ ಸರ್ವಜ್ಞ

೬) ಸುರಗಿಯ ಮೊನೆ ನಂಜು । ಉರಗನ ಹಲು ನಂಜು
ಬೆರಸಿ ತಪ್ಪುವನ ನುಡಿ ನಂಜು–ದುರ್ಜನನ
ಇರವೆಲ್ಲ ನಂಜು ಸರ್ವಜ್ಞ

೭) ಓದಿದ ಓದೆಲ್ಲ । ಮೇದ ಕಬ್ಬಿನ ಹಿಪ್ಪೆ
ಓದಿದ ಓದನರಿದರೆ–ಆ ಹಿಪ್ಪೆ
ಆದ ಕಬ್ಬಂತೆ ಸರ್ವಜ್ಞ

೮) ಒಡಲೆಂಬ ಹುತ್ತಕ್ಕೆ । ನುಡಿವ ನಾಲಗೆ ಸರ್ಪ
ಕಡುರೋಷವೆಂಬ ವಿಷವೇರಿ–ಸಮತೆ ಗಾ
ರುಡಿಗನಂತಕ್ಕು ಸರ್ವಜ್ಞ

೯) ಜಾತಿ ಹೀನನ ಮನೆಯ । ಜ್ಯೋತಿ ತಾ ಹೀನವೇ
ಜಾತಿ–ವಿಜಾತಿಯೆನಬೇಡ–ಶಿವನೊಲಿ
ದಾತನೇ ಜಾತ ಸರ್ವಜ್ಞ

೧೦) ಮಾತಿಂದ ನಗೆನುಡಿಯು । ಮಾತಿಂದ ಕೊಲೆ ಹಗೆಯು
ಮಾತಿಂದ ಸರ್ವರಿಗೆಯುಪಚಾರ–ಲೋಕಕ್ಕೆ
ಮಾತೆ ಮಾಣಿಕವು ಸರ್ವಜ್ಞ

**ಘಟಕ : ೪**

## ಆ) ತತ್ತ್ವಪದಕಾರರ ತತ್ತ್ವಪದಗಳು

ಕನ್ನಡ ಸಾಹಿತ್ಯದಲ್ಲಿ ಹದಿನಾರರಿಂದ ಹತ್ತೊಂಬತ್ತನೆಯ ಶತಮಾನದವರೆಗೆ ಸಮೃದ್ಧವಾಗಿ ಬೆಳೆದುಕೊಂಡು ಬಂದ ತತ್ತ್ವಪದ ಸಾಹಿತ್ಯವು ಶರಣರ ವಚನ, ದಾಸರ ಕೀರ್ತನೆಗಳಂತೆ ಕಂಡರೂ ಜನಸಾಮಾನ್ಯರ ನಾಲಗೆಯ ಮೇಲೆ ಸುಲಭವಾಗಿ ಹರಿದಾಡಿ ಭಜನೆ ಮೊದಲಾದ ಸಂದರ್ಭಗಳ ಮೂಲಕ ಹೆಚ್ಚು ಜನಮುಖಿಯಾಯಿತು. ನವೋದಯ ಆರಂಭದ ಕನ್ನಡ ಕಾವ್ಯವನ್ನು ರೂಪಿಸಿದವರು ಯಾರು ಎಂಬ ಬಗ್ಗೆ ಮುಖ್ಯ ಪ್ರಶ್ನೆಯನ್ನು ಹಾಕಿಕೊಂಡು ಉತ್ತರಕ್ಕಾಗಿ ನಿಂತಾಗ ನಮ್ಮ ಕಣ್ಣ ಮುಂದೆ ಬಂದು ನಿಲ್ಲುವ ೧೮-೧೯ನೆಯ ಶತಮಾನದಲ್ಲಿ ಕನ್ನಡ ಕಾವ್ಯಲೋಕವನ್ನು ಬೆಳಗಿದ ಅನುಭಾವಿ ಕವಿಗಳಾದ ತತ್ತ್ವಪದಕಾರರು, ಲಾವಣಿಕಾರರು ಮುಖ್ಯರಾಗುತ್ತಾರೆ. ತತ್ತ್ವಪದಗಳನ್ನು ಅನುಭಾವ ಸಾಹಿತ್ಯವೆಂದೂ ಕರೆಯುತ್ತಾರೆ.

ತತ್ತ್ವಪದಗಳು ಕನ್ನಡದಲ್ಲಿ ಬಗೆಬಗೆಯ ಹೆಸರುಗಳಿಂದ ಬೆಳೆದುಕೊಂಡು ಬಂದಿವೆ. ಪರಮಾತ್ಮನ ಬಗೆಗಿನ ಅನುಭಾವ ಈ ಪದಗಳಲ್ಲಿ ವ್ಯಕ್ತಗೊಂಡುದರಿಂದ ಇವಕ್ಕೆ ಅನುಭಾವ ಪದಗಳೆಂದೂ, ಇವನ್ನು ಏಕತಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವುಗಳಿಗೆ ಸ್ವರವಚನಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ತ್ವಗಳನ್ನು, ಆಧ್ಯಾತ್ಮಿಕ ತತ್ತ್ವಗಳನ್ನು ಇವು ಒಳಗೊಂಡಿರುವುದರಿಂದ ಇವಕ್ಕೆ ತತ್ತ್ವಪದಗಳೆಂದೂ, ಇವನ್ನು ಜನಸಾಮಾನ್ಯರು ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಭಜನೆಯ ಪದಗಳೆಂದೂ ಕರೆದುಕೊಂಡು ಬರಲಾಯಿತು. ಒಟ್ಟಿನಲ್ಲಿ ಇವು ಮೌಖಿಕ ಸಾಹಿತ್ಯದ ಗಮನಾರ್ಹ ಕಾವ್ಯಪ್ರಕಾರಗಳಾಗಿವೆ.

**ತತ್ತ್ವಪದ ಸಾಹಿತ್ಯ ಪರಂಪರೆ :**

ತತ್ತ್ವಪದ ಪರಂಪರೆಯಲ್ಲಿ ಮುಪ್ಪಿನ ಷಡಕ್ಷರಿ (೧೫೦೦), ಚಿದಾನಂದ ಅವಧೂತರು (೧೭೩೦), ರಾಮಪುರದ ಬಕ್ಕಪ್ಪ (೧೭೫೦), ಸರ್ಪಭೂಷಣ ಶಿವಯೋಗಿ (೧೮೭೫), ಮುಪ್ಪಿನಷಡಕ್ಷರಿ, ಶಿಶುನಾಳಷರೀಫ್ (೧೮೪೦), ಕಡಕೊಳ ಮಡಿವಾಳಪ್ಪ (೧೮೫೦), ಮೋಟ್ನಳ್ಳಿ ಹಸನಸಾಹೇಬ (೧೮೫೫), ಕೊಳ್ಳೂರ ಹುಸೇನ ಸಾಹೇಬ ಮುಂತಾದ ಪ್ರಮುಖ ತತ್ತ್ವಪದಕಾರರನ್ನು ಗುರುತಿಸಬಹುದು.

**ಕಡಕೊಳ ಮಡಿವಾಳಪ್ಪ :**

ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಅಂತೀರಿ
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ
ಮುಟ್ಟಾದ ಮೂರು ದಿನಕ ಹುಟ್ಟಿ ಬಂದೀರಿ ನೀವು
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ

ತೊಗಲೊಳು ತೊಗಲ್ಹೊಕ್ಕು ತಗಿ ಬಂದವ ನೀನು
ತಗಲ ಮಾತಾಡುವುದೇನಣ್ಣ
ಇದರ ಬಗಿಯ ತಿಳಿಯದೆ ಬಗೆದು ಮಾತಾಡಿದರೆ
ನಗಿಗೇಡಿ ಕಾಣುತಾದಣ್ಣ

ಎಲವಿನಾಲಯೊದೊಳು ಒಳಗ್ಹೊಕ್ಕು ನೀ ಕುಂತು

ಓಡ್ಯಾಡ ಬೇಡ । ನೀ ಕೇಳಣ್ಣ
ಎಲವು ತೊಗಲ ಮಲಮೂತ್ರ ಮಾಂಸವು
ನಿನ್ನಲ್ಲಿ ಕಾಣುತಾದಣ್ಣ

ಊರ ನರಕವ ತಿಂದು ಬೋರ್‍ಯಾಡ್ಡಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ
ಅದರ ಸ್ವಾದ್ದತ್ತಿ ನೀ ಉಂಡು ಗಾಡಾಗಿ ಕುಂತೀರಿ
ಶೀಲ ಎಲ್ಲಿ ಉಳಿತ್ತೇಳಣ್ಣ

ಊರ ಬಾವಿಯ ನೀರ ದಾರುದರು ತರುವರು
ನಿಮ್ಮ ನೀರ ಬ್ಯಾರ್‍ಯಾವೇನಣ್ಣ ?
ಲಂಡೇನ್ವಳ್ಳ ಹೋಗಿ ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣ ?

ಸೂಸಲಾಡುವ ದೇಹ ಸೋಸಿ ನೀರವ ಮಾಡಿ
ಮಡಿ ಮಾಡಿಕೊಳ್ಳಬೇಕಣ್ಣ
ನಮ್ಮ ಧೀರ ಮಹಾಂತೇಶನ ಬಿಡದೆ ಕೊಂಡಾಡಿದರೆ
ಕಡಿತನಕ ಮಡಿಯಾಗುವುದಣ್ಣ

**ಕವಿ–ಕಾವ್ಯ–ವಿಚಾರ :** ಕನ್ನಡ ಸಾಹಿತ್ಯದ ಅತ್ಯಂತ ವಿಸ್ತಾರವಾದ ಭಾಗವಾದ ತತ್ವಪದಸಾಹಿತ್ಯವು ಕೇವಲ ಒಂದು ಪ್ರಕಾರವಷ್ಟೇ ಅಲ್ಲ. ಜೀವನವನ್ನು ಹಸನುಗೊಳಿಸುವಲ್ಲಿ ಪ್ರಭಾವಿಸುತ್ತಿರುವ ಸಾಧನಾಮಾರ್ಗವೂ ಆಗಿದೆ. ವಚನಗಳಂತೆ ತತ್ವಪದಗಳೂ ಸಮಾಜೋದ್ಧಾರದ ಸಾಧನ ಮಾರ್ಗಗಳ ಉಪಉತ್ಪನಗಳಾಗಿವೆ. ಯಾವುದೇ ರೀತಿಯ ಜಾತಿಸೂತಕಗಳಿಲ್ಲದ, ಲಿಂಗ ತಾರತಮ್ಯವಿಲ್ಲದ ಪ್ರಜಾಸತ್ತಾತ್ಮಕ ಕನ್ನಡನಾಡಿನ ಅಸ್ಮಿತೆಯ ಭಾಗವಾಗಿವೆ. ಇದು ಇಂದಿಗೂ ಜೀವಂತವಾಗಿರುವ ಪರಂಪರೆ. ತಾತ್ವಿಕತೆಯ ದೃಷ್ಟಿಯಿಂದ ಈ ಪಂಥಕ್ಕೆ ಅಖಿಲಭಾರತದ ವ್ಯಾಪ್ತಿಯಿದೆ. ಪಾರಂಪರಿಕವಾದ ವೈದಿಕರ ಧಾರ್ಮಿಕ ಮತ್ತು ಸಾಮಾಜಿಕ ಯಾಜಮಾನ್ಯವನ್ನು ಮಾನ್ಯಮಾಡದ ಈ ಪರಂಪರೆಗಳು ಶಬ್ದ(ವೇದ) ಪ್ರಮಾಣವನ್ನು ತಿರಸ್ಕರಿಸುತ್ತವೆ. ವೈದಿಕ ಪರಂಪರೆಯು ಪ್ರಚೋದಿಸಿದ ವರ್ಣಾಶ್ರಮ ವ್ಯವಸ್ಥೆಯನ್ನೂ, ಜಾತಿ ವ್ಯವಸ್ಥೆಯನ್ನೂ ಕಟುವಾಗಿ ವಿರೋಧಿಸುತ್ತವೆ. ಮೋಕ್ಷವು ಎಲ್ಲರಿಗೂ ದೊರಕಲು ಸಾಧ್ಯವೆಂಬ ಸಮಾನತೆಯನ್ನು ಮುಂದಿಡುತ್ತವೆ. ಜ್ಞಾನ ಮಾರ್ಗದಿಂದ ಮುಕ್ತಿಸಾಧ್ಯ, ಸ್ವಂತಪ್ರಯತ್ನದಿಂದ ವಿಶ್ವಸತ್ಯವನ್ನು ಅರಿಯಬಹುದು ಎನ್ನುತ್ತಾರೆ.

ಮಧ್ಯಯುಗೀನ ಕಾಲಘಟ್ಟದಲ್ಲಿ ಈ ನೆಲದ ನಿಜಚಹರೆಗಳು ಕಾಣೆಯಾದವು. ಅವರ ಹಾಗೂ ಅವರ ಪದಗಳ ಬಗೆಗೆ ಅಕೆಡೆಮಿಕ್ ಓದುಗಳು ಮೌನವಾದವು. ಆದರೆ ಸಮೂಹ ಮಾತ್ರ ತಮ್ಮ ಬದುಕಿನ ನಡುವೆ ಪ್ರೀತಿಯಿಂದ ಇವುಗಳನ್ನು ಪೋಷಿಸುತ್ತ ಬಂದಿದೆ. ತತ್ವಪದಕಾರರ ಪರಂಪರೆ ಜೀವಂತ ಪರಂಪರೆಯಾಗಿರುವುದರಿಂದ ಈ ಪಂಥದ ಆಚರಣೆ, ವಿಧಿನಿಷೇದಗಳು ಮತ್ತು ಯಥೇಚ್ಛವಾಗಿ ದೊರಕುವ ಸಾಹಿತ್ಯವು ಇದರ ತಾತ್ವಿಕತೆಯನ್ನು ತಿಳಿಸುತ್ತವೆ. ಇವೆಲ್ಲ ಗುರು ಪಂಥಗಳು. ಇದರಲ್ಲಿ ಬೌದ್ಧ, ನಾಥ, ಕಾಪಾಲಿಕ, ಶೈವ, ಶಾಕ್ತ, ಅದ್ವೈತ, ಸೂಫಿ, ವೀರಶೈವ, ಶಾಂಕರ, ಅದ್ವೈತ, ಮತ್ತು ವೈಷ್ಣವ ಭಕ್ತಿಪಂಥಗಳ ಪ್ರಭಾವಗಳಿವೆ. ಜಾತಿ ಧರ್ಮದ ಎಲ್ಲೆಗಳನ್ನು ದಾಟಿದ ವಿಶ್ವಮಾನವ ಪ್ರಜ್ಞೆ ಇವರದು, ಇವರಲ್ಲಿ ಲಿಂಗ ಅಸಮಾನತೆ ಇಲ್ಲ, ಇವರು ಸಂಸಾರದೊಳಗಿದ್ದೇ ಪರಮಾರ್ಥ ಕಾಣುವರು.

ಗುರುವಿನಿಂದ ದೀಕ್ಷಾಬದ್ಧರಾಗಿ ತತ್ವಚಿಂತನೆ ನಡೆಸುವರು, ಇವರಿಗೆ ಸಾವು ಶೋಕವಲ್ಲ, ನಡೆ ನುಡಿಸಿದ್ಧಾಂತ ಪರಂಪರೆ ಇವರದು. ಸಾಮೂಹಿಕ ಚಹರೆ ಇದರದು, ಇವೆಲ್ಲಾ ಸಂಗೀತ ರಚನೆಗಳು, ಏಕತಾರಿಯ ಜೊತೆ ಹಾಡುವರು, ಇವು ಪಲ್ಲವಿ ಅನುಪಲ್ಲವಿ ಚರಣಗಳಿಂದ ಕೂಡಿವೆ. ಕೊನೆಯ ಚರಣದಲ್ಲಿ ಅಂಕಿತವಿರುತ್ತದೆ. ಇವು ರಾಗ ತಾಳಗಳಿಂದ ನಿರ್ದೇಶಿತವಾಗಿರುತ್ತವೆ. ಇವು ಅಂಶಗಣ ಛಂದಸ್ಸಿನಲ್ಲಿವೆ. ಕೆಲವೆಡೆ ಮಾತ್ರಾಗಣ ಛಂದಸ್ಸಿನಲ್ಲಿಯೂ ಇವೆ. ಕರ್ನಾಟಕದಾದ್ಯಂತ ಇವು ಸಿಗುತ್ತದೆ.

ಬಸವಾದಿ ಶರಣರ ಕಾಲದಲ್ಲಿ ಕುಡಿಯೊಡೆದಿದ್ದ ತತ್ವಪದರೂಪವು ೧೭, ೧೮, ೧೯ನೆ ಶತಮಾನಗಳ ಉತ್ತರಾರ್ಧದ ಕೊನೆಯ ಕ್ಷಣದವರೆಗೂ ರಚನೆಯಾಗುತ್ತಿದ್ದ ತತ್ವಪದಪ್ರಕಾರವನ್ನು ಸಾಹಿತ್ಯ ಚರಿತ್ರೆಕಾರರು ಗುರುತಿಸದೆ ಹೋದದ್ದು ವಿಷಾದನೀಯ. ಕರ್ನಾಟಕದ ಇತರ ಭಾಗಗಳಲ್ಲಿ ಬ್ರಿಟಿಷ್ ಸುಧಾರಣಾವಾದಿ ಚಟುವಟಿಕೆಗಳು ಭರದಿಂದ ಸಾಗಿರುವಾಗ ಹೈದ್ರಾಬಾದ್ ಕರ್ನಾಟಕದ ಜನರು ಮಾತ್ರ ಅವಧೂತ ಪರಂಪರೆಯ ನೆರಳಲ್ಲಿ ಜೀವಭಾವವನ್ನು ಕಾಪಿಟ್ಟುಕೊಂಡು ಬದುಕಿದ್ದರು ಈ ಹಿನ್ನೆಲೆಯಲ್ಲಿ ಬಂದ ಕಡಕೊಳ ಮಡಿವಾಳಪ್ಪನವರ ಬದುಕು ಬರಹಗಳು ಸಾಮಾಜಿಕ ಕ್ರಾಂತಿಯನೇ ಉಂಟುಮಾಡಿದವು.

ಕ್ರಿ.ಶ. ಸುಮಾರು ೧೭೫೫ ರಿಂದ ೧೮೭೬ರ ಮಧ್ಯದಲ್ಲಿ ಬಾಳಿದ್ದ ಮಡಿವಾಳಪ್ಪನವರ ಜನನವೇ ಹಲವು ಸಂಕಟಗಳನ್ನು ತಂದೊಡ್ಡಿತ್ತು. ಇವರ ತಾಯಿ ಗಂಗಮ್ಮ ಬಾಲವಿಧವೆ. ಈಗಿನ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನಲ್ಲೊಂದು ಪುಟ್ಟ ಹಳ್ಳಿ ನಾಗಠಾಣ. ಅಲ್ಲಿನ ಗಾಣಿಗರ ಮನೆತನದ ಕೂಲಿಕಾರ್ಮಿಕ ಕುಟುಂಬದಲ್ಲಿ ಈಕೆಯ ಜನನ. ಬಾಲ್ಯ ವಿವಾಹವಾಗಿ ಹರೆಯಕ್ಕೆ ಬರುವ ವೇಳೆಗೆ ವಿಧವೆಯಾಗಿದ್ದಳು. ಭೀಕರ ಅನಾವೃಷ್ಟಿಯಿಂದ ಜೀವನೋಪಾಯಕ್ಕಾಗಿ ಯೌವ್ವನೆ ಗಂಗಮ್ಮ ಮುಪ್ಪಿನ ತಂದೆಯೊಂದಿಗೆ ಕಲಬುರಗಿಗೆ ವಲಸೆ ಬಂದಳು. ಅವರು ಅಫಜಲಪುರ ತಾಲ್ಲೂಕಿನ ಬಿದನೂರಿನಲ್ಲಿನ ಸನ್ಯಾಸಿ ಮಠದಲ್ಲಿ ನೆಲೆಸಿರುವಾಗ ತಂದೆ ತೀರಿಕೊಳ್ಳುತ್ತಾನೆ. ಆ ನಂತರ ಈ ಮಠದಯ್ಯ ವಿರೂಪಾಕ್ಷಸ್ವಾಮಿಗಳಿಗೆ ಬಸುರಿಯಾಗುತ್ತಾಳೆ. ಸಮಾಜದ ನಿಂದನೆಗೆ ಹೆದರಿ ಗರ್ಭಇಳಿಸಿಕೊಳ್ಳುವ ದಾರಿಯಿಲ್ಲದೆ ಜೀವನವನ್ನೇ ಕೊನೆಗಾಣಿಸಬೇಕೆಂಬಲ್ಲಿ ಆ ಊರಿನ ಪೋಲೀಸ್‌ಗೌಡ ಮಲ್ಲಿಕಾರ್ಜುನಪ್ಪನು ಧೈರ್ಯ ತುಂಬಿ ಆಸರೆಯಾಗುತ್ತಾನೆ. ಬಿದನೂರು ಮಠವು ಮೂಲತಃ ಅದೇ ತಾಲ್ಲೂಕಿನ ಚಿಣಮಗೇರಿ–ಚೌಡಾಪೂರ ಹಳ್ಳಿ ನಡುವಿನ ಗುಡ್ಡದ ಮಹಾಂತೇಶ್ವರ ಮಠದ ಶಾಖಾ ಮಠವಾಗಿದ್ದು ಆ ಮಠದ ಅಂದಿನ ಗುರುಗಳಾಗಿದ್ದ ಗುರುಬಸವದೇವರಿಗೆ ವಿಷಯ ತಿಳಿಯುತ್ತದೆ. ಆ ಮಠದ ಶಿಷ್ಯನಾದ ಮಲ್ಲಿಕಾರ್ಜುನಪ್ಪಗೌಡನು ಗುರುಗಳಿಂದ ಆಕೆಗೆ ನೈತಿಕ ಬೆಂಬಲ ಕೊಡಿಸುತ್ತಾನೆ.

ಈ ಎಲ್ಲದರ ನಡುವೆ ಗಂಗಮ್ಮ ದಿನತುಂಬಿ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ವಿರೂಪಾಕ್ಷಸ್ವಾಮಿಗಳು ಮಗುವಿಗೆ ತನ್ನ ದೀಕ್ಷಾಗುರು ಗುಡ್ಡದ ಮಠದ ಹಿಂದಿನ ಪೀಠಾಧೀಶರಾಗಿದ್ದ ಮಡಿವಾಳಯ್ಯನ ಹೆಸರು ಇಡುತ್ತಾರೆ. ಚಿಕ್ಕ ವಯಸ್ಸಿನಲ್ಲಿಯೆ ಈತನ ಅಸಾಧಾರಣ ಪ್ರತಿಭೆ ಮತ್ತು ವಿಚಕ್ಷಣ ದೃಷ್ಟಿಕೋನದಿಂದ ಊರವರ ವರ್ತನೆ, ಅಪಮಾನಗಳಲ್ಲಿ ಬಾಲ್ಯ ಕಳೆಯುತ್ತಾನೆ ಮಲ್ಲಿಕಾರ್ಜುನಪ್ಪ ಗೌಡನ ಮಮತೆ ಕಾಳಜಿಯಿಂದ ಪಕ್ಕದೂರು ಗೊಬ್ಬೂರಿನ ಸದಾಶಿವಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ತಾರುಣ್ಯಕ್ಕೆ ಬಂದಾಗ ಆತನನ್ನು ತಾಯಿ ಗುಡ್ಡದ ಗುರುಬಸವದೇವರ ಬಳಿ ಕಳಿಸುತ್ತಾಳೆ. ಅಲ್ಲಿನ ಭಜನೆ, ಗೋಷ್ಠಿಗಳಲ್ಲಿ ಬೆಳೆಯುತ್ತಾನೆ.

ಮಲ್ಲಿಕಾರ್ಜುನಪ್ಪ ಗೌಡನಿಗೆ ಮಡಿವಾಳಪ್ಪನನ್ನು ತಮ್ಮೂರಿನ ಮಠಕ್ಕೆ ಅಧಿಕಾರಿ ಮಾಡಬೇಕೆಂಬ ಬಯಕೆ, ಅದಕ್ಕಾಗಿ ಗುಡ್ಡದ ಗುರುಬಸವದೇವರಿಂದ ಅಯ್ಯಾಚಾರ ಮಾಡಿಸಲು ಮುಂದಾಗುತ್ತಾರೆ. ಜನ ವಿರೋಧಿಸಲು ಆತನನ್ನು ಅರಳಗುಂಡಗಿ ಶರಣ ಬಸಪ್ಪನ ಬಳಿ ಕೊಂಡೊಯ್ಯುತ್ತಾನೆ. ಅಕ್ರಮ ಸಂತಾನಿಗೆ

ಜಂಗಮದೀಕ್ಷೆ ನೀಡಿ ಮಠಾಧೀಶ ಮಾಡಬಾರದೆಂದು ಕರ್ಮಠ ಬಸವಯ್ಯ ವಿರೋಧಿಸುತ್ತಾನೆ. ಆದರೂ ದೀಕ್ಷೆ ಕೊಡಿಸಲು ಮುಂದಾದಾಗ ತನ್ನಿಂದಾಗಿ ಶರಣಬಸಪ್ಪನನ್ನು ಸಂಕಟಕ್ಕೆ ಸಿಲುಕಿಸಲು ಇಷ್ಟಪಡದೆ ಮಡಿವಾಳಪ್ಪ ದೀಕ್ಷಾಪ್ರಸಂಗದಿಂದ ದೂರ ಸರಿಯುತ್ತಾನೆ. ಈಗಾಗಲೇ ಆತನಲ್ಲಿ ಕಾವ್ಯಶಕ್ತಿ ಚಿಗುರಿದ್ದರಿಂದ ಜಾತಿವಾದಿ ಜಂಗಮ, ಕರ್ಮಠ ವೀರಶೈವರನ್ನು ವಿರೋಧಿಸಿ ಪದಗಳನ್ನು ಬರೆದು ಸನಾತನವಾದಿಗಳ ನೀರಿಳಿಸುತ್ತಾನೆ. ಮನನೊಂದು ತರುಣ ಮಡಿವಾಳ ಅಲ್ಲಿಂದ ದೇಶಾಂತರ ಹೊರಡುತ್ತಾನೆ. ಹೀಗೆ ಹೊರಟ ಆತ ಎಲ್ಲೆಡೆಯೂ ಸುತ್ತಾಡಿ ಆರೂಢ, ಅವಧೂತ, ನಾಥ, ಸಿದ್ಧಪರಂಪರೆಗಳೊಂದಿಗೆ ಅನುಸಂಧಾನಗೈಯುತ್ತಾನೆ.

ಮಡಿವಾಳಪ್ಪ ಮೂಲತಃ ದಣಿವರಿಯದ ಅನ್ವೇಷಕ. ಜೀವ–ಜಗತ್ತು–ಈಶ್ವರ ಇತ್ಯಾದಿಗಳನ್ನು ಕುರಿತು ಆತನ ಬಹುನೆಲೆಯ ಹುಡುಕಾಟ ನಡೆಸಿದ್ದು ಅಲ್ಲಮಾದಿ ಬಸವಚಳುವಳಿಯ ಸಾಂಘಿಕ ಪ್ರಯತ್ನಗಳ ಬಗೆಗೆ ಸಕಾರಾತ್ಮಕ ನಿಲುವು ಬೆಳೆಸಿಕೊಳ್ಳುತ್ತಾನೆ. ಬಿಜಾಪುರ ಜಿಲ್ಲೆಯ ಕೋರವಾರದ ಮುರುಗೇಂದ್ರಸ್ವಾಮಿಗಳಲ್ಲಿ ಅದ್ವೈತ ಸಿದ್ಧಾಂತ ಅಧ್ಯಯನ, ಶ್ರೀ ಶೈಲದ ಕದಳಿಯ ಸಾಧುಗಳಲ್ಲಿ ಯೌಗಿಕಸಾಧನೆ, ಶರಣ ಪರಂಪರೆಯವರಲ್ಲಿ ಶಿವಯೋಗ ಇತ್ಯಾದಿ ಆ ಕಾಲದ ಅನುಭಾವಿಕನೆಲೆಯ ಎಲ್ಲ ಮಾರ್ಗಗಳನ್ನು ಬಗೆದು ನೋಡುತ್ತಾನೆ. ಗುಡ್ಡದ ಮಹಾಂತೇಶ್ವರ ಅಂಕಿತದಿಂದ ನೂರಾರು ತತ್ತ್ವಪದ ಮತ್ತು ವಚನ ರಚಿಸುತ್ತಾನೆ. ಎಲ್ಲ ದಾರ್ಶನಿಕ ಸನ್ಯಾಸಿಗಳಲ್ಲಿ ಸುಳಿದಾಡಿಯೂ ಅತ್ಯಂತಿಕನಾಗಿ ಶರಣಪರಂಪರೆಯಲ್ಲಿ ಆತ ನಿಲ್ಲುತ್ತಾನೆ. ಈತ ತನ್ನ ಲೋಕಜ್ಞಾನ ಮತ್ತು ಅನ್ವೇಷಣೆ ಮೂಲಕ ಪಡೆದ ಪಾರಮಾರ್ಥಿಕಜ್ಞಾನದಿಂದ ಪ್ರಚಂಡ ಅನುಭಾವಿಯಾಗುತ್ತಾನೆ.

ಮಡಿವಾಳಪ್ಪನ ಜ್ಞಾನ–ದಾಸೋಹದ ಪ್ರಸಿದ್ಧಿಯಿಂದ ಜಾತಿ ಮತ ಪಂಥವೆನ್ನದೆ ಎಲ್ಲವರ್ಗದ ಜನತೆ ಆತನನ್ನು ಗುರುವಾಗಿ ಒಪ್ಪಿಕೊಳ್ಳುತ್ತಾ ಹೋದಾಗ ಅಲ್ಲಿಂದ ಆತನನ್ನು ಓಡಿಸಲು ಹಿಂದಿನ ಕರ್ಮಠ ಬಸವಯ್ಯ ಮಡಿವಾಳಪ್ಪನ ಕೃಪೆಗೆ ಪಾತ್ರಳಾಗಿ ಕುಷ್ಠರೋಗ ವಿಮುಕ್ತಳಾಗಿ ಆತನ ಶಿಷ್ಯಳಾಗಿದ್ದ ಭಾಗಮ್ಮನ ಜೊತೆ ಸಂಬಂಧಕಲ್ಪಿಸುತ್ತಾನೆ. ಮೊದಲೇ ಆತನ ಜಮೀನ್ದಾರಿ ವಿರೋಧಿ ಸಾಹಿತ್ಯದಿಂದ ರೊಚ್ಚಿಗೆದ್ದಿದ್ದ ಆಕೆಯ ಅಣ್ಣ ಗೌಡ ಈಗ ಆತನ ಕೊಲೆಗೆ ಮುಂದಾಗುತ್ತಾನೆ. ಇದನ್ನರಿತ ಆಕೆ ಮಡಿವಾಳಪ್ಪನನ್ನು ತಲೆಮರೆಸಿಕೊಂಡು ಹೋಗುವಂತೆ ಕೇಳಿಕೊಂಡಾಗ ಮೊದಲಿಗೆ ಒಪ್ಪದೆ ಶರಣಬಸಪ್ಪನವರಿಗೆ ತೊಂದರೆಯಾಗಬಾರದೆಂದು ಹೋಗುತ್ತಾನೆ. ಶಿಷ್ಯರ ಒತ್ತಾಸೆಯಿಂದ ಪಕ್ಕದ ಜಂಬೇರಾಳ ದೇವಾಲಯದಲ್ಲಿ ಆಶ್ರಯ ಪಡೆಯುತ್ತಾನೆ. ಅಲ್ಲಿಗೂ ಬರುವಷ್ಟರಲ್ಲಿ ಬಾಗಮ್ಮ ಮತ್ತೆ ಎಚ್ಚರವಹಿಸಿ ಅಲ್ಲಿಂದ ತಪ್ಪಿಸಿಕೊಳ್ಳಲು ವ್ಯವಸ್ಥೆ ಮಾಡುತ್ತಾಳೆ. ಮಾಣಸೂಣಗಿ ಹಳ್ಳಿಗೆ ವಾಸ್ತವ್ಯ ಬದಲಿಸಿದರೂ ಗೌಡನ ಗುಂಡಾ ಪಡೆ ಅಲ್ಲಿಯೂ ಹೊಂಚುಹಾಕುತ್ತದೆ. ಅಷ್ಟರಲ್ಲಿ ವಿಷಯ ತಳಸಮುದಾಯದ ದುಡಿಯುವ ಜನರಿರುವ ಕಡಕೋಳದ ಅರಸ ಹಿರೇಬಸಪ್ಪ ದೊರೆ ಮತ್ತು ಆ ಊರಿನ ಗೌಡರಿಗೆ ತಿಳಿದು ತಮ್ಮೂರಿಗೆ ಅವನನ್ನು ಆಹ್ವಾನಿಸುತ್ತಾರೆ. ಅದನ್ನು ಮನ್ನಿಸಿ ಕಡಕೊಳಕ್ಕೆ ಬಂದು ಅದನ್ನೇ ಕಾರ್ಯಕ್ಷೇತ್ರವಾಗಿಸಿಕೊಂಡು ಸಮಾಜ ಬದಲಾವಣೆ ಮಾಡುತ್ತಾ ಅಲ್ಲಿಯೇ ಶಾಶ್ವತವಾಗಿ ನೆಲೆಸುತ್ತಾನೆ. ಕನ್ನಾಡಡಿನುದ್ದಕ್ಕೂ ಸಂಚರಿಸಿ ಹುಸಿ ಆಧ್ಯಾತ್ಮವಾದಿಗಳ ಬಣ್ಣ ಬಯಲಿಗೆಳೆಯುತ್ತಾನೆ. ಒಟ್ಟಾರೆ ತುಂಬಾ ದೀರ್ಘಬಾಳನ್ನು ಬಾಳಿ ಕೊನೆಗೆ ಕಡಕೋಳದಲ್ಲಿ ಜೀವಂತ ಸಮಾಧಿಗಿಳಿದನೆಂಬ ಪ್ರತೀತಿ ಇದೆ.

ಮಡಿವಾಳಪ್ಪ ಸಂಘಜೀವಿ. ಸಾಮೂಹಿಕ ಪ್ರಯತ್ನದಲ್ಲಿ ಈತನಿಗೆ ಅಪಾರ ನಂಬಿಕೆ. ಎಂತಲೆ ಅಪಾರಶಿಷ್ಯ ಬಳಗದೊಂದಿಗೆ ವ್ಯವಸ್ಥೆಯ ವಿರುದ್ಧ ಹೋರಾಟಕ್ಕಿಳಿಯುತ್ತಾನೆ. ವಿವಿಧ ಜಾತಿ ಮತ ಪಂಥಗಳಿಂದ ಬಂದಿದ್ದ ಇವರು ಸಮ ಸಮಾಜ ನಿರ್ಮಾಣಕ್ಕಾಗಿ ಗುರುವಿನೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದಿದ್ದಾರೆ. ಕಡಕೋಳ ಮಠವು ತತ್ವಪದಗಳ ಟಂಕಸಾಲೆಯಾಗಿದೆ. ತಾನು ಬರೆಯುವುದರ

ಜೊತೆಗೆ ಶಿಷ್ಯ ಸಮೂಹದಿಂದಲೂ ಬರೆಸಿದನು. ಕಡಕೊಳ ಮಠದಲ್ಲಿ ತತ್ವಸಿದ್ಧಾಂತಗಳ ಜಿಜ್ಞಾಸೆನಡೆದು ಅದರ ಉಪಸೃಷ್ಟಿಯಾಗಿ ಪದಗಳು ಮೂಡಿಬಂದಿವೆ. ಇವರೆಲ್ಲರೂ ಕವಿಯಾಗಬೇಕೆಂದು ಪದ ಬರೆದವರಲ್ಲ. ಅಂತರಂಗದ ಅನ್ವೇಷಣೆ ಮತ್ತು ವ್ಯವಸ್ಥೆಯೊಂದಿಗಿನ ಮುಖಾಮುಖಿಯಾಗಿ ಪದ ತನ್ನಷ್ಟಕ್ಕೆ ಆಕಾರ ತಳೆದಿವೆ.

ತತ್ವಪದ ಸಾಹಿತ್ಯ ಮಡಿವಾಳಪ್ಪ ಮತ್ತು ಆತನ ಶಿಷ್ಯರ ಅಪೂರ್ವ ಕಾಣಿಕೆ. ತುಂಬಾ ಹಿರಿದು ಸಂಖ್ಯೆ ಮತ್ತು ಸತ್ವದ ದೃಷ್ಟಿಯಿಂದ ಪಾತ್ರ ಹಾಗೂ ಪರಿಣಾಮದ ದೃಷ್ಟಿಯಿಂದಲೂ ಇವು ಗಮನಾರ್ಹವಾಗಿವೆ. 'ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೋ', 'ಜ್ಞಾನ ಪೂರ್ಣಂ ಜಗಂಜ್ಯೋತಿ ನಿರ್ಮಲವಾದ ಮನವೆ ಕರ್ಪೂರದಾರತಿ' ಎಂಬ ಕೃತಿಗಳಂತೂ ಅನುಭಾವಿಕ ಔನ್ನತ್ಯ ಮತ್ತು ಸಾಹಿತ್ಯಕ ಸತ್ವದ ದೃಷ್ಟಿಯಿಂದಲೂ ಶಿಖರ ಪ್ರಾಯದಂತಿವೆ. ತತ್ವಪದಪ್ರಕಾರದಲ್ಲಿಯೇ ಅತ್ಯುತ್ತಮ ಎನಿಸಬಹುದಾದ ನೂರಾರು ರಚನೆಗಳನ್ನು ಈತ ಕಾಣಿಕೆಯಾಗಿ ನೀಡಿದ್ದಾನೆ. ವಚನಗಳಲ್ಲಿ 'ನಿರುಪಮ ನಿರಾಳ ಮಹತ್ವಪ್ರಭು ಮಹಾಂತಯೋಗಿ' ಎಂಬ ಅಂಕಿತ ಬಳಸಿದರೆ, ತತ್ವಪದಗಳಲ್ಲಿ ಮಾತ್ರ 'ಮಹಾಂತ' ಎಂಬ ಗುರುನಾಮದೊಂದಿಗೆ ಒಡೆಯ, ಮೃಡ, ಈಶ, ಕರ್ತೃ, ಯೋಗಿ ಇತ್ಯಾದಿ ತರಹೆವಾರಿ ವಿಶೇಷಣಗಳನ್ನು ಬಳಸಿದ್ದಾನೆ. ೧೨೮ ವಚನಗಳನ್ನು 'ಮಹಾಂತ ನಿಜಲಿಂಗಾನುಭವ' ಎಂಬ ಕೃತಿರೂಪದಲ್ಲಿ ರಚಿಸಿದ್ದಾನೆ. ತತ್ವಪದಗಳಲ್ಲಿ ಯೋಗಮಾರ್ಗದ ಮೂಲಕ ಕಂಡುಕೊಂಡ ಕುಂಡಲಿನೀ ಅನುಭವದ ವೆಗ್ಗಳ ವಿವರಗಳು ಇರುವುದರಿಂದ ಈತ ಶಾಕ್ತಪಂಥಿ ಎಂದೂ ಭಾವಿಸುವುದಿದೆ. ಅಷ್ಟಾವರಣ, ಷಟ್ಸ್ಥಲಾದಿ ವಿವರಗಳಿರುವುದರಿಂದ ಈತ ಸ್ಥಾಪಿತ ವೀರಶೈವ ಪ್ರತಿಪಾದಕ ಎಂದೂ ಹೇಳುವುದಿದೆ. ಆಚರಣೆಗಳಲ್ಲಿ ಆರೂಢಿ ಸಾಧು ಪರಂಪರೆಯನ್ನು ಬಿಂಬಿಸುತ್ತಿದ್ದನಾಗಿ ಅವಧೂತಮಾರ್ಗಿ ಎಂದು ಕರೆಯುವುದೂ ಇದೆ. ಹಾಗೆನೋಡಿದರೆ ಮಡಿವಾಳಪ್ಪ ಇವೆಲ್ಲವೂ ಹೌದು ಮತ್ತು ಇವೆಲ್ಲವೂ ಅಲ್ಲ. ಆತ ಗೊಡ್ಡು ವೇದಾಂತಿಗಳನ್ನು ಎಂದಿಗೂ ಒಪ್ಪಿಕೊಳ್ಳಲಿಲ್ಲ. ಈತನ ಮತ್ತು ಈತನ ಪರಿವಾರದವರ ಭಾಷೆ ಒರಟು. ಅಶ್ಲೀಲವೆನ್ನುವಷ್ಟುಕ್ಕೂ ಈತನದು ಉದಾರ ಮಿಶ್ರಿತ ಕನ್ನಡ. ವೆಗ್ಗಳ, ದೇಸಿ ಪದಗಳಿಂದ ಕೂಡಿದ ಜವಾರಿಭಾಷೆ. ಭಾಷಿಕ ನೆಲೆಯಲ್ಲಿಯೂ ಬಂಡಾಯ ಸಾರಿದ್ದೇ ಈತನ ವೈಶಿಷ್ಟ್ಯ. ಈತನ ವ್ಯಕ್ತಿತ್ವಕ್ಕೆ ಹಲವು ಮುಖಗಳಿವೆ. ಈತ ಜನಪದ ಕವಿಯಾಗಿ, ಗುರುವಾಗಿ, ಘನಪಂಡಿತನಾಗಿ, ಅನುಭಾವದ ಶಿಖರವಾಗಿ, ಸಿದ್ಧಪುರುಷನಾಗಿ, ತತ್ವಜ್ಞನಾಗಿ, ಸಂಗೀತಜ್ಞನಾಗಿ, ಪವಾಡಪುರುಷನಾಗಿ, ಪ್ರತಿವಾದಿಯಾಗಿ, ಹಿತಚಿಂತಕ ಬಂಧುವಾಗಿ ಕಂಗೊಳಿಸಿದ್ದಾನೆ. ಈತನ ತತ್ವಪದಗಳ ಕಂಪು ನಾಡಿನುದ್ದಗಲಕ್ಕೂ ಪ್ರವಹಿಸಿವೆ. ಇವರ ಒಟ್ಟು ಪದಗಳ ನಿಷ್ಕರ್ಷೆ ತುಂಬಾ ಕಠಿಣ. ಒಟ್ಟು ೩೩೦೦ ಪದಗಳೆಂಬ ಹೇಳಿಕೆ ಇದೆ. ಆದರೆ ದೊರೆತ ಪದಗಳ ಸಂಖ್ಯೆ ೩೫೦ ದಾಟುವುದಿಲ್ಲ.

ಪ್ರಸ್ತುತ ಮುಡಚಟ್ಟಿನೊಳು ಬಂದು ಮುಟ್ಟಿತು... ಎಂಬ ತತ್ವಪದವು ಸಾಮಾನ್ಯರ ಅಜ್ಞಾನವನ್ನು ಕುರಿತು ಹೇಳುತ್ತಿದೆ. ಮುಟ್ಟು, ನಶ್ವರದೇಹ, ಅದರೊಳಗಿನ ಮಲಮೂತ್ರ ಮಾಂಸಗಳು ಊರಲೆಲ್ಲಾ ಅಲೆದು ತಿನ್ನುವ ಎಮ್ಮೆ ಹಾಲು ಕುಡಿವ ಮನುಷ್ಯ, ಊರ ಬಾವಿಯ ನೀರಿನ ಪಾವಿತ್ರ್ಯ ಇವೆಲ್ಲ ಮನುಷ್ಯನ ಅಜ್ಞಾನದ ಅಭಿವ್ಯಕ್ತಿಗಳಾಗಿವೆ. ಇಂಥ ದೇಹವನ್ನು ಭಗವಂತನ ಅರಿವಿನಿಂದ ಮಡಿಮಾಡಿಕೊಳ್ಳಬೇಕಾಗುತ್ತದೆ ಎಂಬ ಆಧ್ಯಾತ್ಮ ಜ್ಞಾನವನ್ನು ಹೇಳಿದ್ದಾರೆ.

## ಮುಪ್ಪಿನ ಷಡಕ್ಷರಿ

### ತಿರುಕನ ಕನಸು

ಧರೆಯ ಭೋಗವನ್ನು ಮೆಚ್ಚಿ
ಹರನ ಮರೆತು ಕೆಡಲುಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ ॥ಪ॥

ತಿರುಕನೋರ್ವನೂರಮುಂದೆ
ಮುರುಕ ಧರ್ಮಶಾಲೆಯಲ್ಲಿ
ಒರಗಿರುತ್ತಲೊಂದು ಕನಸ ಕಂಡನೆಂತೆನೆ ।
ಪುರದ ರಾಜ ಸತ್ತನವಗೆ
ವರ ಕುಮಾರರಿಲ್ಲದಿರಲು
ಕರಿಯ ಕೈಗೆ ಕುಸುಮಮಾಲೆಯಿತ್ತು ಪುರದೊಳು ॥೧॥

ನಡೆದು ಯಾರ ಕೊರಳಿನಲ್ಲಿ
ತೊಡರಿಸುವುದೊ ಅವರ ಪಟ್ಟ
ಕೊಡೆಯರನ್ನು ಮಾಳ್ಪೆವೆಂದು ಬಿಟ್ಟರಲ್ಲಿಯೆ ।
ಒಡನೆ ತನ್ನ ಕೊರಳಿನಲ್ಲಿ
ತೊಡರಿಸಲ್ಕೆ ಕಂಡು ತಿರುಕ
ಪೊಡವಿಯಾಣ್ಮನಾದೆನೆಂದು ಹಿಗ್ಗುತಿರ್ದನು ॥೨॥

ಪಟ್ಟವನ್ನು ಕಟ್ಟಿ ನೃಪರು
ಕೊಟ್ಟರವರ ಕನ್ಯೆಯರನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೇ ।
ಭಟ್ಟನಿಗಳ ಕೂಡಿ ನಲ್ಲ
ನಿಷ್ಟ ಸುಖದೊಳಿರಲವಂಗೆ
ಹುಟ್ಟಿ ಹೆಣ್ಣು ಗಂಡು ಮಕ್ಕಳಾದುವಾಗಲೇ ॥೩॥

ಓಲಗದಲಿರುತ್ತ ತೊಡೆಯ
ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ ಚಾತುರಂಗ ಬಲವನೋಡುತ ।
ಲೋಲನಾಗಿ ನುಡಿದನಿನಿತು
ಕೇಳು ಮಂತ್ರಿ ಸುತರುಗಳಿಗೆ
ಬಾಲೆಯರನು ನೋಡಿ ಮದುವೆ ಮಾಡಬೇಕಲೈ ॥೪॥

ನೋಡಿ ಬನ್ನಿರೆನಲು ಜೀಯ
ನೋಡಿಬಂದೆವೆನಲು ಬೇಗ
ಮಾಡು ಮದುವೆ ಮಂಟಪದೊಳು ಸಕಲ ಕಾರ್ಯವ ।

ಗಾಢವಾಗೆ ಸಂಭ್ರಮಗಳು
ಮಾಡುತಿದ್ದ ಮದುವೆಗಳನು
ಕೂಡಿದಖಿಳ ರಾಯರೆಲ್ಲ ಮೆಚ್ಚುವಂದದಿ ॥೫॥

ಧನದ ಮದವು ರಾಜ್ಯ ಮದವು
ತನುಜ ಮದವು ಯುವತಿ ಮದವು
ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು ।
ಅನಿತರೊಳಗೆ ನೃಪರ ಕಂಡು
ಮನೆಯ ಮುತ್ತಿದಂತೆಯಾಗಿ
ಕನಸು ಕಾಣುತಿರ್ದು ಹೆದರಿ ಕಣ್ಣ ತೆರೆದನು ॥೬॥

ಮೆರೆಯುತಿರ್ದ ಭಾಗ್ಯವೆಲ್ಲ
ಹರಿದು ಹೋಯಿತೆಂದು ತಿರುಕ
ಮರಳಿ ನಾಚುತಿರ್ದ ಮರುಳನಂತೆಯಾಗಲೇ ।
ಸಿರಿಯು ಕನಸಿನಂತೆಯೆಂದು
ಅರಿದು ಷಡಕ್ಷರಿಯ ವರನ
ಹರುಷದಿಂದ ಭಜಿಸು ನಿತ್ಯ ಸುಖವು ತಪ್ಪದು ॥೭॥

**ಕವಿ–ಕಾವ್ಯ–ವಿಚಾರ** : ವಚನಗಳನ್ನು ಹಾಡುತ್ತಿದ್ದಂತೆ ವಿಶಿಷ್ಟರಾಗತಾಳಬದ್ಧವಾದ ಅನುಭಾವಪೂರ್ಣವಾದ ಹಾಡುಗಳನ್ನು ರಚಿಸಿ ಹಾಡಿದುದು ಅನುಭಾವ ಸಾಹಿತ್ಯದಲ್ಲಿ ಹೊಸಜಾಡನ್ನು ನಿರ್ಮಿಸಿ ಮೊದಲ ವಾಗ್ಮಯಕಾರು ಆದರು. ಅದನ್ನು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಪ್ರಕಾರವನ್ನಾಗಿ 'ತತ್ತ್ವಪದಗಳು' ಅಥವಾ 'ಕೈವಲ್ಯಸಾಹಿತ್ಯ' ಎಂಬ ಹೆಸರಿನಿಂದ ಗುರುತಿಸುತ್ತೇವೆ. ಇವು ಜನಜೀವನವನ್ನು ಮುಟ್ಟಿ ಹಸನುಗೊಳಿಸುವ ಕಾರ್ಯವನ್ನು ಮಾಡಿದವು. ಇವುಗಳನ್ನು ರಚಿಸಿದವರು ಶರಣಮಾರ್ಗಾವಲಂಬಿಗಳಾದ ಅನುಭಾವಿಗಳು. ಈ ಪದಗಳು ತಮ್ಮ ಗೇಯತೆ, ನಾದ ಮಧುರ್ಯ, ಸಂಕ್ಷಿಪ್ತತೆ, ಸರಳತೆ, ತತ್ತ್ವಬೋಧೆ, ದರ್ಶನದೀಪ್ತಿಗಳಿಂದ ಜನತೆಯ ಮನವನ್ನು ಮುಟ್ಟಿ ಮಹದ ಕಡೆಗೆ ತಿರುಗಿಸುತ್ತವೆ. ೧೨ನೆಯ ಶತಮಾನದ ನಂತರ ಅದನ್ನು ಮುಂದುವರಿಸಿದವರಲ್ಲಿ ನಿಜಗುಣ ಶಿವಯೋಗಿಗಳು, ಮುಪ್ಪಿನ ಷಡಕ್ಷರಿಗಳು, ಸರ್ಪಭೂಷಣ ಶಿವಯೋಗಿಗಳು ಗಮನಾರ್ಹರಾಗಿದ್ದಾರೆ.

ಮುಪ್ಪಿನ ಷಡಕ್ಷರಿಗಳ ಜೀವನಚರಿತ್ರೆಯನ್ನು ಕುರಿತ ಖಚಿತವಾದ ವಿವರಗಳು ದೊರಕುವುದಿಲ್ಲ. ಒಂದು ರೀತಿ ಇವರು ಅಜ್ಞಾತಕವಿ. ಇವರನ್ನು ಪೂರ್ವ ಕವಿಗಳೆಂದೂ ನೆನೆದಿಲ್ಲ. ತಮ್ಮ ಪದಗಳಲ್ಲಿ ಎಲ್ಲಿಯೂ ಸ್ವಂತ ವಿಚಾರಗಳನ್ನು ಹೇಳಿಕೊಂಡಿಲ್ಲ. ಮೊದಲ ಪದ್ಯವೊಂದರಲ್ಲಿ ಮಾತ್ರ ತಮ್ಮ ಗುರುಗಳನ್ನು ಮೈಸೂರು ಜಿಲ್ಲೆಯ ಎರಗಂಬಳ್ಳಿ ಮಠದ ಸಿದ್ಧಲಿಂಗರು ಎನ್ನುತ್ತಾರೆ. ಆದ್ದರಿಂದ ಇವರೂ ಬಹುಶಃ ಆಭಾಗದವರೇ ಆಗಿರಬೇಕು! ಷಡಕ್ಷರಿಯ ದೇವರ ನಾಮದಿಂದೆನಗೆ ಅರುಹಿದಿರಿ, ಎಂಬ ಅವರ ಮಾತು ಅವರ ಮೊದಲ ಹೆಸರು ಬೇರೆ ಇದ್ದಿರಬೇಕೆಂದೂ ಗುರು ಕರುಣೆಯ ನಂತರ 'ಷಡಕ್ಷರಿ' ಎಂಬ ಹೆಸರನ್ನು ಪಡೆದಿರಬೇಕೆಂದೂ ಅದೇ ಮಠಕ್ಕೆ ಅಧಿಪತಿಗಳಾಗಿದ್ದಿರಬೇಕೆಂದೂ ಊಹಿಸಲು ಅವಕಾಶವಿದೆ. ಅಲ್ಲಿಗೆ ಸಮೀಪದ ಕೊಳ್ಳೇಗಾಲದ ಶಂಭುಲಿಂಗನ ಬೆಟ್ಟದಲ್ಲಿ ಮುಪ್ಪಿನ ಷಡಕ್ಷರಿಗಳು ತಪೋನುಷ್ಠಾನ ಗೈದರೆಂದು ಹೇಳುವ ಮುಪ್ಪಿನ ಷಡಕ್ಷರಿಗಳ ಗವಿ ಇದೆ. ಇವರ ಅಂತರಂಗ ಸಾಧನೆಯ ಆತ್ಮಕಥೆಯನ್ನು ಇವರ ಹಾಡುಗಳು ಚಿತ್ರಿಸಿವೆ. ಭಕ್ತಿಯ ಎಲ್ಲ ಮುಖಗಳೂ ಮುಖ್ಯವಾಗಿ ಮಧುರಭಕ್ತಿ ಅವರಲ್ಲಿ ಮಡುಗಟ್ಟಿದೆ. ಶರಣರ ವಚನಗಳ ಪ್ರಭಾವ ಇವರ ಮೇಲೆ ಅಗಾಧವಾಗಿದೆ. ಇವರ ಕಾಲನಿರ್ಣಯ ತುಂಬಾ

ತೊಡಕಿನದಾಗಿದೆ. ವಿದ್ವಾಂಸರು ಸುಮಾರು ಕ್ರಿ.ಶ. ೧೬೦೦ ಎಂದು ಊಹಿಸಿದ್ದಾರೆ. ಇವರ ತತ್ತ್ವಪದಗಳ ಸಂಕಲನಕ್ಕೆ ಮೊದಲಿಗೆ 'ಸುಬೋಧಸಾರ' ಎಂಬ ಹೆಸರಿದ್ದು ಅನಂತರ 'ಕೈವಲ್ಯಪದಗಳು' ಎಂದು ಕರೆಯಲಾಗಿದೆ. ಇದರಲ್ಲಿ ೮೭ ಪದಗಳಿವೆ.

ಮುಪ್ಪಿನಷಡಕ್ಷರಿಗಳು ರಚಿಸಿದ ಕೃತಿ ಒಂದೇ ಆದರೂ ಅದು ಸತ್ವಪೂರ್ಣವಾಗಿದೆ. ಅವರ ದಿವ್ಯಾನುಭವದ ಅಮರ ಗೀತೆಗಳು ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳ ಸುಂದರವಾಗಿವೆ. ಇವರ ಹಾಡುಗಳೆಲ್ಲ ಬಹುಪಾಲು ಶರ ಇಲ್ಲವೇ ಬೋಗಷಟ್ಪದಿಯಲ್ಲಿವೆ. ಇಲ್ಲಿನ ಹಾಡುಗಳು ತಿಳಿಯಾದ ಮಾಧುರ್ಯ ಮತ್ತು ಆತ್ಮೀಯತೆಗಳಿಂದ ಆಸ್ವಾದ್ಯವಾಗುತ್ತವೆ. ತಮ್ಮ ಕುಸುಮ ಕೋಮಲದಳಗಳನ್ನು ಅರಳಿಸಿ ನರುಗಂಪನ್ನು ಸೂಸುತ್ತವೆ. 'ಸಿರಿಯು ಕನಸಿನಂತೆ' ಎಂಬುದನ್ನು 'ತಿರುಕನ ಕನಸು' ಎಂಬ ಪ್ರತಿಮೆಯನ್ನೊಡ್ಡಿ ಹೇಳಿರುವುದು ತುಂಬ ಸೊಗಸಾಗಿದೆ. ಆಧ್ಯಾತ್ಮಿಕ ಮೌಲ್ಯವುಳ್ಳ ಈ ಗೀತೆ ಸುಂದರವಾಗಿದೆ. ಇದರಲ್ಲಿ ಪ್ರಾಪಂಚಿಕ ಸುಖದ ನಶ್ವರತೆಯ ಅರಿವಿದೆ.

**ಕೊಳ್ಳೂರ ಹುಸೇನ ಸಾಹೇಬ**

ಬಡತನದ ಬಡಿವ್ಯಾರ ನಮ್ಮೂರ
ಈ ಊರ ಹೆಸರ ಕಾಯಾಪೂರ
ಒಳಗ ಹಾರ ಐದು ಮಂದಿ ಗೌಡರ
ಪ್ರರಬ್ರಹ್ಮ ವಸ್ತು ಒಬ್ಬನೆ ಸರಕಾರ

ಈ ಊರ ಹೆಸರು ಕಾಯಾಪೂರ
ಹತ್ತು ಮಂದಿ ಸುತ್ತ ಸುಳಿವವರ
ಸಪ್ತವ್ಯಸನ ಜತ್ತಾಗಿ ಇರುವವರ

ಈ ಊರ ಹೆಸರು ಕಾಯಾಪೂರ
ಊರ ಅವಾರ ಪೋಣೆಂದೋನವಾರ
ಒಂಬತ್ತು ಕಿಡಕಿಗಳು ಕಟ್ಟಿ ನವದ್ವಾರ

ಈ ಊರ ಹೆಸರು ಕಾಯಾಪೂರ
ಏಕವೀಸ ಸ್ವರ್ಗ ಒಳಗ ಭರಪೂರ
ಎಂಟುಮಂದಿ ಕಾವಲುದಾರರ ಅದಾರ

ಈ ಊರ ಹೆಸರು ಕಾಯಾಪೂರ
ಪಾಡ ಕೊಳ್ಳೂರ ಪಶ್ಚಿಮಕ ಜಿಂದಾಮದಾರ
ಕೂಡಲೂರ ಸೀಮಿಧಾಟಿ ನಡೀರಿ ಭರದಾರ

೧೯೦೦-೧೯೬೪ರವರೆಗೆ ಬಾಳಿ ಬದುಕಿದ ಹುಸೇನ ಸಾಹೇಬರು ಹೈದರಾಬಾದ್ ಕರ್ನಾಟಕ ಭಾಗದ ಕೊಳ್ಳೂರು ಗ್ರಾಮದವರು. ಉರ್ದು ಭಾಷಿಕ ಕುಟುಂಬದವರಾದ ಇವರು ಪ್ರೌಢಶಾಲೆಯ ವ್ಯಾಸಂಗವನ್ನು ಮುಗಿಸಿದವರು. ತಾಯಿ ಇಮಾಮ್‌ಬಿ, ತಂದೆ ಲಾಲ ಸಾಹೇಬ. ಹುಸೇನ್ ಸಾಹೇಬರು ಕೊಳ್ಳೂರು ಭದ್ರಪ್ಪಗೌಡರ ಶಿಷ್ಯರಾಗಿದ್ದರೆಂದು ತಿಳಿದುಬಂದಿದೆ. ತತ್ತ್ವಪದಗಳೊಂದಿಗೆ, ನಾಟಕಕ್ಕೆ

ಪದಗಳನ್ನು ಹಾಗೂ ಮೊಹರಂ ಪದಗಳನ್ನು ರಚಿಸಿದ್ದಾರೆ. 'ಕೊಳ್ಳೂರ ಹುಸೇನ' 'ಕೊಳ್ಳೂರ' ಇವರ ರಚನೆಗಳ ಅಂಕಿತವಾಗಿದೆ. ಪ್ರಸ್ತುತ ಕಾಯಾಪೂರ ಎಂಬ ತತ್ವಪದದಲ್ಲಿ ಮನುಷ್ಯನದೇಹವನ್ನು ಕುರಿತು ಹೇಳಲಾಗಿದೆ.

**ಶಿಶುನಾಳ ಷರೀಫ್**

ಸೋರುತಿಹುದು ಮನೆಯ ಮಾಳಿಗೆ ।
ಅಜ್ಞಾನದಿಂದ
ಸೋರುತಿಹುದು ಮಾನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ
ದಾರಿಗಟ್ಟಿ ಮಾಳ್ಪರಿಲ್ಲ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರೆ

ಮುರುಕು ತೊಲೆಯ ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕು ಚಪ್ಪರ ಜೇರು ಗಿಂಡಿ
ಮೇಲಕೇರಿ ಮೆಟ್ಟಲಾರೆ

ಕರಕಿ ಹುಲ್ಲು ಕಸವು ಹತ್ತಿ
ದುರಿತ ಭವದಿ ಇರಬಿ ಮುತ್ತಿ
ಜಲದಿ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಈಗ ಶಿಶುನಾಳ ಗ್ರಾಮಕ
ಮೇಘ ರಾಜ ಒಲಿದು ಬಂದ

**ಕವಿ–ಕಾವ್ಯ–ವಿಚಾರ :** ತತ್ವಪಪದಕಾರರಲ್ಲಿ ಶಿಶುನಾಳ ಶರೀಫರು ಉತ್ತರ ಕರ್ನಾಟಕದ ಅಂದಿನ ಧಾರವಾಡ ಜಿಲ್ಲೆಯ ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಶಿಶುನಾಳ ಗ್ರಾಮದ ಸುಸಂಸ್ಕೃತ ದೇವಕಾರ ಮನೆತನದ ಇಮಾಮ ಹಜರತ್ ಸಾಹೇಬರು ಮತ್ತು ಅವರ ಧರ್ಮಪತ್ನಿ ಹಜ್ಜಾಮಾಳ ಮಗನಾಗಿ ಕ್ರಿ.ಶ. ೧೮೮೯ ಮಾರ್ಚಿ ೭ ರಂದು ಶರೀಫರು ಜನಿಸಿದರು. ಅವರ ಪೂರ್ಣಹೆಸರು ಮಹಮ್ಮದ ಶರೀಫ. ಹಜರತ್ ದಂಪತಿಗಳು ಬಹುಕಾಲ ಮಕ್ಕಳಿಲ್ಲದೆ ಕೊರಗಿ ಹುಲಗೂರಿನ ಸಂತಖಾದರ ಷಾವಲಿ ಅಥವಾ ಹಜರೇಶಖಾದ್ರಿ ಅಥವ ಖಾದರಲಿಂಗ ಅವರ ಸಮಾಧಿಗೆ ಭಕ್ತಿಯಿಂದ ನಡೆದುಕೊಂಡಿದ್ದರ ಫಲವಾಗಿ ಶರೀಫರು ಜನಿಸಿದರೆಂಬ ನಂಬಿಕೆಯಿದೆ. ಅವರ ತಂದೆ ಹಜರತ್ ಸಾಹೇಬರು ವೈದ್ಯವೃತ್ತಿಯನ್ನು ಮಾಡುತ್ತಿದ್ದರು. ಬಾಲ್ಯದಲ್ಲಿ ಮನೆಯಲ್ಲಿಯೇ ತಂದೆಯಿಂದ ಉರ್ದುವಿನ ಹಾಗೂ ಇಸ್ಲಾಂ ಧರ್ಮದ ಜ್ಞಾನ ಪಡೆದರು, ಜೊತೆಗೆ ಸ್ಥಳೀಯ ಕೂಲಿಮಠದಲ್ಲಿ ಹಿರೇಮಠದ

ಸಿದ್ಧರಾಮಯ್ಯ ಗುರುಗಳಿಂದ ಶಿಕ್ಷಣ ಪಡೆದರು. ಜೊತೆಗೆ ಅಲ್ಲಿ ವೀರಶೈವ ಕಾವ್ಯಗಳ ಅಧ್ಯಯನ ಮಾಡಿದರು. ಆಟಪಾಠಗಳಲ್ಲಿ ಚತುರರಾಗಿದ್ದ ಶರೀಫರು ಮುಲ್ಕಿ ಪರೀಕ್ಷೆ ಪಾಸು ಮಾಡಿದರು. ಮೋಡಿಲಿಪಿಯನ್ನೂ ಕಲಿತರು. ಸುತ್ತಲಿನ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಜಾತಿ, ಮತ, ಪಂಥಗಳೆನ್ನದೆ ಎಲ್ಲದರಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ಎಲ್ಲರ ಕಣ್ಮಣಿಯಾದರು.

ಮುಲ್ಕಿ ಪರೀಕ್ಷೆ ಪಾಸುಮಾಡಿದ ನಂತರ ಶರೀಫರು ಕೆಲಕಾಲ ಶಿಶುನಾಳ ಅಕ್ಕಪಕ್ಕದ ಅನೇಕ ಗ್ರಾಮಗಳಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಲೋಕಶಿಕ್ಷಕರಾದ ಶರೀಫರಿಗೆ ಶಾಲಾ ಕಾರ್ಯ ಚಟುವಟಿಕೆಗಳು ಕಿಷ್ಕಿಂದೆಯಾಗಿ ತೋರಿತು. ಹಾಗಾಗಿ ತಮ್ಮ ಶಾಲಾ ಶಿಕ್ಷಕ ವೃತ್ತಿಗೆ ಶರಣು ಹೊಡೆದು ತಮ್ಮ ಮನೆಯ ಮುಂದಿನ ಕಟ್ಟೆಯ ಮೇಲೆ ಸಹಪಾಠಿಗಳೊಂದಿಗೆ ಚಿಂತನ ಮಂಥನ ಮಾಡುತ್ತಿದ್ದರು. ಅದರಿಂದಲೂ ಅವರಿಗೆ ತೃಪ್ತಿ ದೊರೆಯದೆ ಗುರುವಿನ ಹುಡುಕಾಟದಲ್ಲಿದ್ದರು. ಒಮ್ಮೆ ಅವರ ತಂದೆಯ ಸ್ನೇಹಿತರು ಅಲ್ಲಿಯ ಕಲ್ಮೇಶ್ವರ ದೇವಾಲಯದ ವೈದಿಕಶಾಲೆಯ ಗುರುಗಳೂ ಆದ ಕಳಸದ ಗೋವಿಂದಭಟ್ಟರನ್ನು ನೋಡಲು ತಂದೆಯ ಜೊತೆ ಹೋಗಿದ್ದಾಗ ಚುರುಕಾಗಿದ್ದ ಬಾಲಕ ಶರೀಫರನ್ನು ಗುರುಗಳು ತಮ್ಮ ಶಿಷ್ಯನನ್ನಾಗಿ ಆಯ್ಕೆ ಮಾಡಿಕೊಂಡರು. ಹುಡುಕುತ್ತಿದ್ದ ಬಳ್ಳಿ ಕಾಲಿಗೆ ತೊಡರಿದಂತೆ ಅವರೀರ್ವರ ಸಮಾಗಮವಾಗಿ ವಿದ್ಯೆಯ ವ್ಯಾಪ್ತಿ ವಿಸ್ತಾರವಾಯಿತು.

ಸ್ಮಾರ್ತಬ್ರಾಹ್ಮಣ ಜಾತಿಗೆ ಸೇರಿದ್ದ ಗೋವಿಂದಭಟ್ಟರು ಮಹಮ್ಮದೀಯನಾದ ಶರೀಫರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಸದಾ ಅವನೊಡನೆ ಅಲೆದಾಡುವ ಸಂಗತಿ ಸ್ವಜಾತಿ ಬಾಂಧವರಿಗೆ ಹಿಡಿಸದೆ ಎರಡೂ ಕಡೆಗಳಿಂದಲೂ ಬೆದರಿಕೆ, ಬಹಿಷ್ಕಾರ ಬಂದರೂ ಜಗ್ಗದೆ ಇಬ್ಬರೂ ಸಾಧನೆಯಲ್ಲಿ ಮುಂದುವರಿದರು. ಮಗನ ಅಲೆದಾಟ, ಚಟುವಟಿಕೆಗಳು ತಂದೆತಾಯಿಗಳಿಗೆ ಚಿಂತೆಗೀಡುಮಾಡಿ ಅದಕ್ಕೆ ಪರಿಹಾರವಾಗಿ ಆತನಿಗೆ ಮದುವೆ ಮಾಡುವ ತೀರ್ಮಾನಕ್ಕೆ ಬಂದರು. ತಂದೆ ತಾಯಿಗಳ ಆಗ್ರಹ, ಗುರುವಿನ ಒಪ್ಪಿಗೆಯಿಂದ ಶರೀಫರು ಕುಂದಗೋಳ ನಾಯಕ ಮನೆತನದ ಫಾತೀಮಾಳೊಡನೆ ವಿವಾಹವಾದರು. ಪತ್ನಿಯೊಡನೆ ತುಂಬಾ ಪ್ರೀತಿಯಿಂದ ಗೌರವಾದರಗಳಿಂದ ನಡೆದುಕೊಂಡರು. ಆದಾಗ್ಯೂ ವ್ಯಾಮೋಹದ ಬಲೆಯಲ್ಲಿ ಸಿಲುಕಿರಲಿಲ್ಲ. ಅವರಿಗೆ ಒಂದು ಹೆಣ್ಣು ಮಗು ಜನಿಸಿತು. ಕೆಲವು ದಿನಗಳ ತರುವಾಯ ಮಗಳು ತೀರಿಕೊಂಡಳು; ಮೋಹದ ಹೆಂಡತಿಯೂ ತವರಿನಲ್ಲಿ ತೀರಿಕೊಂಡಳು. ಅಲ್ಲಿಗೆ ಲೌಕಿಕ ಪ್ರಪಂಚದ ಸಂಪೂರ್ಣಹಂಗನ್ನು ತೊರೆದು ಪಾರಮಾರ್ಥಿಕ ವಿಷಯಕ್ಕೇ ತಮ್ಮನ್ನು ಸಂಪೂರ್ಣ ತೆತ್ತುಕೊಂಡರು.

ಮತ್ತೆ ಗುರುವಿನ ಬಳಿ ಹೋದರು. ಕಾಲಾನುಕ್ರಮದಲ್ಲಿ ಅವರ ತಂದೆ, ತಾಯಿ, ಗುರುಗಳೂ ತೀರಿಕೊಂಡಾಗ ತೀರ್ಥಯಾತ್ರೆಕೈಗೊಳ್ಳುತ್ತಾರೆ. ತಮ್ಮ ಸಂಚಾರದುದ್ದಕ್ಕೂ ಸಮಕಾಲೀನ ಸಾಧು ಸತ್ಪುರುಷರನ್ನು ದರ್ಶಿಸಿ ಪ್ರಾಂಜಲ ಮನಸ್ಸಿನಿಂದ ಅವರ ಸದ್ಗುಣಗಳನ್ನು ಕೊಂಡಾಡಿದ್ದಾರೆ. ಶರೀಫರ ಲೌಕಿಕ ಬಾಳು ಬಂಗಾರವಾಗಿರಲಿಲ್ಲ. ಬಡತನ ಸದಾ ಅವರ ಬೆನ್ನುಬಿಡದೆ ಕಾಡಿತು. ಸಾಲಗಾರರ ಪೀಡೆ ಅವರನ್ನು ನೋಯಿಸಿತು. ಸಕಲರಿಗೆಲ್ಲ ಲೇಸನೇ ಬಯಸಿದ ಶರೀಫರು ನಿರ್ಗತಿಕರಾದಾಗ ಯಾರೂ ಅನ್ನನೀಡಲಿಲ್ಲ. ಬಡತನದ ತಂದೆತಾಯಿಗಳಿಗೆ ದುಡಿದು ಸಹಾಯಮಾಡದೆ ಉಂಡಾಡಿಯಾಗಿ ಭಾರವಾಗಿದ್ದಾನೆ ಎಂಬಿತ್ಯಾದಿ ಮಾತುಗಳಿಂದ ಅವರು ಅಧೀರರಾಗಲಿಲ್ಲ. ಆಧ್ಯಾತ್ಮಿಕ ಸಾಧಕರಾಗಿ ಮುನ್ನಡೆದರು. ಕೊನೆಗೆ ತಮ್ಮ ಅಂತ್ಯಕಾಲಕ್ಕೆ ಶರಣರಂತೆ ವಿಭೂತಿವೀಳ್ಯೆ ಮಾಡಿಸಿಕೊಂಡು ೧೮೮೯ ಮಾರ್ಚ ೨೯ರಂದು ತಮ್ಮ ೭೦ನೆಯ ವಯಸ್ಸಿನಲ್ಲಿ ಹುಟ್ಟಿದ ದಿನದಂದೇ ದೇಹತ್ಯಾಗ ಮಾಡಿದರು.

ಶರೀಫರು ಮರಣಹೊಂದಿದ ಕೂಡಲೇ ಅವರ ಅಂತ್ಯಕ್ರಿಯೆಯನ್ನು ಹಿಂದೂ ಪದ್ಧತಿಯಂತೆ ಜರುಗಿಸಬೇಕೋ ಅಥವಾ ಮುಸ್ಲಿಂ ಸಂಪ್ರದಾಯದಂತೆ ಜರುಗಿಸಿಬೇಕೋ ಎಂದು ಅವರ ಶಿಷ್ಯರಲ್ಲಿ

ಗೊಂದಲಉಂಟಾಯಿತು. ಕೊನೆಗೆ ಎರಡು ಪಂಗಡಗಳಲ್ಲಿ ಒಡಂಬಡಿಕೆಯಾಗಿ ಅಪೂರ್ವ ರೀತಿಯ ಶವಸಂಸ್ಕಾರಕ್ಕಾಗಿ ಸಿದ್ಧತೆಗಳು ನಡೆದವು. ಶವದ ಒಂದು ಕಡೆ ಕುರಾನಿನ ಪಠಣವಾದರೆ ಮತ್ತೊಂದೆಡೆ ಮಂತ್ರಗಳ ಪಠಣವಾಯಿತು. 'ಇವ ನಮ್ಮವ ಇವ ನಮ್ಮವ'ನೆನ್ನುವ ಅಭಿಮಾನದಿಂದ ಸಾವಿರಾರು ಜನರು ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡರು. ಅವರಿಚ್ಚೆಯಂತೆ ಅವರ ತಾಯಿ ತಂದೆಗಳ ಸಮಾಧಿಗಳ ಮಗ್ಗುಲಿನಲ್ಲಿಯೇ ಇವರ ಅಂತ್ಯಕಿಯೆ ನಡೆಯಿತು. ಅದು 'ಶರೀಫಗಿರಿ' ಎಂಬ ಖ್ಯಾತಿ ಪಡೆದು ಹಿಂದೂ ಮುಸ್ಲಿಂ ಬಾಂಧವರಿಬ್ಬರಿಗೂ ಪವಿತ್ರ ನೆಮ್ಮದಿಯ ತಾಣವಾಗಿದೆ. ಇಂದಿಗೂ ಅದು ನಿಂತರ ಜಾತ್ರೆ, ಪೂಜೆ, ಪುನಸ್ಕಾರಗಳಿಂದ ಜಾಗೃತಸ್ಥಳವಾಗಿದೆ.

ಶರೀಫರು ಎಷ್ಟು ಹಾಡುಗಳನ್ನು ರಚಿಸಿದ್ದಾರೆಂಬುದು ತಿಳಿಯುವುದಿಲ್ಲ. ಕನ್ನಡದ ಪದಗಳಂತೆ ಉರ್ದುವಿನಲ್ಲಿಯೂ ಅವರು ಅನೇಕ ಗೀತೆಗಳನ್ನು ರಚಿಸಿದ್ದಾರೆ. ಕನ್ನಡದಲ್ಲಿ ಒಂದು ಲೆಕ್ಕದಂತೆ ಅವರು ೪೧೯ ಪದಗಳು ನಮಗೆ ಸಿಕ್ಕಿವೆ.

ಶರೀಫರು ಕಾವ್ಯಕ್ಕಾಗಿ ಕಾವ್ಯ ಬರೆದವರಲ್ಲ. ವೀರಶೈವ ಕವಿಗಳಂತೆ ಜನ ಬದುಕಲೆಂಬ ಘನ ಉದ್ದೇಶದಿಂದ ಹಾಡಿದ ಹಾಡುಗಳೇ ಇಂದು ಶ್ರೇಷ್ಠ ಅನುಭಾವಸಾಹಿತ್ಯವಾಗಿವೆ. ಜೀವನದ ನಿತ್ಯಘಟನೆಗಳನ್ನು ವಸ್ತುವಾಗಿ ಆರಿಸಿಕೊಂಡು ಅವುಗಳಲ್ಲಿ ಸಾಮಾಜಿಕ ರೀತಿ-ನೀತಿ, ಹಾವ-ಭಾವ, ಬೆಡಗು-ಬಿನ್ನಾಣಗಳನ್ನು ಒಪ್ಪಿಟ್ಟು ಆಧ್ಯಾತ್ಮದ ಚಿಂತನೆಗಳನ್ನು ಭಕ್ತಿರಸದೊಂದಿಗೆ ಹೇಳಿದ್ದಾರೆ. ಅವು ಗೇಯವಾಗಿದ್ದು ಐಚ್ಛಿಕವಾಗಿ ಆದಿ ಅಂತ್ಯ ಪ್ರಾಸಗಳಿಂದ ಕೂಡಿದ್ದು ಹೃದಯಕ್ಕೆ ಮುಟ್ಟಿ ತಟ್ಟುತ್ತವೆ. ಅವುಗಳನ್ನು ಸ್ಥೂಲವಾಗಿ ತತ್ವಪದ, ದಂಡಕ, ಕಾಲಜ್ಞಾನ, ಲಾವಣಿ, ಹೋಳೀಪದ, ಮಂಗಳಾರತಿ, ರಿವಾಯತ್ ಎಂದು ಏಳು ವಿಭಾಗಗಳಾಗಿ ವಿಭಾಗಿಸಿದ್ದಾರೆ. ಮತ್ತೆ ಕೆಲವರು ಓದುಗರ ಅನುಕೂಲಕ್ಕಾಗಿ ಅವುಗಳನ್ನು ೧೭ ವಿಧದಲ್ಲಿ ವಿಭಾಗಿಸಿದ್ದಾರೆ. ಈ ವರ್ಗೀಕರಣ ಸುಲಭದ ಕೆಲಸವಲ್ಲ. ಉದಾಹರಣೆಗೆ 'ಬಿದ್ದಿಯಬೇ ಮುದುಕಿ' ಎಂಬ ಹಾಡನ್ನು ಶರೀಫರು ಹುಲಗೂರ ಸಂತೆಯಲ್ಲಿ ಓರ್ವ ಮುದುಕಿಯನ್ನು ಉದ್ದೇಶಿಸಿ ಹಾಡಿದ್ದರಿಂದ ಇದು ಘಟನಾತ್ಮಕ' ದಲ್ಲಿ ಬಂದರೂ ಹಾಡು ವ್ಯಾವಹಾರಿಕದಿಂದ ಪಾರಮಾರ್ಥದೆಡೆಗೆ ವಾಲುವುದರಿಂದ ಇದೊಂದು ನೀತಿಪದವೂ ಆಗುತ್ತದೆ.

'ಸೋರುತಿಹುದು ಮನೆಯ ಮಾಳಿಗಿ' ಪದದಲ್ಲಿ ಮನೆಯನ್ನು ಮನಸ್ಸಿಗೆ ಹೋಲಿಸಿದ್ದಾರೆ. ಹುಳುಕುತೊಲೆ, ಮುರುಕ ಜಂತಿ ಮೊದಲಾದವುಗಳೆಲ್ಲ ಇಂದ್ರಿಯಗಳು. ಇಂದ್ರಿಯಗಳನ್ನು ಅಂಕೆಯೊಳಗಿಡುವುದು ಮನದ ಕೆಲಸ. ಹಾಗೆ ಇಟ್ಟಾಗಲೇ ಮನೆಯ ಮಾಳಿಗಿ ಭದ್ರವಾಗುತ್ತದೆ. ಇಡೀ ಹಾಡು ಹೀಗೆ ಬಾಹ್ಯ ಮತ್ತು ಆಂತರಿಕ ಅರ್ಥವನ್ನು ಒಳಗೊಂಡು ರೂಪಕದಲ್ಲಿ ರೂಪುಗೊಂಡಿದೆ. ಕವಿಯ ರೂಪಕಶಕ್ತಿಗೆ ಇದೊಂದು ಉತ್ತಮ ಉದಾಹರಣೆ. ಎಲ್ಲರ ಗಮನಕ್ಕೂ ಸಾಮಾನ್ಯವಾಗಿ ಬರುವ ಸಂಗತಿಯೊಂದನ್ನು ಅನುಭಾವದ ಬೆಳಕಿನಲ್ಲಿ ಎತ್ತಿತೋರುವ ಶಕ್ತಿ ಸಾಮಾನ್ಯವಾದುದಲ್ಲ.

**ಶಿಶುನಾಳ :** ಧಾರವಾಡ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಒಂದು ಗ್ರಾಮ. ಬಯಲು ಗುಡಿಯ ಸ್ಥಂಭ ಮೂರ್ತಿ ಬಸವಣ್ಣ ಊರಜಾಗ್ರರು ದೇವ. ಈ ಬಸವಣ್ಣನನ್ನು 'ಶಿಶುನಾಳಧೀಶ' ನೆಂದು ಕರೆದು ಆತನೇ ತಮ್ಮೆಲ್ಲ ಕಾವ್ಯಗಳಿಗೆ ಸ್ಫೂರ್ತಿಯ ಸೆಲೆಯಾಗಿರುವನೆಂದು ಹೇಳಿ ತಮ್ಮ ಭಕ್ತಿ-ಭಾವ-ವಿನಯ ಪ್ರಕಟಿಸಿದ ಶರೀಫರಿಂದಾಗಿ ಈ ಊರಿಗೆ ಇನ್ನಷ್ಟು ಪ್ರಸಿದ್ಧಿ ಬಂದಿದೆ. ೨೦ನೆಯ ಶತಮಾನದಲ್ಲಿ ಶರೀಫರ ಸಮಾಧಿ 'ಶರೀಫ ಗಿರಿ'ಯ ಭಾವುಕರಿಗೆ ಯಾತ್ರಾಸ್ಥಳವಾಗಿದೆ.

## ಮೋಟ್ನಳ್ಳಿ ಹಸನ ಸಾಹೇಬ

**ಶಿವನೆಲ್ಲಿಲ್ಲಾ ?**

ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ ಶಿವನೆಲ್ಲಿಲ್ಲಾ ?
ನಿನ್ನ ನೀ ತಿಳಿ ನೀನೆ ಪರಬ್ರಹ್ಮನಲ್ಲಾ

ಆರು ಶಾಸ್ತ್ರದ ಓದಿದರಿಲ್ಲ
ಮೂರಾರು ಪುರಾಣ ಮುಗಿಸಿದರಿಲ್ಲ
ಘೋರ ಸಂಸಾರ ಸತಿಯಳ ಬಿಟ್ಟು
ಯಾರೂ ಇರದ ಅಡವಿ ಸೇರಿದರಿಲ್ಲ

ಗುಡ್ಡಗಂವ್ಹಾರ ಸೇರಿದರಿಲ್ಲ
ಗಡ್ಡ ಜಡೆಯ ಬಹಳ ಬೆಳಸಿದರಿಲ್ಲ
ದೊಡ್ಡವರೆಂದು ಕರ ಮುಗಿದರೂ ಇಲ್ಲ
ಗೊಡ್ಡಾಕಳಿನಂತೆ ಚರಿಸ್ಯಾಡಿದರಿಲ್ಲ

ಕರ್ಣಕೆ ನಖ ಊರಿ ಕೂಗಿದರಿಲ್ಲ
ಧರ್ಮಶಾಸ್ತ್ರ ಅಂವ ಪಠಿಸಿದರಿಲ್ಲ
ನಿರ್ಮಲ ಮನದೊಳು ಇಟಪುರೀಶನನರಿಯದೆ
ಬೆರಳೊಳು ಜಪಮಣಿ ಎಣಿಸಿದರಿಲ್ಲ

ಮೋಟ್ನಳ್ಳಿ ಹಸನ ಸಾಹೇಬರನ್ನು ಹೈದರಾಬಾದ್ ಕರ್ನಾಟಕ ಭಾಗದ ಕಲಬುರ್ಗಿಜಿಲ್ಲೆಯ ಸೇಡಂ ತಾಲೂಕಿನ ಇಟ್ಕಾಲ ಗ್ರಾಮದವನೆಂದು ಊಹಿಸಲಾಗಿದೆ. ಈತನ ಕಾಲ ೧೮೮೯ರಿಂದ ೧೯೧೪ ಎಂದು ಗುರುತಿಸಿದ್ದಾರೆ. ಈತನ ತಂದೆ ಬಯಲಾಟದ ಮಾಸ್ತರನಾಗಿದ್ದನೆಂದು ತಿಳಿದುಬಂದಿದೆ. ಕನ್ನಡ, ಉರ್ದು, ತೆಲುಗು ಭಾಷಿಕರು ಇವನ ಶಿಷ್ಯರಾಗಿದ್ದಾರೆ. 'ಇಟಪುರೀಶ' ಎನ್ನುವ ಅಂಕಿತದಲ್ಲಿ ಇವರ ರಚನೆಗಳು ಪ್ರಕಟವಾಗಿವೆ.

ಪ್ರಸ್ತುತ ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲ ಶಿವನೆಲ್ಲಿಲ್ಲಾ? ಎಂಬ ತತ್ವಪದದಲ್ಲಿ ದೇವರ ಅಸ್ತಿತ್ವಕ್ಕಾಗಿ ಎಲ್ಲೊಲ್ಲೋ ಹುಡುಕುವುದಲ್ಲ, ಆತ ನಮ್ಮ ನಮ್ಮಲ್ಲೇ ಇದ್ದಾನೆ. ಆದ್ದರಿಂದ ನಮ್ಮನ್ನು ನಾವು ತಿಳಿದರೆ ನಾವೇ ಪರಬ್ರಹ್ಮನೆನ್ನುತ್ತಾರೆ.

**ಸರ್ಪಭೂಷಣ ಶಿವಯೋಗಿ**

ಬಿಡು ಬಾಹ್ಯದೊಳು ಡಂಭವ ಮಾನಸದೊಳ
ಗೆಡವಿಡದಿರು ಶಂಭುವ
ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೆ ಮರುಳೇ?

ಜನಮೆಚ್ಚೆ ನಡೆಕೊಂಡರೇನುಂಟು ಲೋಕದಿ
ಮನಮೆಚ್ಚೆ ನಡೆಕೊಂಬುವುದೆ ಚೆಂದವು
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕಳ್ಳತನವಿಲ್ಲವಲ್ಲಾ.

ಜನರು ಮೆಚ್ಚುತೆ ನಿನ್ನ ಕೈಲಾಸಕೊಯ್ವರೆ
ಜನ ಮೆಚ್ಚದಿರೆ ಶಿವ ಬಿಡುತಿಹನೇ ?
ಜನರಿಲ್ಲಿ ನಿನ್ನನು ದೊಡ್ಡಾತನೆಂದರೆ
ಚಿನುಮಯ ಶಿವನಲ್ಲೆ ಅರಿಯನೆ ಮರುಳೆ?

ಮನದೊಳು ಶಿವ ತಾನು ಮನೆಮಾಡಿಕೊಂಡಿಹ
ಮನಮೆಚ್ಚಿ ನಡೆದರೆ ಶಿವ ಮೆಚ್ಚುವ
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗನಲ್ಲ.